# ಜಿಮ್ ಟ್ರೈನರ್ ಸಾವು! ನಾಲ್ವರ ವಿರುದ್ಧ ಕೊಲೆ ಕೇಸ್ ದಾಖಲು

• **ಉದಯವಾಹಿನಿ, ಬೆಂಗಳೂರು**

ಅಮೃತಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಕೆಂಪಾಪುರ ಪ್ರದೇಶದಲ್ಲಿರುವ ಅಪಾರ್ಟ್‌ಮೆಂಟ್ ಒಂದರಲ್ಲಿ ನಡೆದ ಹಲ್ಲೆ ಘಟನೆಯ ನಂತರ 25 ವರ್ಷದ ಜಿಮ್ ತರಬೇತುದಾರರೊಬ್ಬರು ಮೃತಪಟ್ಟಿದ್ದಾರೆ. ನಂದನ್ ಮೃತಪಟ್ಟ ದುರ್ದೈವಿಯಾಗಿದ್ದಾರೆ.

ಇವರು ತರಬೇತುದಾರರಾಗಿ ಕೆಲಸ ಮಾಡುತ್ತಿದ್ದ ಜಿಮ್‌ನ ವಾರ್ಷಿಕೋತ್ಸವದ ಸಂಭ್ರಮಾಚರಣೆಯ ನಂತರ ಈ ಘಟನೆ ನಡೆದಿದೆ. ದೂರಿನ ಪ್ರಕಾರ, ಶನಿವಾರದಂದು ಮನೆಯಿಂದ ಹೊರಡುವಾಗ, ತಡವಾದರೆ ಬೆಳಿಗ್ಗೆ ವಾಪಸಾಗುವುದಾಗಿ



ಉದಯವಾಹಿನಿ ಚಿತ್ರ

ನಂದನ್ ತಮ್ಮ ಕುಟುಂಬಕ್ಕೆ ತಿಳಿಸಿದ್ದರು ಎನ್ನಲಾಗಿದೆ. ಜಿಮ್ ವಾರ್ಷಿಕೋತ್ಸವ ಕಾರ್ಯಕ್ರಮದ ನಂತರ ನಂದನ್ ಮತ್ತು ಜಿಮ್‌ನ ಇತರ ಸಿಬ್ಬಂದಿ ಪರಿಚಯಸ್ಥರೊಬ್ಬರ ಅಪಾರ್ಟ್‌ಮೆಂಟ್‌ಗೆ ತೆರಳಿದ್ದರು. ಅಲ್ಲಿ ನಡೆದ ಜಗಳದ ವೇಳೆ ನಂದನ್ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಆರೋಪಿಸಲಾಗಿದೆ. ನಂತರ ಅವರನ್ನು ಹೆಬ್ಬಾಳದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ. ಘಟನೆಯ ಬಗ್ಗೆ ತಿಳಿದ ನಂತರ ಆಸ್ಪತ್ರೆಗೆ ತಲುಪಿದ ನಂದನ್ ಅವರ ತಾಯಿ ಮಂಜುಳಾ, ತನ್ನ ಮಗನ ದೇಹದ ಮೇಲಿನ ಗಾಯದ ಗುರುತುಗಳನ್ನು ಗಮನಿಸಿದ್ದಾರೆ.

ಬಳಿಕ ಅಪಾರ್ಟ್‌ಮೆಂಟ್‌ನಲ್ಲಿ ನಡೆದ ಜಗಳದ ವೇಳೆ ನಂದನ್ ಮೇಲೆ ಹಲ್ಲೆ ನಡೆಸಿದ್ದರಿಂದಲೇ ಅವರು ಮೃತಪಟ್ಟಿದ್ದಾರೆ ಎಂದು ಆರೋಪಿಸಿ ಅವರು ಅಮೃತಹಳ್ಳಿ ಪೊಲೀಸರಿಗೆ ದೂರು ನೀಡಿದ್ದಾರೆ.

# ಕೈಲಾದ ಸಹಕಾರ ನೀಡುವ ಪರೋಪಕಾರಿ ಗುಣಗಳನ್ನು ಬೆಳೆಸಿ

• **ಉದಯವಾಹಿನಿ, ಮಹದೇವಪುರ**

ಜನ ಸೇವೆಯನ್ನು ಶ್ರದ್ಧೆಯಿಂದ ಮಾಡೋವ ಮನೋಭಾವವನ್ನು ರೂಢಿಸಿಕೊಳ್ಳಿ ಎಂದು ಮಾಜಿ ಭೂ ನ್ಯಾಯ ಮಂಡಳಿ ಸದಸ್ಯ, ಗ್ರಾಮ ಪಂಚಾಯತಿ ಸದಸ್ಯರಾದ ಕೆ.ಎನ್. ಬಾಬುರೆಡ್ಡಿ ಅವರು ತಿಳಿಸಿದರು. ಕ್ಷೇತ್ರದ ಕೂಡತಿ ಸಮೀಪದ ಕಾಚಮಾರಕನಹಳ್ಳಿಯಲ್ಲಿ ಅವರ ಸೇವಾದಿನದೊಂದು ನೂರಾರು ಸಮಾಜಸೇವಾ ಕಾರ್ಯಗಳಿಗೆ ಚಾಲನೆ ನೀಡಿ ಮತನಾಡಿದ ಅವರು.

ನಮ್ಮ ನಾಯಕರಾದ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ಮಾರ್ಗದರ್ಶನದಲ್ಲಿ ಜನ್ಮದಿನವನ್ನು



ಉದಯವಾಹಿನಿ ಚಿತ್ರ

ಸೇವಾ ದಿನವಾಗಿಸಿಕೊಂಡು, ಬಡ ಜನರ ಕಷ್ಟಕ್ಕೆ ಸ್ಪಂದಿಸುವ ಹಾಗೂ ಕೈಲಾದ ಸಹಕಾರವನ್ನು ನೀಡುವ ಪರೋಪಕಾರಿ ಗುಣಗಳನ್ನು ಬೆಳೆಸಿಕೊಳ್ಳುವಂತೆ ಮಾಡಿದ್ದಾರೆ ಎಂದರು. ಕ್ಷೇತ್ರ ನಗರ ಮಂಡಲ ಮಾಜಿ ಅಧ್ಯಕ್ಷ ಎ.ಜಿ. ಮನೋಹರ ರೆಡ್ಡಿ ಮತನಾಡಿ, ಅನಾಥ ಮಕ್ಕಳಾಶ್ರಮ, ವೃದ್ಧಾಶ್ರಮಗಳಿಗೆ ಊಟದ ವ್ಯವಸ್ಥೆ ಕಲ್ಪಿಸಿದರು, ಯುವಕರಿಗೆ ಸ್ಪೂರ್ತಿಯಾಗುವ ಕ್ರೀಡಾ ಕೂಟಗಳನ್ನು ಸಹ ಆಯೋಜಿಸಿ, ಯಾವುದೇ ಶುಭ ಕಾರ್ಯಗಳಿಗೆ ಬೆಂಬಲ ನೀಡುವಂತ ವ್ಯಕ್ತಿ ಬಾಬು ಎಂದುರು. ಮಹದೇವಪುರ ಕ್ಷೇತ್ರದ ನೂರಾರು ಕಾರ್ಯಕರ್ತರು, ಸಮಾಜಸೇವಕರು, ರಾಜಕೀಯ ಮುಖಂಡರು, ಅಭಿಮಾನಿಗಳು ಆಗಮಿಸಿ ಶುಭಹಾರೈಸಿದರು.

## ಟ್ರಾಫಿಕ್‌ನಲ್ಲಿ ಸಿಲುಕಿ ಹೈರಾಣದ ಸಂಗೀತ ಮಾಂತ್ರಿಕ ಎ. ಆರ್.ರೆಹಮಾನ್

• **ಉದಯವಾಹಿನಿ, ಬೆಂಗಳೂರು**

ಸಿಲಿಕಾನ್ ಸಿಟಿ ಬೆಂಗಳೂರಿನ ಟ್ರಾಫಿಕ್ ಯಾರನ್ನೂ ಬಿಡಲ್ಲ, ಎಷ್ಟೇ ದೊಡ್ಡವರಾದರೂ ಇಲ್ಲಿ ಟ್ರಾಫಿಕ್‌ನಲ್ಲಿ ಕಾಯಲೇಬೇಕು. ಅಂತಹುದೇ ಬಿಸಿ ಇದೀಗ ಆಸ್ಕರ್ ಪ್ರಶಸ್ತಿ ವಿಜೇತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಗೂ ತಟ್ಟಿದ್ದು, ಟ್ರಾಫಿಕ್‌ನಲ್ಲಿ ಸಿಲುಕಿ ಹೈರಾಣಾಗಿರುವ ಘಟನೆ ನಡೆದಿದೆ. ಕಾರಿನಲ್ಲಿ ಕುಳಿತಿದ್ದ ಅವರನ್ನು ಅಭಿಮಾನಿಗಳು ಗುರುತಿಸಿ ವಿಡಿಯೋ ಮಾಡಿದ್ದಾರೆ. ಈ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿವೆ. ಹೌದು, ಇತ್ತೀಚೆಗೆ ಬೆಂಗಳೂರಿನ ವೈಟ್‌ಫೀಲ್‌ಕೆಟಿಪಿಒ ಕನ್ವೆನ್ಷನ್ ಸೆಂಟರ್‌ನಲ್ಲಿ ಎ.ಆರ್. ರೆಹಮಾನ್ ಅವರ 'ದಿ ವಂಡರ್‌ಮೆಂಟ್ ಟೂರ್' ಲೈವ್ ಮ್ಯೂಸಿಕ್ ಕಾನ್ಸರ್ಟ್ ಆಯೋಜನೆಗೊಂಡಿತ್ತು.

ಈ ಸಂಗೀತ ಕಾರ್ಯಕ್ರಮದಲ್ಲಿ ಸಾವಿರಾರು ಅಭಿಮಾನಿಗಳು ಭಾಗವಹಿಸಿ, ಸಂಗೀತ ಮಾಂತ್ರಿಕನ ಗಾನಸುಧೆಯನ್ನು ಆಲಿಸಿದ್ದಾರೆ. ಆದರೆ, ಅದ್ದೂರಿ ಕಾರ್ಯಕ್ರಮ ಮುಗಿಸಿ ಕಾರಿನಲ್ಲಿ ವಾಪಸ್ ತೆರಳುವಾಗ ಎ.ಆರ್. ರೆಹಮಾನ್ ಅವರಿಗೆ ಬೆಂಗಳೂರಿನ ಅಸಲಿ ಟ್ರಾಫಿಕ್ ದರ್ಶನವಾಗಿದೆ. ರಸ್ತೆಯಲ್ಲಿ ಸಾಲುಗಟ್ಟಿ ನಿಂತಿದ್ದ ವಾಹನಗಳ ಮಧ್ಯೆ ರೆಹಮಾನ್ ಅವರ ಕಾರು ಕೂಡ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿಕೊಂಡಿದೆ. ಕಾರಿನಲ್ಲಿ ಕುಳಿತಿದ್ದ ಎ.ಆರ್. ರೆಹಮಾನ್ ಅವರನ್ನು ಗುರುತಿಸಿದ ಅಭಿಮಾನಿಗಳು, ಅವರ ಬಳಿ ತೆರಳಿ ವಿಡಿಯೋವನ್ನು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾರೆ. ಅವರು ಕೂಡಾ ಮುಗುಳ್ನಗೆ ಬೀರುತ್ತಾ, ಅಭಿಮಾನಿಗಳ ಅಭಿಮಾನಕ್ಕೆ ಬೆರಗಾಗಿದ್ದಾರೆ.

## ಸಿಎಂ ಕಪ್ ಕಿರೀಟಕ್ಕೆ ಮುತ್ತಿಟ್ಟ ದಯಾನಂದ್ ಸಾಗರ್ ಕಾಲೇಜು



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಅಂತರ ಕಾಲೇಜು ಕ್ರಿಕೆಟ್ ಪಂದ್ಯಾವಳಿ ಸಿಎಂ ಕಪ್ ನ ಕಿರೀಟವನ್ನು ದಯಾನಂದ್ ಸಾಗರ್ ಕಾಲೇಜು ವಿದ್ಯಾರ್ಥಿಗಳು ಮುಡಿಗೇರಿಸಿಕೊಂಡಿದ್ದಾರೆ. ಸಪ್ತಗಿರಿ ಎನ್ ಪಿ ಎಸ್ ಯುನಿವರ್ಸಿಟಿ ಮತ್ತು ಡಾನ್ ಬಾಸ್ಕೋ ಕಾಲೇಜು ತಂಡದ ವಿದ್ಯಾರ್ಥಿಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನವನ್ನು ಪಡೆದಿದ್ದಾರೆ. ಕೆಪಿವೈಸಿಸಿ ರಾಜ್ಯಾಧ್ಯಕ್ಷ ಎಚ್.ಎಸ್.ಮಂಜುನಾಥ್ ಗೌಡ ಅವರ ನೇತೃತ್ವದಲ್ಲಿ ನಡೆದ ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ಪ್ರಥಮ 1 ಲಕ್ಷ, ದ್ವಿತೀಯ 75 ಸಾವಿರ ಹಾಗೂ ತೃತೀಯ 50 ಸಾವಿರ ರೂ. ನಗದು ಸಹಿತ ಆಕರ್ಷಕ ಟ್ರೋಫಿ ನೀಡಿ ಗೌರವಿಸಲಾಯಿತು. ಅಲ್ಲದೆ, ಸರಣಿಯಲ್ಲಿ ಅತ್ಯುತ್ತಮ ಪ್ರದರ್ಶನ ತೋರಿದ ಆಟಗಾರಿಗೆ ಅತ್ಯುತ್ತಮ ಬ್ಯಾಟ್ಸ್‌ಮನ್, ಅತ್ಯುತ್ತಮ ಬೌಲರ್ ಹಾಗೂ ಅತ್ಯುತ್ತಮ ಆಲ್ ರೌಂಡರ್ ಪದಕಗಳನ್ನು ನೀಡಿ ಪ್ರೋತ್ಸಾಹಿಸಲಾಯಿತು. ಅಲ್ಲದೇ, ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ವಾರ್ಡ್ ಹಂತದಲ್ಲಿ ನಡೆದ ಪಂದ್ಯಾವಳಿಯಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಗಳಿಸಿದ ನಂದಿನಿ ಲೇಔಟ್ ವಾರ್ಡ್ ಹಾಗೂ ನಾಗಪುರ ವಾರ್ಡ್ ತಂಡಗಳಿಗೆ ಆಕರ್ಷಕ ಟ್ರೋಫಿ ನೀಡಿ ಅಭಿನಂದಿಸಲಾಯಿತು. ಬಹುಮಾನ ವಿತರಿಸಿ ಮಾತನಾಡಿದ ಮಂಜುನಾಥ್ ಗೌಡ ಅವರು, ''ಕ್ರೀಡೆ ಕೇವಲ ಗೆಲುವು ಸೋಲಿನ ಸ್ಪರ್ಧೆಯಲ್ಲ; ಅದು ಶಿಸ್ತು, ಪರಿಶ್ರಮ, ತಂಡದ ಮನೋಭಾವ ಮತ್ತು ನಾಯಕತ್ವದಂತಹ ಜೀವನಮೌಲ್ಯಗಳನ್ನು ಕಲಿಸುವ ವೇದಿಕೆ. ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ಆಯೋಜಿಸಿದ 'ಸಿಎಂ ಕಪ್' ಅಂತರ ಕಾಲೇಜು ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿದ ಪ್ರತಿಯೊಬ್ಬ ವಿದ್ಯಾರ್ಥಿಯೂ ಅಭಿನಂದನೆಗೆ ಅರ್ಹರು,'' ಎಂದು ತಿಳಿಸಿದ ಅವರು, ವಿಜೇತ ತಂಡಗಳನ್ನು ಅಭಿನಂದಿಸಿದರು.

# ಕಾನೂನು ಉಲ್ಲಂಘನೆ ಮಾಡಿದ್ರೆ ಸನ್ಮಾನ ಮಾಡ್ಬೇಕಾ?

## ಗುಜರಾತ್ ಅಲ್ಲ, ದೆಹಲಿ ಅಲ್ಲ, ಉತ್ತರ ಪ್ರದೇಶವೂ ಅಲ್ಲ. ಇದು ಕರ್ನಾಟಕ. ನೀವು ಸಂವಿಧಾನವನ್ನು ಉಲ್ಲಂಘಿಸಿದರೆ, ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ

• **ಉದಯವಾಹಿನಿ, ಬೆಂಗಳೂರು**

ರಾಜ್ಯದಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ವಿಚಾರದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವಣ ಜಟಾಪಟಿ ತಾರಕಕ್ಕೇರಿರುವಂತೆಯೇ ಅರ್ಹ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲು 'ಫಾರ್ಮ್-7' ಅನ್ನು ದುರ್ಬಳಕೆ ಮಾಡಿಕೊಳ್ಳುವವರು ಕಾನೂನು ಕ್ರಮವನ್ನು ಎದುರಿಸಬೇಕಾಗುತ್ತದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸೋಮವಾರ ಎಚ್ಚರಿಕೆ ನೀಡಿದ್ದಾರೆ. ಅಲ್ಲದೆ, ಮುದ್ರಿತ ಫಾರ್ಮ್‌ಗಳನ್ನು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹೇಗೆ ಪಡೆಯಲಾಗುತ್ತಿದೆ ಮತ್ತು ಸಲ್ಲಿಸಲಾಗುತ್ತಿದೆ ಎಂದು ಅವರು ಪ್ರಶ್ನಿಸಿದ್ದಾರೆ. ಕಾನೂನು ಉಲ್ಲಂಘನೆ ಮಾಡಿದ್ರೆ ಸನ್ಮಾನ ಮಾಡ್ಬೇಕಾ? ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಿಯಾಂಕ್ ಖರ್ಗೆ, ನೀವು ಫಾರ್ಮ್-7 ಅನ್ನು ದುರುಪಯೋಗಪಡಿಸಿಕೊಂಡರೆ, ಬೃಹತ್ ಪ್ರಮಾಣದಲ್ಲಿ ಮುದ್ರಿತ ಫಾರ್ಮ್-7ಗಳನ್ನು ಹೊಂದಿದ್ದರೆ ಹಾಗೂ ಜೀವಂತವಾಗಿರುವವರನ್ನು ಮೃತಪಟ್ಟವರೆಂದು, ಇಲ್ಲಿಯೇ ವಾಸಿಸುತ್ತಿರುವವರನ್ನು ಹೊರಗಿನವರೆಂದು (ನಿವಾಸಿಗಳಲ್ಲದವರು ಎಂದು) ಘೋಷಿಸಿದರೆ, ನಾವು ನಿಮ್ಮನ್ನು ಸನ್ಮಾನಿಸಬೇಕೇ? ಎಂದು ಖಾರವಾಗಿ ಪ್ರಶ್ನಿಸಿದರು. ಬಿಜೆಪಿ ಕಾರ್ಯಕರ್ತರಿಂದ ಇಂತಹ ಬೃಹತ್ ಪ್ರಮಾಣದ ಮುದ್ರಿತ ಫಾರ್ಮ್‌ಗಳು ಬರುತ್ತಿವೆ ಎಂಬ ಆರೋಪವನ್ನು ಪ್ರಸ್ತಾಪಿಸಿದ ಸಚಿವರು, ಕಾನೂನುಗಳನ್ನು ಉಲ್ಲಂಘಿಸುವವರು ಕ್ರಮದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದರು.

**1** ಹೇಗೆ ಪಾಲಿಸಬೇಕೆಂದು ನಾನು ನಿಮಗೆ ಕಲಿಸುತ್ತೇನೆ

**2** ನಿಯಮಗಳನ್ನು ಉಲ್ಲಂಘಿಸಲು ಏಕೆ ಬಯಸುತ್ತೀರಿ

**3** ನಿಮ್ಮ ವಿರುದ್ಧ ಯಾವುದೇ ಪ್ರಕರಣ ದಾಖಲಾಗುವುದಿಲ್ಲ

ಈ ವಿಷಯವು ಕರ್ನಾಟಕಕ್ಕೆ ಸಂಬಂಧಿಸಿದ್ದಾಗಿದ್ದು, ಸಾಂವಿಧಾನಿಕ ಮತ್ತು ಚುನಾವಣಾ ನಿಬಂಧನೆಗಳ ಉಲ್ಲಂಘನೆಯು ಗಂಭೀರ ಪರಿಣಾಮಗಳನ್ನು



ಉದಯವಾಹಿನಿ ಚಿತ್ರ

> **ಸಂಬಂಧಪಟ್ಟ ವ್ಯಕ್ತಿಗಳು ಮೃತಪಟ್ಟಿದ್ದಾರೆ ಅಥವಾ ಅಲ್ಲಿನ ನಿವಾಸಿಗಳಲ್ಲ ಎಂದು ತಮಗೆ ತಪ್ಪು ಮಾಹಿತಿ ನೀಡಲಾಗಿತ್ತು ಎಂದು ಹೇಳಿ, ಚಿಕ್ಕಮಗಳೂರು, ಬೀದರ್ ಮತ್ತು ಭುವನೇಶ್ವರದ ತಹಸೀಲ್ದಾರರಂತಹ ಅಧಿಕಾರಿಗಳನ್ನು ಸಂಪರ್ಕಿಸಿ 'ನಮೂನೆ-7' ಅರ್ಜಿಗಳನ್ನು ಹಿಂಪಡೆಯಲು ಕೆಲವರು ಕೋರಿದ್ದಾರೆ ಎಂದು ತಿಳಿಸಿದರು.**
> -ಸಚಿವ ಖರ್ಗೆ

ಎದುರಿಸಬೇಕಾಗುತ್ತದೆ ಎಂದು ಸಚಿವರು ಎಚ್ಚರಿಸಿದರು. ಇದು ಗುಜರಾತ್ ಅಲ್ಲ, ದೆಹಲಿ ಅಲ್ಲ, ಉತ್ತರ ಪ್ರದೇಶವೂ ಅಲ್ಲ. ಇದು ಕರ್ನಾಟಕ. ನೀವು ಸಂವಿಧಾನವನ್ನು ಉಲ್ಲಂಘಿಸಿದರೆ, ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯ ಸಂದರ್ಭದಲ್ಲಿ ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಲು ಕೋರುವ ಹೆಚ್ಚಿನ ಸಂಖ್ಯೆಯ 'ಫಾರ್ಮ್-7' ಅರ್ಜಿಗಳಲ್ಲಿ ಹೆಸರುಗಳು, ವಿಳಾಸಗಳು ಮತ್ತು ಇಕಬಿಅ ಸಂಖ್ಯೆಗಳಂತಹ ಮತದಾರರ ವಿವರವಾದ ಮಾಹಿತಿಯನ್ನು ಹೇಗೆ ಬಳಸಲಾಗಿದೆ ಎಂಬುದನ್ನು ತಿಳಿಸುವಂತೆ ಕರ್ನಾಟಕ ಕಾಂಗ್ರೆಸ್ ಈ ಹಿಂದೆ ಭಾರತೀಯ ಚುನಾವಣಾ ಆಯೋಗವನ್ನು ಒತ್ತಾಯಿಸಿ ಹನ್ನೆರಡು ಪ್ರಶ್ನೆಗಳನ್ನು ಮುಂದಿಟ್ಟಿತ್ತು. ಇದೇ ವೇಳೆ ಮಾಜಿ ಶಾಸಕರು, ಅಭ್ಯರ್ಥಿಗಳು, ಬೂತ್ ಮಟ್ಟದ ಅಧಿಕಾರಿಗಳು ಮತ್ತು ಬೂತ್ ಮಟ್ಟದ ಅಧಿಕಾರಿಗಳಲ್ಲದವರು ಸೇರಿದಂತೆ ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರ ವಿರುದ್ಧ ಕೈಗೊಳ್ಳಲಾಗುತ್ತಿರುವ ಕ್ರಮಗಳ ಕುರಿತಾದ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಖರ್ಗೆ, ಸಾರ್ವಜನಿಕರಿಗೆ ಕಿರುಕುಳ ನೀಡಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಈ ಪ್ರಕರಣಗಳನ್ನು ಮುಂದುವರಿಸಲಾಗುತ್ತಿದೆ ಎಂದು ಹೇಳಿದರು. ಮತದಾರರ ಹೆಸರು, ವಿಳಾಸ ಮತ್ತು ಇತರ ವಿವರಗಳನ್ನು ಒಳಗೊಂಡಿರುವ ಸಾವಿರಾರು ಮುದ್ರಿತ ನಮೂನೆಗಳನ್ನು ಹೇಗೆ ಪಡೆಯಲಾಗುತ್ತಿದೆ ಎಂದು ಅವರು ಪ್ರಶ್ನಿಸಿದರು. ಕೆಲವು ಸಂದರ್ಭಗಳಲ್ಲಿ, ಜೀವಂತವಾಗಿರುವವರನ್ನು ಮೃತಪಟ್ಟವರೆಂದು ಮತ್ತು ಸ್ಥಳೀಯ ನಿವಾಸಿಗಳನ್ನು ಹೊರಗಿನವರೆಂದು ತೋರಿಸಲಾಗಿದೆ

> **ಕರ್ನಾಟಕದ ಮತದಾರರ ಪಟ್ಟಿಯಿಂದ ಸುಮಾರು 60 ಲಕ್ಷ ಮತದಾರರ ಹೆಸರನ್ನು ಕೈಬಿಡಲು ಬಿಜೆಪಿ-ಜೆಡಿ(ಎಸ್)-ಚುನಾವಣಾ ಆಯೋಗದ ಮೈತ್ರಿಕೂಟ ರೂಪಿಸಿದ ಚುನಾವಣಾ ವಂಚನೆಯ ಸಂಚು ಇದಾಗಿದೆ ಎಂದು ಸೂಚಿಸುವಂತಹ ಒಂದು ಮಾದರಿಯು ವರದಿಗಳಿಂದ ಕಂಡುಬರುತ್ತಿದೆ ಎಂದು ಆರೋಪಿಸಿದರು.** - ಸಚಿವ ಪ್ರಿಯಾಂಕ್ ಖರ್ಗೆ

### ದೇಶದ ಕಾನೂನನ್ನು ಉಲ್ಲಂಘಿಸಿ,



**ನೀವು ಕಾನೂನನ್ನು ಪಾಲಿಸದಿದ್ದರೆ, ಅದನ್ನು ಹೇಗೆ ಪಾಲಿಸಬೇಕೆಂದು ನಾನು ನಿಮಗೆ ಕಲಿಸುತ್ತೇನೆ. ನಿಯಮಗಳನ್ನು ಉಲ್ಲಂಘಿಸಲು ನೀವು ಏಕೆ ಬಯಸುತ್ತೀರಿ? ದೇಶದ ಕಾನೂನನ್ನು ಉಲ್ಲಂಘಿಸಿ, ನಿಮ್ಮ ವಿರುದ್ಧ ಯಾವುದೇ ಪ್ರಕರಣ ದಾಖಲಾಗುವುದಿಲ್ಲ ಎಂದು ಹೇಗೆ ನಿರೀಕ್ಷಿಸುತ್ತೀರಿ? ಎಂದು ಅವರು ಪ್ರಶ್ನಿಸಿದರು.**

# ತರ್ಪಣ ವಿಧಿ ಆಚರಣೆಗೆ ಶಾಸ್ತ್ರೀಯ ಅರಿವು ಅಗತ್ಯ

• **ಉದಯವಾಹಿನಿ, ಬೆಂಗಳೂರು**

ಪಿತೃಕಾರ್ಯಗಳ ಪ್ರಮುಖ ಅಂಗವಾಗಿರುವ ತರ್ಪಣ ವಿಧಿಯನ್ನು ಕೇವಲ ಸಂಪ್ರದಾಯದ ಆಚರಣೆಯಾಗಿ ನೋಡದೆ, ಅದರ ಹಿಂದಿರುವ ಶಾಸ್ತ್ರೀಯ, ಧಾರ್ಮಿಕ ಹಾಗೂ ತಾತ್ತ್ವಿಕ ಆಶಯಗಳನ್ನು ಅರಿತು ಆಚರಿಸುವುದು ಅಗತ್ಯ ಎಂದು ರಾಮಕೃಷ್ಣ ವಿವೇಕಾನಂದ ಆಶ್ರಮ, ತುಮಕೂರಿನ ಅಧ್ಯಕ್ಷರಾದ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿ ಹೇಳಿದರು. ಮಲ್ಲೇಶ್ವರಂನ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ಶುಕ್ರವಾರ ನಡೆದ 'ತರ್ಪಣ ವಿಧಿ ವಿವೇಕ' ಗ್ರಂಥ ಲೋಕಾರ್ಪಣಾ ಸಮಾರಂಭದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಪಿತೃಗಳನ್ನು ಸ್ಮರಿಸುವುದು ಭಾರತೀಯ ಸಂಸ್ಕೃತಿಯ ವಿಶಿಷ್ಟ ಪರಂಪರೆ. ಪಿತೃಕಾರ್ಯಗಳ ಹಿಂದೆ ಕೃತಜ್ಞತೆ, ಸ್ಮರಣೆ ಹಾಗೂ ಕುಟುಂಬ ಪರಂಪರೆಯೊಂದಿಗಿನ ಸಂಬಂಧವನ್ನು ಗಟ್ಟಿಗೊಳಿಸುವ ಮೌಲ್ಯಗಳಿವೆ. ಇಂತಹ ಆಚರಣೆಗಳ ಉದ್ದೇಶ ಮತ್ತು ವಿಧಾನಗಳನ್ನು ಮುಂದಿನ ಪೀಳಿಗೆಗೆ ಸರಿಯಾದ ರೀತಿಯಲ್ಲಿ ತಿಳಿಸಿಕೊಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ 'ತರ್ಪಣ ವಿಧಿ ವಿವೇಕ' ಕೃತಿ ಉಪಯುಕ್ತವಾಗಿದೆ ಎಂದು ಅವರು ಹೇಳಿದರು. ಲೋಕೋಪಯೋಗೀ ಕಾರ್ಯಗಳು ಮಕ್ಕಳು ಮಾಡಬೇಕಾದರೇ ಅದರಲ್ಲಿ ತಾಯಿಯ ಮಹತ್ವ ಬಹಳ ಇದೆ ಎಂದು ಈ ಸಂದರ್ಭದಲ್ಲಿ ಹೇಳಿದರು. ಪಿತೃಗಳನ್ನ ನೆನೆಯುವ ವಿಷಯದಲ್ಲಿ ಒಂದು ಆತ್ಮಾವಲೋಕನ ಮಾಡಿಕೊಳ್ಳುವಂತಹದು

**ತರ್ಪಣ ವಿಧಿ ವಿವೇಕ'**

**ಫ್ಲೈ ದುಬೈ ನ ಘಟನೆಯನ್ನು ಈ ಸಂದರ್ಭದಲ್ಲಿ ನೆನೆಸಿದರು. ಪಿತೃಗಳ ಬಗ್ಗೆ ಉಪಕಾರ ಸ್ಮರಣೆಯನ್ನ ಎಲ್ಲರಲ್ಲೂ ಇರಬೇಕು ಎಂದರು. ಹಾಗೂ ಆಯುರ್ವೇದದ ರೀತ್ಯಾ ಮನುಷ್ಯನ ಹುಟ್ಟಿನ ಬಗ್ಗೆ ಚರಕಸಂಹಿತೆಯನ್ನು ಉಲ್ಲೇಖಿಸಿದರು. ಶಿಕ್ಷಣ ಇಲಾಖೆಯ ನಿವೃತ್ತ ಹಿರಿಯ ಅಧಿಕಾರಿ ವೇ.ಬ್ರ. ಶ್ರೀವೆಂಕಟರಾಮ ಶಾಸ್ತ್ರಿಗಳು ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗದ ಮುಖ್ಯಸ್ಥರಾದ ಡಾ. ವಿನಯಾಚಾರ್ಯ ಪಿ. ಜ್ಯೋತಿಷಿ ವೇ.ಬ್ರ. ಶ್ರೀ ತುಮಕೂರು ಕರಣೀಕ ನರಹರಿ ಶರ್ಮ ಉಪಸ್ಥಿತರಿದ್ದರು. ಅನಂತರಾಮ ಪ್ರಕಾಶನ ವತಿಯಿಂದ ಪ್ರಕಟವಾಗಿರುವ 'ತರ್ಪಣ ವಿಧಿ ವಿವೇಕ' ಕೃತಿಯು ತರ್ಪಣ ವಿಧಿಯ ಉದ್ದೇಶ, ಪಿತೃಕಾರ್ಯದ ಮಹತ್ವ, ಅದರ ಧಾರ್ಮಿಕ ತಾತ್ತ್ವಿಕ ಹಿನ್ನೆಲೆ ಹಾಗೂ ಶಾಸ್ತ್ರೋಕ್ತ ಆಚರಣಾ ಕ್ರಮಗಳನ್ನು ಪರಿಚಯಿಸುತ್ತದೆ.**



ಉದಯವಾಹಿನಿ ಚಿತ್ರ

ಆಗಬೇಕು ಈ ದಿನದ ಕಾರ್ಯಕ್ರಮ ಎಂದು ಹೇಳಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್. ಅಹಲ್ಯಾ ಶರ್ಮ ಮುಖ್ಯ ಅತಿಥಿಗಳಾಗಿ ಮಾತನಾಡಿ, ಶಾಸ್ತ್ರಪರಂಪರೆಯ ವಿಚಾರಗಳನ್ನು ಸಾಮಾನ್ಯ ಓದುಗರಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ದಾಖಲಿಸುವುದು ಇಂದಿನ ಅಗತ್ಯವಾಗಿದೆ. ತರ್ಪಣ ವಿಧಿಯಂತಹ ಆಚರಣೆಗಳ ಕುರಿತು ಇರುವ ಸಂದೇಹಗಳಿಗೆ ಶಾಸ್ತ್ರೀಯ ಆಧಾರದಲ್ಲಿ ಸ್ಪಷ್ಟತೆ ನೀಡುವ ಕೃತಿಗಳು ಹೆಚ್ಚು ಬರಬೇಕು ಎಂದರು.

ಗ್ರಂಥಕರ್ತ ಡಾ. ಅಜಿತ್ ನಿರಂಜನ್ ವೈ.ಎ. ಮಾತನಾಡಿ, ಪಿತೃಕಾರ್ಯಗಳಿಗೆ ಸಂಬಂಧಿಸಿದ ಶಾಸ್ತ್ರೀಯ ವಿಚಾರಗಳು ಸಾಮಾನ್ಯರಿಗೂ ಸುಲಭವಾಗಿ ಅರ್ಥವಾಗಬೇಕು ಎಂಬ ಉದ್ದೇಶದಿಂದ ಕೃತಿಯನ್ನು ರೂಪಿಸಲಾಗಿದೆ. ತರ್ಪಣ ವಿಧಿಯ ಕುರಿತು ಜನರಲ್ಲಿ ಇರುವ ಗೊಂದಲ ಹಾಗೂ ಸಂದೇಹಗಳಿಗೆ ಶಾಸ್ತ್ರಾಧಾರಿತವಾಗಿ ಉತ್ತರ ನೀಡುವ ಪ್ರಯತ್ನವನ್ನು ಕೃತಿಯಲ್ಲಿ ಮಾಡಲಾಗಿದೆ ಎಂದರು. ಕಾರ್ಯಕ್ರಮಕ್ಕೆ ಎಸ್.ಎಲ್.ಎನ್. ಟ್ರಸ್ಟ್, ರಾಜಾಜಿನಗರ, ಬೆಂಗಳೂರು ಸಹಕಾರ ನೀಡಿತ್ತು. ಗಣ್ಯರು, ವಿದ್ವಾಂಸರು, ಆಧ್ಯಾತ್ಮಿಕಾಸಕ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# 2 ದಿನಗಳ ನಿರಂತರ ಶೋಧದ ಬಳಿಕ ಟೆಕ್ಕಿ ಮೃತದೇಹ ಪತ್ತೆ..!

• **ಉದಯವಾಹಿನಿ, ಬೆಂಗಳೂರು**

ಟ್ರೆಕ್ಕಿಂಗ್‌ಗೆ ತೆರಳಿದ್ದ ವೇಳೆ ಕಲ್ಲು ಕ್ವಾರಿಯ ನೀರಿನಲ್ಲಿ ಮುಳುಗಿ ನಾಪತ್ತೆಯಾಗಿದ್ದ ಸಾಫ್ಟ್‌ವೇರ್ ಇಂಜಿನಿಯರ್ ಮೃತದೇಹ ಕೊನೆಗೂ ಪತ್ತೆಯಾಗಿದೆ. ಜಿಗಣಿ ಸಮೀಪದ ಯಲ್ಲಮ್ಮನದೊಡ್ಡಿ ಬಳಿ ಅಕ್ಟೋಬರ್ 2ರಂದು ಈ ದುರಂತ ಸಂಭವಿಸಿತ್ತು, ಸತತ ಎರಡು ದಿನಗಳ ಕಾಲ ನಡೆಸಿದ ತೀವ್ರ ರಕ್ಷಣಾ ಕಾರ್ಯಾಚರಣೆಯ ನಂತರ ಮೃತದೇಹವನ್ನು ಹೊರತೆಗೆಯಲಾಗಿದೆ. ಬೆಳಗ್ಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಹಾಗೂ ಇತರ ರಕ್ಷಣಾ ತಂಡಗಳು ಮೃತದೇಹವನ್ನು ಪತ್ತೆಹಚ್ಚಿವೆ. 30 ವರ್ಷದ ವಿನಯ್ ಹಲಸೂರು ನಿವಾಸಿಯಾಗಿದ್ದು, ಮೂಲತಃ ಆಂಧ್ರಪ್ರದೇಶದವರು. ಶುಕ್ರವಾರ ಟ್ರೆಕ್ಕಿಂಗ್ ತಂಡದೊಂದಿಗೆ ಜಿಗಣಿ ಬಳಿಯ ಯಲ್ಲಮ್ಮನದೊಡ್ಡಿಗೆ ಟ್ರೆಕ್ಕಿಂಗ್‌ಗೆ ತೆರಳಿದ್ದರು. ಸುಮಾರು ಐವರು ಸದಸ್ಯರು ನೀರು ತುಂಬಿದ್ದ ಸುಮಾರು 100 ಅಡಿ ಆಳದ ಕ್ವಾರಿಗೆ ಇಳಿದಿದ್ದರು. ಈ ಕ್ವಾರಿಯಲ್ಲಿ ಸುಮಾರು 15 ವರ್ಷಗಳ ಹಿಂದೆ ಕಲ್ಲು ಗಣಿಗಾರಿಕೆ ಸ್ಥಗಿತಗೊಂಡಿತ್ತು.

ವಿನಯ್ ಅವರ ಸ್ನೇಹಿತರ ಪ್ರಕಾರ, ಎಲ್ಲರೂ ಸುಮಾರು ಒಂದು ಗಂಟೆ ಕಾಲ ಕ್ವಾರಿಯಲ್ಲಿ ಈಜುತ್ತಿದ್ದರು. ಕ್ವಾರಿಯ ಮಧ್ಯಭಾಗದಲ್ಲಿದ್ದ ವಿನಯ್ ಏಕಾಏಕಿ ಸಹಾಯಕ್ಕಾಗಿ ಕೂಗಲು ಆರಂಭಿಸಿದರು. ಆದರೆ, ರಕ್ಷಿಸುವ ಮುನ್ನವೇ ಅವರು ನೀರಿನಲ್ಲಿ ಮುಳುಗಿದ್ದರು. ತಂಡದ ಸದಸ್ಯರು ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ, ರಾಜ್ಯ ವಿಪತ್ತು ನಿರ್ವಹಣಾ ಪಡೆ ಹಾಗೂ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ಆರಂಭಿಸಿದರು.

## ಬಿಜೆಪಿ ನಾಯಕರನ್ನು ಮಂಪರು ಪರೀಕ್ಷೆಗೆ ಒಳಪಡಿಸಿ

• **ಉದಯವಾಹಿನಿ, ಬೆಂಗಳೂರು**

ದೇಶದಲ್ಲಿ ಮತಗಳ್ಳತನದ ವೋಟ್ ಚೋರಿ ಪ್ರಕರಣದ ಪ್ರಮುಖ ರೂವಾರಿಗಳು ಎಂದರೆ ಅದು ಬಿಜೆಪಿಯ ನಾಯಕರು ಹಾಗೂ ಬಿಜೆಪಿಯ ಬಿಎಲ್‌ಎ-2 ಇವರೇ ನೈಜ ಮತದಾರರ ಹಕ್ಕನ್ನು ಕಸಿಯುತ್ತಿರುವ ಮತಗಳ್ಳರು, ಇವರನ್ನು ಕೂಡಲೇ ಮಂಪರು ಪರೀಕ್ಷೆಗೆ ಒಳಪಡಿಸಬೇಕೆಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ವಿನೂತನ ಪ್ರತಿಭಟನೆ ನಡೆಸಿದರು. ಭಾರತೀಯ ಜನತಾ ಪಕ್ಷದ ನಾಯಕರು ನೈಜ ಮತದಾರರನ್ನ ತೆಗೆದು ಹಾಕಲು ಶಿಫಾರಸ್ಸು ಪತ್ರ ಕೊಟ್ಟು ಫಾರಂ 7ನ್ನು ದುರುಪಯೋಗ ಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ ಬಿಜೆಪಿ ನಾಯಕರು ಕಾರ್ಯಕರ್ತರ ಮೇಲೆ ಪ್ರಕರಣ ದಾಖಲಾಗಿದ್ದರೆ ಅದನ್ನ ತೆಗೆಯಲು ಒತ್ತಡ ಹೇರುತ್ತಿರುವ ಬಿಜೆಪಿಯ ಮತ ಗಳ್ಳರ ವಿರುದ್ಧ ಪ್ರತಿಭಟಿಸಿದರು. ದೇಶದ ಇತಿಹಾಸದಲ್ಲಿ ಮತಗಳ್ಳರನ್ನು ಹಿಡಿಯಬೇಕು ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಮುಖ್ಯಮಂತ್ರಿಗಳು ಕೆಪಿಸಿ ಅಧ್ಯಕ್ಷರು ಹಾಗೂ ಮಂತ್ರಿಗಳೆಲ್ಲರು ಸೇರಿ ಮುಖ್ಯ ಚುನಾವಣಾ ಅಧಿಕಾರಿಗಳ ಕಚೇರಿ ಬಳಿ ಮನವಿ ಸಲ್ಲಿಸಿದರೆ ಮನವಿ ಸಲ್ಲಿಸಿದ್ದನ್ನು ಪ್ರತಿಭಟನೆ ನಡೆಸಲಾಗಿದೆ.

# ಇಂದಿರಾನಗರದ ಫುಟ್ ಪಾತ್ ಸರಿಪಡಿಸಲು ಕೆನಡಾ ಪ್ರಜೆಯೇ ಬರಬೇಕಿತ್ತು !

• **ಉದಯವಾಹಿನಿ, ಬೆಂಗಳೂರು**

ಇಂದಿರಾನಗರದ 12ನೇ ಮುಖ್ಯ ರಸ್ತೆಯಲ್ಲಿರುವ ಫುಟ್‌ಪಾತ್‌ಗಳ ದುಸ್ಥಿತಿಯನ್ನು ತೋರಿಸುವ ವೀಡಿಯೊವೊಂದನ್ನು ಕೆನಡಾದ ನಿವಾಸಿ ಕೇಲೆಬ್ ಫ್ರೀಸೆನ್ ಅವರು ತಮ್ಮ 'ಎಕ್ಸ್' (ಫ) ನಲ್ಲಿ ಅಪ್‌ಲೋಡ್ ಮಾಡಿದ್ದರು.

ಈ ವೀಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ನಂತರ, 'ಗ್ರೇಟರ್ ಬೆಂಗಳೂರು ಅಥಾರಿಟಿ' ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿತು. ಫ್ರೀಸೆನ್ ಅವರು ಗುರುತಿಸಿದ್ದ ಫುಟ್‌ಪಾತ್‌ನ ಬಹುತೇಕ ಹಾನಿಗೊಳಗಾದ ಭಾಗಗಳನ್ನು ಸಿಬ್ಬಂದಿ ದುರಸ್ತಿಪಡಿಸಿದರು. ಕೈಗೊಂಡ ಕೆಲಸದ ಕುರಿತಾದ ಪ್ರತಿಕ್ರಿಯೆ ವೀಡಿಯೊವನ್ನು ಸಾರ್ವಜನಿಕವಾಗಿ ಹಂಚಿಕೊಂಡರು.

**ಅಸಮರ್ಥತೆಯ ಫಲಿತಾಂಶ**

**ಈ ರಸ್ತೆ ಭಾಗದ ಸ್ಥಿತಿಯನ್ನು ಫ್ರೀಸೆನ್ ಅಧಿಕಾರಶಾಹಿಯ ಅಸಮರ್ಥತೆಯ ಫಲಿತಾಂಶ ಎಂದು ಜರಿದಿದ್ದರು. ಇದಕ್ಕೆ ಪ್ರತಿಕ್ರಿಯೆಯಾಗಿ ಆ ಭಾಗದ ದುರಸ್ತಿಗೂ ಮುಂಚಿನ ಮತ್ತು ನಂತರದ ದೃಶ್ಯಗಳನ್ನು ಒಳಗೊಂಡ ವೀಡಿಯೊವನ್ನು ಪೋಸ್ಟ್ ಮಾಡಿತು, ಇದರಲ್ಲಿ ಹಲವಾರು ಸಿಬ್ಬಂದಿ ಕಾಣಿಸಿಕೊಂಡು ಆ ಭಾಗವನ್ನು ಸರಿಪಡಿಸಲಾಗಿದೆ ಎಂದು ತಿಳಿಸಿದರು.**

ಬೆಂಗಳೂರು ದೇಶದ ಪ್ರಮುಖ ತಂತ್ರಜ್ಞಾನ ಕೇಂದ್ರಗಳಲ್ಲಿ ಒಂದಾಗಿದ್ದು, ಅನೇಕ ಸ್ಟಾರ್ಟಪ್‌ಗಳು ಮತ್ತು ವೆಂಚರ್ ಕ್ಯಾಪಿಟಲ್ ಸಂಸ್ಥೆಗಳು ಇಲ್ಲಿವೆ. ಆದರೂ ಇಲ್ಲಿ ಇಂತಹ ಫುಟ್‌ಪಾತ್‌ಗಳಿವೆ, ಬೇರೆ ಯಾವುದೇ ದೇಶದಲ್ಲಿ ಇಂತಹ ಫುಟ್‌ಪಾತ್ ಸ್ವೀಕಾರಾರ್ಹವಲ್ಲ ಎಂದು ಅವರು ವೀಡಿಯೊದಲ್ಲಿ ಹೇಳಿದ್ದರು. ರಸ್ತೆಯಲ್ಲಿ ನಡೆಯುತ್ತಲೇ, ಮುರಿದ ಅಥವಾ ಬಳಸಲು ಸಾಧ್ಯವಾಗದ ಫುಟ್‌ಪಾತ್ ಭಾಗಗಳನ್ನು ತೋರಿಸುತ್ತಾ, ಅವುಗಳ ದುಸ್ಥಿತಿಯನ್ನು ಶೋಚನೀಯ ಎಂದು ಅವರು ಬಣ್ಣಿಸಿದ್ದರು.

ಹಾನಿಯಿಂದ ಉಂಟಾದ ಇತರ ವಿವಿಧ ಸಮಸ್ಯೆಗಳನ್ನೂ ಫ್ರೀಸೆನ್ ಎತ್ತಿ ತೋರಿಸಿದ್ದರು. ಉದಾಹರಣೆಗೆ, ಕ್ಷುದ್ರಗ್ರಹವೊಂದು ಅಪ್ಪಳಿಸಿದಾಗ ಉಂಟಾಗುವ ಕುಳಿಯಂತಿರುವ ಒಂದು ಭಾಗವನ್ನು ಅವರು ಉಲ್ಲೇಖಿಸಿದ್ದರು. ಅಲ್ಲಿ ಜನರು ಅದನ್ನು ತಾತ್ಕಾಲಿಕ ಕಸದ ತೊಟ್ಟಿಯಂತೆ ಬಳಸುತ್ತಾ ಕಸವನ್ನು ಎಸೆದಿರುವುದನ್ನು ಅವರು ವಿಡಿಯೋದಲ್ಲಿ ತೋರಿಸಿದ್ದರು.




ಉದಯವಾಹಿನಿ ಚಿತ್ರ

## ಕೃಷಿ ತಂತ್ರಜ್ಞಾನದಿಂದ ರೈತರ ಆದಾಯ ಹೆಚ್ಚಳಕ್ಕೆ ಒತ್ತು

• **ಉದಯವಾಹಿನಿ, ಬೆಂಗಳೂರು**

ಕೃಷಿ ವೆಚ್ಚ ಕಡಿಮೆ ಮಾಡಿ ರೈತರ ಆದಾಯ ಹೆಚ್ಚಿಸಲು ತಂತ್ರಜ್ಞಾನ, ನಾವೀನ್ಯತೆ ಮತ್ತು ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಅಗ್ರಿಕಾನ್ ಹಾರ್ಟಿಕನೆಕ್ಟ್ ಇಂಡಿಯಾ 2026 ಉದ್ಘಾಟಿಸಿ ಅವರು ಮಾತನಾಡಿದರು.

ಮೂರು ದಿನಗಳ ಈ ಪ್ರದರ್ಶನದಲ್ಲಿ ರೈತರು, ವಾಣಿಜ್ಯ ಬೆಳೆಗಾರರು, ಎಫ್‌ಪಿಒಗಳು, ತಂತ್ರಜ್ಞಾನ ಪೂರೈಕೆದಾರರು, ಖರೀದಿದಾರರು ಹಾಗೂ ಕೃಷಿ ಸಂಸ್ಥೆಗಳು ಒಂದೇ ವೇದಿಕೆಯಲ್ಲಿ ಸೇರಿವೆ. ಸಂರಕ್ಷಿತ ಕೃಷಿ, ನೀರಾವರಿ, ಕೃಷಿ ಯಂತ್ರೋಪಕರಣ, ಬೀಜ, ಅಗ್ರಿಟೆಕ್, ಕೊಯ್ಲೋತ್ತರ ತಂತ್ರಜ್ಞಾನ, ಹಣಕಾಸು ಮತ್ತು ರಫ್ತು ಸೇರಿದಂತೆ ವಿವಿಧ ಕ್ಷೇತ್ರಗಳ 200ಕ್ಕೂ ಹೆಚ್ಚು ಬ್ರ್ಯಾಂಡ್‌ಗಳು ಭಾಗವಹಿಸಿವೆ. ದೇಶ-ವಿದೇಶಗಳಿಂದ 25 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆಯಿದ್ದು, ಕರ್ನಾಟಕ ಹಾಗೂ ನೆದರ್ಲೆಂಡ್ಸ್ ಪೆವಿಲಿಯನ್‌ಗಳು ಪ್ರಮುಖ ಆಕರ್ಷಣೆಯಾಗಿವೆ. ನೆದರ್ಲೆಂಡ್ಸ್‌ನ 18 ಸಂಸ್ಥೆಗಳು ಪ್ರದರ್ಶನದಲ್ಲಿ ಪಾಲ್ಗೊಂಡಿವೆ. ರೈತರಿಗೆ ಹೊಸ ತಂತ್ರಜ್ಞಾನ ಪರಿಚಯಿಸುವುದರ ಜತೆಗೆ, ಉತ್ಪನ್ನಗಳ ಬಳಕೆ, ನಿರ್ವಹಣಾ ವೆಚ್ಚ ಹಾಗೂ ಮಾರಾಟೋತ್ತರ ಸೇವೆಗಳ ಕುರಿತು ಮಾಹಿತಿ ಪಡೆಯಲು ಈ ಪ್ರದರ್ಶನ ಸಹಕಾರಿಯಾಗಲಿದೆ. ರೈತರು ಮತ್ತು ಖರೀದಿದಾರರ ನೇರ ಸಂಪರ್ಕದಿಂದ ಮಾರುಕಟ್ಟೆ ಅವಕಾಶಗಳು ಹೆಚ್ಚಲಿವೆ.

# ಸಂಸ್ಕಾರ, ಸಂಸ್ಕೃತಿ, ಶಿಕ್ಷಣದಿಂದ ಮಾತ್ರ ದೇಶ ಕಟ್ಟಲು ಸಾಧ್ಯ

## ದೊಡ್ಡ ಸಮುದಾಯಗಳು, ಸಣ್ಣ ಸಮುದಾಯಗಳನ್ನು ನುಂಗಿ ಹಾಕುತ್ತಿವೆ. ಸಣ್ಣ ಸಮುದಾಯಗಳು ನಿರ್ಲಕ್ಷಕ್ಕೆ ಒಳಗಾಗಿದ್ದವು

• **ಉದಯವಾಹಿನಿ, ಕೆಂಗೇರಿ**

ಹಳ್ಳಿಕಾರ ಸಮುದಾಯವನ್ನು ಪ್ರವರ್ಗ -1ಕ್ಕೆ ಸೇರಿಸಲಾಗುವುದು. ಇದರಿಂದ ನಿರ್ಲಕ್ಷಕ್ಕೆ ಒಳಗಾದವರಿಗೆ ಸಹಾಯವಾಗಲಿದೆ ಎಂದು ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಅವರು ಹೇಳಿದರು. ಶ್ರೀಮತಿ ರಂಗಮ್ಮ, ಶ್ರೀ ಮುನಿರಂಗಪ್ಪ ( ಆರ್. ಎಂ. ಆರ್.) ಹಳ್ಳಿಕಾರ್ ಫೌಂಡೇಶನ್ ಟ್ರಸ್ಟ್ ರಾಜಮಟ್ಟದ 2025-2026ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಯಲ್ಲಿ ಉತ್ತೀರ್ಣರಾದ ಹಳ್ಳಿಕಾರ ಸಮುದಾಯದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿವೇತನ ವಿತರಣಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದ ಅವರು ಸಂಸ್ಕಾರ, ಸಂಸ್ಕೃತಿ ಉಳಿಸುವ, ಸಮಾಜಕ್ಕೆ ಒಳಿತಾಗುವ ಶಿಕ್ಷಣ ಹಾಗೂ ಉತ್ತಮ ಶಿಕ್ಷಣ ಪಡೆದ ಪ್ರತಿಭಾವಂತರಿಂದ ಮಾತ್ರ ದೇಶ ಕಟ್ಟಲು ಸಾಧ್ಯ ಎಂದರು.

**1** ಸಂಸ್ಕೃತಿ ಸಮಾಜಕ್ಕೆ ಒಳಿತಾಗುವ ಶಿಕ್ಷಣ

**2** ಪ್ರಾವರ್ಗ 1 ಕ್ಕೆ ನಮ್ಮ ಸರ್ಕಾರ ಸೇರಿಸಲಿದೆ

**3** ಪರಿಶಿಷ್ಟ ಜಾತಿ ಸಹಾಯ ಸರ್ಕಾರ ಮಾಡುತ್ತಿವೆ

ದೊಡ್ಡ ಸಮುದಾಯಗಳು, ಸಣ್ಣ ಸಮುದಾಯಗಳನ್ನು ನುಂಗಿ ಹಾಕುತ್ತಿವೆ. ಸಣ್ಣ ಸಮುದಾಯಗಳು ನಿರ್ಲಕ್ಷಕ್ಕೆ ಒಳಗಾಗಿದ್ದವು, ಚಿನ್ನಸ್ವಾಮಿ, ವೆಂಕಟಸ್ವಾಮಿ, ಕಾಂತರಾಜು ಆಯೋಗಗಳನ್ನು ನೇಮಕ ಮಾಡಿ ನಿರ್ಲಕ್ಷಕ್ಕೆ ಒಳಗಾದ ಅತಿ ಹಿಂದುಳಿದ ಸಣ್ಣ ಸಮುದಾಯ, ಪರಿಶಿಷ್ಟ ಜಾತಿ ವರ್ಗಗಳಿಗೆ ಸಹಾಯವನ್ನು



ಉದಯವಾಹಿನಿ ಚಿತ್ರ

ಸರ್ಕಾರಗಳು ಮಾಡುತ್ತಿವೆ. ಅತಿ ಕಡಿಮೆ ಜನಸಂಖ್ಯೆ ಇರುವ ಹಳ್ಳಿಕಾರ ಸಮುದಾಯವನ್ನು ಪ್ರಾವರ್ಗ 1 ಕ್ಕೆ ನಮ್ಮ ಸರ್ಕಾರ ಸೇರಿಸಲಿದೆ ಎಂದು ಭರವಸೆ ನೀಡಿದ ಅವರು ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಜೊತೆಯಲ್ಲಿ ಚರ್ಚಿಸಿ ನ್ಯಾಯ ದೊರಕಿಸಿ ಕೊಡುತ್ತೇನೆ ಎಂದರು. ಸಂವಿಧಾನದಲ್ಲಿ ಎಲ್ಲಾ ಸಮುದಾಯಗಳಿಗೆ ಪ್ರಾಶಸ್ತ್ಯ ನೀಡಲಾಗಿದೆ ಎಂದರು. ಶಿಕ್ಷಣ ಕ್ಷೇತ್ರದ ಕ್ರಾಂತಿಯ ಹರಿಕಾರ, ಮಾರ್ಗದರ್ಶಕರಾಗಿ ಶೈಕ್ಷಣಿಕ ಪ್ರಗತಿಗೆ 2500 ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಸುಮಾರು 7 ಕೋಟಿ ರೂಪಾಯಿಗಳನ್ನು ಪ್ರತಿಭಾ ಪುರಸ್ಕಾರವಾಗಿ ನೀಡುತ್ತಿರುವ ಕೆ.ಎಂ. ನಾಗರಾಜ್ ಅವರ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ. ರೇವಣ್ಣ ಮಾತನಾಡಿ ಹಳ್ಳಿಕಾರ ಸಮಾಜವನ್ನು ಮುಂಚೂಣಿಗೆ ತರುವಲ್ಲಿ ನಾಗರಾಜ್ ಬಹು ಮುಖ್ಯ ಪಾತ್ರ ವಹಿಸಿದ್ದಾರೆ. ರೈತ ಕುಟುಂಬಗಳಿಗೆ ನೆರವಾಗಲು ದೊಡ್ಡ ಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭ ಆಯೋಜಿಸಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಸಂಪೂರ್ಣ ಅಂಕ ಪಡೆದ 6 ವಿದ್ಯಾರ್ಥಿಗಳಿಗೆ ತಲಾ 25 ಸಾವಿರ, ಶೇ.90ಕ್ಕಿಂತ ಹೆಚ್ಚಿನ ಅಂಕ ಪಡೆದ 76 ವಿದ್ಯಾರ್ಥಿಗಳಿಗೆ ತಲಾ 10 ಸಾವಿರ, ಉತ್ತಮ ಅಂಕ ಪಡೆದ ಸಮುದಾಯದ 850 ವಿದ್ಯಾರ್ಥಿಗಳಿಗೆ ತಲಾ 5 ಸಾವಿರ ರೂಪಾಯಿಗಳನ್ನು ವಿತರಣೆ ಮಾಡಲಾಯಿತು. ಜೊತೆಗೆ ಪೋಷಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ ಸಚಿವ ಟಿ. ರಘುಮೂರ್ತಿ, ಶಾಸಕರಾದ ಟಿ.ಬಿ. ಜಯಚಂದ್ರ, ಮುಖಂಡ ಕೆ. ಎನ್. ಹರೀಶ್ ಬಿಬಿಎಂಪಿ ಮಾಜಿ ಸದಸ್ಯ ಸಿ. ದಾಸೇಗೌಡ, ಟ್ರಸ್ಟಿನ ಪದಾಧಿಕಾರಿಗಳಾದ ಮಾರುತಿ, ಎನ್. ನಾರಾಯಣ ಮೂರ್ತಿ, ಶ್ರೀನಿವಾಸ ಮೂರ್ತಿ, ಮತ್ತಿತರರು ಉಪಸ್ಥಿತರಿದ್ದರು.

> **ಜಾತಿ ಗಣತಿ ವರದಿ ಮೇರೆಗೆ ನಿರ್ಲಕ್ಷಕ್ಕೆ ಒಳಗಾದ ಸಣ್ಣ ಹಳ್ಳಿಕಾರ ಸಮುದಾಯವನ್ನು ಹಿಂದುಳಿದ ವರ್ಗಕ್ಕೆ ಸೇರಿಸಬೇಕು, ಬೆಂಗಳೂರನ್ನು ಕಸ ಮುಕ್ತ ನಗರವನ್ನಾಗಿ ರೂಪಿಸಬೇಕು ಎಂದು ಉಪ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು.** - ಕೆ.ಎಂ. ನಾಗರಾಜ್

> **ಸಮುದಾಯದ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಸದುದ್ದೇಶದಿಂದ ಹಳ್ಳಿಕಾರ ಫೌಂಡೇಶನ್ ಟ್ರಸ್ಟ್ ರಾಜ್ಯದ 10 ಜಿಲ್ಲೆಯ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರಗತಿಗೆ ಸಹಾಯಹಸ್ತ ಚಾಚುತ್ತಿದೆ ಎಂದರು.** -ಸಚಿವ ರಾಮಲಿಂಗಾ ರೆಡ್ಡಿ

## MRPಗಿಂತ ದುಪ್ಪಟ್ಟು ದರಕ್ಕೆ ಮದ್ಯ ಮಾರಾಟ : ಲಕ್ಷ್ಮಿ ವೆಂಕಟೇಶ್ವರ ವೈನ್ಸ್ ವಿರುದ್ಧ ಗ್ರಾಹಕರ ಆಕ್ರೋಶ

• ಉದಯವಾಹಿನಿ, ಗುಂಡ್ಲುಪೇಟೆ

ಬೊಮ್ಮಲಾಪುರ ಗ್ರಾಮದ ಲಕ್ಷ್ಮಿ ವೆಂಕಟೇಶ್ವರ ವೈನ್ಸ್‌ನಲ್ಲಿ ಮದ್ಯವನ್ನು ನಿಗದಿತ ಎಂಆರ್‌ಪಿ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದ್ದು, ಗ್ರಾಹಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ವೈನ್ಸ್‌ನಲ್ಲಿ ಮದ್ಯ ಖರೀದಿಸಿದ ಗ್ರಾಹಕರಿಂದ ಮದ್ಯದ ನಿಗದಿತ ಬೆಲೆಯ ಜೊತೆಗೆ ಹೆಚ್ಚುವರಿ ಶುಲ್ಕ ವಸೂಲಿ ಮಾಡಲಾಗಿದೆ ಎನ್ನಲಾಗಿದೆ. 650 ಎಂಎಲ್ ಯುಬಿ ಸ್ಟ್ರಾಂಗ್ ಬಿಯರ್‌ಗೆ ರೂ 135 ಹಾಗೂ 90 ಎಂಎಲ್ ಚಾಯ್ಸ್ ವಿಸ್ಕಿಗೆ ರೂ 110 ದರ ಇದ್ದರೂ, ಎರಡಕ್ಕೂ ಸೇರಿ ಒಟ್ಟು ರೂ 270 ವಸೂಲಿ ಮಾಡಲಾಗಿದೆ ಎಂದು ಗ್ರಾಹಕರು ಆರೋಪಿಸಿದ್ದಾರೆ. ಅಂದರೆ ನಿಗದಿತ ದರಕ್ಕಿಂತ ಹೆಚ್ಚುವರಿಯಾಗಿ 25 ರೂ ವಸೂಲಿ ಮಾಡಲಾಗಿದೆ ಎಂದು



ಉದಯವಾಹಿನಿ ಚಿತ್ರ

ದೂರಲಾಗಿದೆ. ಹೆಚ್ಚುವರಿಯಾಗಿ ವಿಧಿಸಿರುವ 25ರ ಲೆಕ್ಕವನ್ನು ಪ್ರಶ್ನಿಸಿದ ಗ್ರಾಹಕರಿಗೆ ಅಂಗಡಿಯಾತ ಉಡಾಫೆಯ ಉತ್ತರ ನೀಡಿದ್ದಾರೆ ಎನ್ನಲಾಗಿದ್ದು, ಇದರಿಂದ ಗ್ರಾಹಕರು ಮತ್ತಷ್ಟು ಆಕ್ರೋಶಗೊಂಡಿದ್ದಾರೆ. ಸಿಎಲ್-2 ವೈನ್ಸ್‌ಗಳಲ್ಲಿ ಮದ್ಯವನ್ನು ನಿಗದಿತ ಎಂಆರ್‌ಪಿ ದರದಲ್ಲಿಯೇ ಮಾರಾಟ ಮಾಡಬೇಕೆಂಬ ನಿಯಮವಿದ್ದರೂ, ಗಾಳಿಗೆ ತೂರಿ ಗ್ರಾಹಕರಿಂದ ಹೆಚ್ಚುವರಿ ಹಣ ವಸೂಲಿ ಮಾಡಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ. ಗ್ರಾಹಕರಿಂದ ಹೆಚ್ಚುವರಿ ಹಣ ವಸೂಲಿ ಮಾಡಲಾಗುತ್ತಿದೆ ಎಂಬ ದೂರುಗಳು ಕೇಳಿಬರುತ್ತಿದ್ದರೂ, ಸಂಬಂಧಪಟ್ಟ ಅಬಕಾರಿ ಇಲಾಖೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೆ ಮೌನ ವಹಿಸಿರುವುದು ಏಕೆ? ಎಂಬ ಪ್ರಶ್ನೆಯನ್ನು ಗ್ರಾಹಕರು ಮುಂದಿಟ್ಟಿದ್ದಾರೆ.

ಈ ಬಗ್ಗೆ ಅಬಕಾರಿ ಇಲಾಖೆ ಅಧಿಕಾರಿಗಳು ತಕ್ಷಣ ಪರಿಶೀಲನೆ ನಡೆಸಿ, ನಿಯಮ ಉಲ್ಲಂಘನೆ ಕುರಿತು ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಗ್ರಾಹಕರಿಂದ ವಸೂಲಿ ಮಾಡಿರುವ ಹೆಚ್ಚುವರಿ ಹಣದ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

## ಆಹಾರ ಉತ್ಪಾದನೆ, ಮೇವು, ಕುಡಿಯುವ ನೀರಿನ ಕೊರತೆ ಸಾಧ್ಯತೆ

• ಉದಯವಾಹಿನಿ, ಮಡಿಕೇರಿ

ಎಲ್ ನಿನೋ ಪರಿಸ್ಥಿತಿಯಿಂದ ಉಂಟಾಗುತ್ತಿರುವ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳು ಮುಂದಿನ ಎರಡು-ಮೂರು ತಿಂಗಳಲ್ಲಿ ತೀವ್ರ ಪರಿಣಾಮ ಬೀರುವ ಸಾಧ್ಯತೆಯಿದ್ದು, ಆಹಾರ ಉತ್ಪಾದನೆಯಲ್ಲಿ ಕೊರತೆ ಉಂಟಾಗಬಹುದು ಎಂದು ಕೃಷಿ ಸಚಿವ ಪಿ.ಎಂ. ನರೇಂದ್ರ ಸ್ವಾಮಿ ಎಚ್ಚರಿಕೆ ನೀಡಿದ್ದಾರೆ.ಎಲ್ ನಿನೋ ಪರಿಣಾಮದಿಂದ ಇಡೀ ಜಗತ್ತು ಹವಾಮಾನ ವೈಪರೀತ್ಯವನ್ನು ಎದುರಿಸುತ್ತಿದೆ. ಆಹಾರದ ಕೊರತೆಯ ಜತೆಗೆ ಜಾನುವಾರುಗಳಿಗೆ ಮೇವಿನ ಅಭಾವ, ಕುಡಿಯುವ ನೀರಿನ ಕೊರತೆ ಸೇರಿದಂತೆ ಹಲವು ಪ್ರತಿಕೂಲ ಪರಿಣಾಮಗಳು ಉಂಟಾಗುವ ಸಾಧ್ಯತೆ ಇದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

# ಅರಮನೆಗೆ ಅಭಿಮನ್ಯು 'ನಿಶಾನೆ' ಆನೆಯಾಗಿ ಎಂಟ್ರಿ

### ಜಂಬೂ ಸವಾರಿಯ ಸಂದರ್ಭದಲ್ಲಿ ನಿಶಾನೆ ಆನೆಗೆ ವಿಶೇಷ ಸ್ಥಾನವಿದ್ದು, ಆನೆಗಳ ತಂಡದ ಮೆರವಣಿಗೆಗೆ ಅದು ಮುನ್ನಡೆ ನೀಡುತ್ತದೆ.

• ಉದಯವಾಹಿನಿ, ಮೈಸೂರು

1 ಅಭಿಮನ್ಯು ಇರಬೇಕೆಂಬ ಅಭಿಮಾನಿಗಳ ಆಸೆ

2 ಮೈಸೂರು ಅರಮನೆಯಲ್ಲಿ ಸಾಂಪ್ರದಾಯಿಕ

3 ದಸರಾ ಅಭಿನವ ಗವಿಶ್ರೀಗೆ ಅಧಿಕೃತ ಆಹ್ವಾನ

ಮೈಸೂರು ದಸರಾ ಮಹೋತ್ಸವಕ್ಕೆ ಸಿದ್ಧತೆಗಳು ಭರದಿಂದ ಸಾಗುತ್ತಿದ್ದು, ದಸರಾ ಮಹೋತ್ಸವದಲ್ಲಿ ಹಲವು ವರ್ಷಗಳಿಂದ ಭಾಗವಹಿಸುತ್ತಿರುವ ಹಿರಿಯ ಆನೆ ಅಭಿಮನ್ಯು ಇಂದು ಬೆಳಗ್ಗೆ ಮೈಸೂರು ಅರಮನೆ ಪ್ರವೇಶಿಸಿದೆ.

2026ರ ಮೈಸೂರು ದಸರಾ ಮಹೋತ್ಸವಕ್ಕೆ ಅಭಿಮನ್ಯುವನ್ನು ನಿಶಾನೆ ಆನೆಯಾಗಿ ಆಯ್ಕೆ ಮಾಡಲಾಗಿದೆ. ಜಂಬೂ ಸವಾರಿಯ ಸಂದರ್ಭದಲ್ಲಿ ನಿಶಾನೆ ಆನೆಗೆ ವಿಶೇಷ ಸ್ಥಾನವಿದ್ದು, ಆನೆಗಳ ತಂಡದ ಮೆರವಣಿಗೆಗೆ ಅದು ಮುನ್ನಡೆ ನೀಡುತ್ತದೆ.

ದಸರಾ ಮಹೋತ್ಸವದ ಸಿದ್ಧತೆಗಳ ಈ ಹಂತದಲ್ಲಿ ಮೈಸೂರು ಅರಮನೆ ಪ್ರಮುಖ ಕೇಂದ್ರವಾಗಿದ್ದು, ಅದ್ಧೂರಿ ಉತ್ಸವಕ್ಕೆ ನಗರ ನಿಧಾನವಾಗಿ ಸಜ್ಜಾಗುತ್ತಿರುವುದು ಕಂಡುಬರುತ್ತಿದೆ. ಈ ಬಾರಿಯ ದಸರಾ ಮಹೋತ್ಸವದಲ್ಲಿ ಅಭಿಮನ್ಯು ಭಾಗವಹಿಸುತ್ತಿರುವುದು ಅಭಿಮಾನಿಗಳಿಗೆ ವಿಶೇಷ ಮಹತ್ವದ್ದಾಗಿದೆ. ಹಿರಿಯ ಆನೆ ಅಭಿಮನ್ಯು ಮೈಸೂರು ದಸರಾ ಮಹೋತ್ಸವದಲ್ಲಿ ಭಾಗವಹಿಸಿ, ಬಳಿಕ ದಸರಾ ಕಾರ್ಯಕ್ರಮಗಳಿಂದ ವಿದಾಯ ಪಡೆಯಬೇಕು ಎಂಬುದು ಅಭಿಮಾನಿಗಳ ಒತ್ತಾಯವಾಗಿತ್ತು. ದಸರಾ ಮಹೋತ್ಸವದೊಂದಿಗೆ ಅಭಿಮನ್ಯು ಹೊಂದಿರುವ ದೀರ್ಘಕಾಲದ ನಂಟಿಗೆ ಅಂತಿಮ ವಿದಾಯ ಹೇಳುವ ಮುನ್ನ, ಈ ಬಾರಿಯ ಉತ್ಸವದಲ್ಲಿ ಅದು ಭಾಗವಹಿಸಬೇಕು ಎಂದು ಅಭಿಮಾನಿಗಳು ಬಯಸಿದ್ದರು. ಇದೀಗ ಅಭಿಮಾನಿಗಳ ಆಸೆಯಂತೆ ಅಭಿಮನ್ಯು


ಉದಯವಾಹಿನಿ ಚಿತ್ರ

> ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಸಚಿವರು ಹಾಗೂ ಶಾಸಕರೊಂದಿಗೆ ಸಭೆ ನಡೆಸಲಾಗಿತ್ತು. ಈ ಸಭೆಯಲ್ಲಿ ಈ ವರ್ಷದ ಮೈಸೂರು ದಸರಾ ಮಹೋತ್ಸವವನ್ನು ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿಯವರು ಉದ್ಘಾಟಿಸಬೇಕು ಎಂದು ಮುಖ್ಯಮಂತ್ರಿ ನಿರ್ಧರಿಸಿ ಘೋಷಣೆ ಮಾಡಿದ್ದರು. -ಡಿ.ಕೆ. ಶಿವಕುಮಾರ್

**ಜಂಬೂ ಸವಾರಿಯಲ್ಲಿ ನಿಶಾನೆ**

ಈ ಬಾರಿಯ ಮೈಸೂರು ದಸರಾ ಮಹೋತ್ಸವವು ಉತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ಜಂಬೂ ಸವಾರಿಯೊಂದಿಗೆ ಸಮಾಪನಗೊಳ್ಳಲಿದೆ. ಈ ಬಾರಿಯ ಜಂಬೂ ಸವಾರಿಯಲ್ಲಿ ನಿಶಾನೆ ಆನೆಯಾಗಿ ಅಭಿಮನ್ಯುವಿನ ಉಪಸ್ಥಿತಿ ವಿಶೇಷ ಮಹತ್ವ ಪಡೆದುಕೊಂಡಿದೆ.

ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದೆ. ಇಂದು ಬೆಳಗ್ಗೆ 9 ಗಂಟೆ ಸುಮಾರಿಗೆ ಅಭಿಮನ್ಯು ಜಯಮಾರ್ತಾಂಡ ದ್ವಾರದಲ್ಲಿ ಪೂಜೆ ಸಲ್ಲಿಕೆ ಮಾಡಲಾಗಿದೆ. ಗಂಧದಗುಡಿ ಫೌಂಡೇಶನ್ ಮತ್ತು ಅಭಿಮನ್ಯು ಅಭಿಮಾನಿಗಳಿಂದ ಬೃಹತ್ ಮೋಸಂಬಿ ಹಾರ, 10 ಕೆಜಿ ತೂಕದ ಬೃಹತ್ ಪೇಟ ನೀಡಲಾಗಿದ್ದರೆ, ಫಲತಾಂಬೂಲ ನೀಡಿ ಅರಮನೆ ಮಂಡಳಿ ಆನೆಯನ್ನು ಬರಮಾಡಿಕೊಂಡಿದೆ.ಮುಖ್ಯ ದಸರಾ ಕಾರ್ಯಕ್ರಮಕ್ಕೂ ಮುನ್ನ ದಸರಾ ಆನೆಗಳ ತಂಡಕ್ಕೆ ಸಾಕಷ್ಟು ತರಬೇತಿ ಹಾಗೂ ಸಿದ್ಧತೆ ನೀಡಲಾಗುತ್ತದೆ. ಅರಮನೆ ಮತ್ತು ಸಾಂಪ್ರದಾಯಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ಆನೆಗಳು ಹಾಗೂ ಉತ್ಸವಕ್ಕೆ ಆಗಮಿಸುವ ಜನಸಂದಣಿಯನ್ನು ಗಮನದಲ್ಲಿಟ್ಟುಕೊಂಡು ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತದೆ. ಚಿನ್ನದ ಅಂಬಾರಿ ಹೊರುವ ಜವಾಬ್ದಾರಿಯಿಂದ ನಿವೃತ್ತಿಯಾದ ಬಳಿಕವೂ ಅಭಿಮನ್ಯುವನ್ನು ನಿಶಾನೆ ಆನೆಯಾಗಿ ಆಯ್ಕೆ ಮಾಡಿರುವುದು ಅದಕ್ಕೆ ದಸರಾ ಮಹೋತ್ಸವದಲ್ಲಿ ವಿಶೇಷ ಸ್ಥಾನ ಕಲ್ಪಿಸಿದೆ. ಈ ಮೂಲಕ ದಸರಾ ವೀಕ್ಷಕರು ಹಾಗೂ ಅಭಿಮಾನಿಗಳಿಗೆ ಈ ಹಿರಿಯ ಆನೆಯನ್ನು ಮತ್ತೊಮ್ಮೆ ಅದ್ಧೂರಿ ಉತ್ಸವದ ಭಾಗವಾಗಿ ಕಣ್ತುಂಬಿಕೊಳ್ಳುವ ಅವಕಾಶ ದೊರೆಯಲಿದೆ.

ಮೈಸೂರು ದಸರಾ ಮಹೋತ್ಸವದೊಂದಿಗೆ ದೀರ್ಘಕಾಲದ ನಂಟು ಹೊಂದಿರುವ ಹಾಗೂ ಸಾರ್ವಜನಿಕರಿಂದ ಅಪಾರ ಮೆಚ್ಚುಗೆ ಪಡೆದಿರುವ ಅಭಿಮನ್ಯು ಅರಮನೆಗೆ ಮರಳುತ್ತಿರುವುದು ಮತ್ತು ದಸರಾ ಉತ್ಸವದಲ್ಲಿ ಭಾಗವಹಿಸುತ್ತಿರುವುದನ್ನು ದಸರಾ ಅಭಿಮಾನಿಗಳು ವಿಶೇಷ ಆಸಕ್ತಿಯಿಂದ ಗಮನಿಸುತ್ತಿದ್ದಾರೆ. ರಾಜ್ಯ ಸರ್ಕಾರವು ಈ ಬಾರಿಯ ಮೈಸೂರು ದಸರಾ ಉದ್ಘಾಟನೆಗೆ ಅಭಿನವ ಗವಿಶ್ರೀ ಅವರನ್ನು ಮುಖ್ಯ ಅತಿಥಿಯಾಗಿ ಆಯ್ಕೆ ಮಾಡಿರುವ ಹಿನ್ನೆಲೆಯಲ್ಲಿ, ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಜಿ. ಅವರು ದಸರಾ ಉದ್ಘಾಟನೆಗೆ ಆಗಮಿಸುವಂತೆ ಶ್ರೀಗಳಿಗೆ ಆಹ್ವಾನ ನೀಡಿದ್ದಾರೆ.

## ಮಿನಿ ನ್ಯೂಸ್

## KRS ಬಳಿ ನಡೆಯಬೇಕಿದ್ದ ಕಾವೇರಿ ಆರತಿ ಮುಂದೂಡಿಕೆ

• ಉದಯವಾಹಿನಿ, ಮಂಡ್ಯ


ಉದಯವಾಹಿನಿ ಚಿತ್ರ

ಶ್ರೀರಂಗಪಟ್ಟಣ ತಾಲ್ಲೂಕಿನ ಐತಿಹಾಸಿಕ ಕೆಆರ್‌ಎಸ್ ಅಣೆಕಟ್ಟಿನ ಬಳಿ ಆಯೋಜಿಸಲು ಉದ್ದೇಶಿಸಲಾಗಿದ್ದ ಕಾವೇರಿ ಆರತಿ ಕಾರ್ಯಕ್ರಮದ ದಿನಾಂಕ ಮುಂದೂಡಲಾಗಿದೆ.ಈ ಹಿಂದೆ ನಿಗದಿಯಾಗಿದ್ದ ವೇಳಾಪಟ್ಟಿಯ ಪ್ರಕಾರ ಅ.11 ರಿಂದ ಈ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಆರಂಭವಾಗಬೇಕಿತ್ತು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲು ನಿರ್ಧರಿಸಲಾಗಿತ್ತು. ಆದರೆ, ಅಂದು ಅವರಿಗೆ ಪೂರ್ವ ನಿಯೋಜಿತ ಕಾರ್ಯಕ್ರಮಗಳು ಇರುವುದರಿಂದ ಕಾರ್ಯಕ್ರಮದ ದಿನಾಂಕವನ್ನು ಬದಲಾಯಿಸಲಾಗಿದೆ. ಇದೀಗ ಪರಿಷ್ಕೃತ ದಿನಾಂಕದಂತೆ, ಅಕ್ಟೋಬರ್ 18 ರಿಂದ 23ರವರೆಗೆ ಸತತವಾಗಿ ಕೆಆರ್‌ಎಸ್ ಡ್ಯಾಂ ಬಳಿ ಕಾವೇರಿ ಆರತಿ ಜರುಗಲಿದೆ.ಉತ್ತರ ಭಾರತದ ಗಂಗಾ ಆರತಿಯ ಮಾದರಿಯಲ್ಲಿ ದಕ್ಷಿಣದ ಜೀವನದಿ ಕಾವೇರಿಗೂ ಪೂಜೆ ಸಲ್ಲಿಸುವ ಮಹತ್ವಾಕಾಂಕ್ಷೆಯೊಂದಿಗೆ ಕಳೆದ ವರ್ಷದಿಂದ 'ಕಾವೇರಿ ಆರತಿಯನ್ನು ಪ್ರಾರಂಭಿಸಲಾಯಿತು.

ಹಿಂದಿನ ಅವಧಿಯಲ್ಲಿ ಜಲಸಂಪನ್ಮೂಲ ಸಚಿವರೂ ಆಗಿದ್ದ ಡಿ.ಕೆ. ಶಿವಕುಮಾರ್ ಅವರು ಈ ಕಾರ್ಯಕ್ರಮವನ್ನು ಹುಟ್ಟುಹಾಕಿದ್ದರು. ಈ ವರ್ಷ ಮುಂಗಾರು ಕೊರತೆಯಿಂದ ಉತ್ತಮ ಮಳೆಯಾಗದಿದ್ದರೂ ಲಭ್ಯವಿರುವ ನೀರಿಗೆ ಅನುಗುಣವಾಗಿ ಕಾವೇರಿ ಆರತಿ ನೆರವೇರಿಸಲು ಜಿಲ್ಲಾಡಳಿತ ಕಾವೇರಿ ನೀರಾವರಿ ನಿಗಮ ಭರದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ.

## ಸ್ವಾತಂತ್ರ್ಯ ಎನ್ನುವುದು ಜೀವನದ ಉಸಿರು ಜಾಥಾ


ಉದಯವಾಹಿನಿ ಚಿತ್ರ

• ಉದಯವಾಹಿನಿ, ವಿಜಯಪುರ

ವಿಶ್ವಸಂಸ್ಥೆಯು ಗಾಂಧೀಜಿಯವರ ಅಹಿಂಸಾ ತತ್ವವನ್ನು ಗೌರವಿಸಿ, ಅವರ ಜನ್ಮದಿನವನ್ನು ಅಂತರಾಷ್ಟ್ರೀಯ ಅಹಿಂಸಾ ದಿನವೆಂದು ಘೋಷಿಸಿದೆ ಎಂದು ರೋಟರಿ ಎಜುಕೇಶನ್ ಸೊಸೈಟಿಯ ಅಧ್ಯಕ್ಷ ಕೆ.ಬಿ.ಎಸ್. ಬಸವರಾಜು ತಿಳಿಸಿದರು. ಇವರು ಪಟ್ಟಣದ ರೋಟರಿ ಪ್ರಸಾದ ಭವನದ ಆವರಣದಲ್ಲಿ ಭಾರತ ಸರ್ಕಾರದ ಯುವಜನ ಸೇವೆ ಮತ್ತು ಕ್ರೀಡಾ ಸಚಿವಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮೇರಾ ಯುವ ಭಾರತ್, ರೋಟರಿ ಆಂಗ್ಲ ಪ್ರೌಢಶಾಲೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಸೇವಾ ಪಖ್ವಾಡಾ ಅಭಿಯಾನ ಹಾಗೂ ಮಹಾತ್ಮ ಗಾಂಧಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಗಾಂಧೀಜಿಯವರು ಭಾರತ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ನಾಯಕರಾಗಿದ್ದು, ಸತ್ಯ ಮತ್ತು ಅಹಿಂಸೆಯ ಹಾದಿಯಲ್ಲಿ ನಡೆದು ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮದ ರೂವಾರಿ ಯಾಗಿದ್ದರು ಎಂದು ತಿಳಿಸಿದರು.

ರೋಟರಿ ಆಂಗ್ಲ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಎ.ಎಂ. ಮಂಜುಳಾ ಮಾತನಾಡಿ, ಅಸಹಕಾರ ಚಳವಳಿ, ಉಪ್ಪಿನ ಸತ್ಯಾಗ್ರಹ ಮತ್ತು ಕ್ವಿಟ್ ಇಂಡಿಯಾ ಚಳವಳಿಗಳಂತಹ ಮಹತ್ವದ ಆಂದೋಲನಗಳ ನೇತೃತ್ವ ಒಡ್ಡಿ ಬ್ರಿಟಿಷರ ವಿರುದ್ಧ ಅಹಿಂಸೆಯ ಮಾರ್ಗದಲ್ಲೇ ಹೋರಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರು ಮಹಾತ್ಮ ಗಾಂಧೀಜಿ ಎಂದು ತಿಳಿಸಿದರು.

## ಜಲ್ವಂತ ಸಮಸ್ಯೆಗಳ ಪರಿಹಾರಕ್ಕೆ ಸತ್ಯಪ್ಪರಿಂದ ಮುಖ್ಯಮಂತ್ರಿಗಳಿಗೆ ಮನವಿ

• ಉದಯವಾಹಿನಿ, ಹುಣಸೂರು

ಪಿರಿಯಾಪಟ್ಟಣದಲ್ಲಿ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಪ್ರಜಾಸೇವಾ ಅಹವಾಲು ಸಭೆಯಲ್ಲಿ ಸತ್ಯ ಎಂ.ಎ.ಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ತಾಲ್ಲೂಕಿನ ಹಲವು ಗಂಭೀರ ಸಮಸ್ಯೆಗಳ ಬಗ್ಗೆ ಹಾಗೂ ಅವಶ್ಯಕ ಅಭಿವೃದ್ಧಿ ಬಗ್ಗೆ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು. ಕಲುಷಿತಗೊಂಡಿರುವ ಲಕ್ಷ್ಮಣ ತೀರ್ಥ ನದಿ ಶುದ್ಧೀಕರಣಕ್ಕಾಗಿ ಅನುದಾನ ಮೀಸಲಿರುವಂತೆ ಮನವಿ. 37 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಹೈಟೆಕ್ ಆಸ್ಪತ್ರೆಯ ಉಳಿದ ಕಾಮಗಾರಿಯನ್ನು ಅನುದಾನ ಬಿಡುಗಡೆ ಮಾಡಿ ಪೂರೈಸಿ ಶೀಘ್ರವಾಗಿ ಉದ್ಘಾಟಿಸಬೇಕಾಗಿ ಕೋರಿ.

ಶ್ರೀ ಕ್ಷೇತ್ರ ಕಪ್ಪಡಿ ರಾಚಪ್ಪಾಜಿ ಸನ್ನಿಧಿ ಬಳಿಯಿಂದ ಕಾವೇರಿ ನದಿಗೆ ಅಡ್ಡಲಾಗಿ ಹಾರಂಗಿ ಇಲಾಖೆ ವತಿಯಿಂದ ಹುಣಸೂರು ತಾಲ್ಲೂಕು ಗಾವಡಗೆರೆ ಏತ ನೀರಾವರಿ ಯೋಜನೆ ಮಂಜೂರಾತಿ ಕೋರಿ. ಕಳೆದ 12 ವರ್ಷಗಳ ಹಿಂದೆ ನಿರ್ಮಾಣಗೊಂಡಿರುವ ಅರಸು ಕಲಾಭವನ ಕಾಮಗಾರಿ ಸಂಪೂರ್ಣಗೊಳ್ಳದೆ ಈಗ ಪಾಳು ಬಿದ್ದಿದ್ದು ಶೀಘ್ರದಲ್ಲಿ ಸಾರ್ವಜನಿಕರಿಗೆ ಸಮರ್ಪಣೆಗೊಳಿಸಬೇಕಾಗಿ ಹಾಗೂ ಅರಸು ಕಲಾಭವನ ಮತ್ತು ಅರಸು ಹೈಟೆಕ್ ಆಸ್ಪತ್ರೆ ಮಧ್ಯಭಾಗದಲ್ಲಿ ಅರಸುರವರು ನಿಂತಿರುವ ಪುತ್ತಳಿಯನ್ನು ಸ್ಥಾಪಿಸಬೇಕೆಂದು ಕೋರಿ.ಮೈಸೂರಿನಿಂದ ಪಿರಿಯಾಪಟ್ಟಣಕ್ಕೆ ಹಾಗೂ ಪಿರಿಯಾಪಟ್ಟಣದಿಂದ ಮೈಸೂರಿಗೆ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸುವಂತೆ.ಪಿರಿಯಾಪಟ್ಟಣ ಹುಣಸೂರು ಬಿಳಿಕೆರೆ ಇಲವಾಲ ಮಾರ್ಗವಾಗಿ ಮಡಿಕೇರಿ ಡಿಪೊ ಕೆಎಸ್‌ಆರ್ಟಿಸಿ ಬಸ್ಸು ಸಂಚರಿಸುತ್ತಿದ್ದು ಈ ಮಾರ್ಗವಾಗಿ ಬೆಳಗೊಳ ಶ್ರೀರಂಗಪಟ್ಟಣ ಮಧ್ಯದಲ್ಲಿ ಡಿ ಪೌಲ್ ಕಾಲೇಜಿಗೆ ಸುಮಾರು 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಸ್ ಸ್ಟಾಪ್ ಕೊಡುತ್ತಿಲ್ಲವೆಂದು ಸಂಸ್ಥೆಗೆ ಮನವಿ ಸಲ್ಲಿಸಿದ್ದು, ಈ ಬಗ್ಗೆಯೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬೆಂಗಳೂರು ರವರಿಗೆ ನಿರ್ದೇಶನ ನೀಡುವಂತೆ ಮನವಿ ಸಲ್ಲಿಸಲಾಯಿತು.


ಉದಯವಾಹಿನಿ ಚಿತ್ರ

## ಬಿಗಿ ಪೊಲೀಸ್ ಭದ್ರತೆಯಲ್ಲಿ ಅದ್ದೂರಿ ಗಣಪತಿ ವಿಸರ್ಜನಾ ಶೋಭಾಯಾತ್ರೆ

• ಉದಯವಾಹಿನಿ, ಕೆ.ಆರ್.ಪೇಟೆ

ಕೆ.ಆರ್.ಪೇಟೆ ಪಟ್ಟಣದಲ್ಲಿ ಧರ್ಮಧ್ವಜ ಸೇವಾ ಸಮಿತಿ ವತಿಯಿಂದ ಪ್ರತಿಷ್ಠಾಪಿಸಿದ್ದ ಹಿಂದೂ ಮಹಾ ಗಣಪತಿಯ ವಿಸರ್ಜನಾ ಮಹೋತ್ಸವ ಹಾಗೂ ಶೋಭಾಯಾತ್ರೆ ಬಿಗಿ ಪೊಲೀಸ್ ಭದ್ರತೆಯಲ್ಲಿ ಅದ್ದೂರಿಯಾಗಿ ನಡೆಯಿತು. ಶೋಭಾಯಾತ್ರೆಯಲ್ಲಿ ಶಾಸಕ ಹೆಚ್.ಟಿ.ಮಂಜು ಅವರು ಯುವಕರೊಂದಿಗೆ ತಮಟೆ ಸದ್ದಿಗೆ ಹೆಜ್ಜೆ ಹಾಕಿ ಕೆಲಕಾಲ ನೃತ್ಯ ಮಾಡಿದ್ದು ಗಮನ ಸೆಳೆಯಿತು.

ತಮಟೆ ಹಾಗೂ ವಿವಿಧ ವಾದ್ಯಗಳ ಸದ್ದಿಗೆ ಯುವಕರು, ಯುವತಿಯರು ಹಾಗೂ ವಿದ್ಯಾರ್ಥಿಗಳು ಕುಣಿದು ಸಂಭ್ರಮಿಸಿದರು. ರಂಗಪಯಣ ನಾಟ್ಯಶಾಲೆಯ ಕಲಾವಿದರು ಪ್ರದರ್ಶಿಸಿದ ಭರತನಾಟ್ಯ ಶೋಭಾಯಾತ್ರೆಯ ಮೆರುಗು ಹೆಚ್ಚಿಸಿತು ಉತ್ಸವ ಮೂರ್ತಿಗಳ ಮೆರವಣಿಗೆ ಹಾಗೂ ವಿವಿಧ ಕಲಾ ಪ್ರದರ್ಶನಗಳು ಸಾರ್ವಜನಿಕರ ಗಮನ ಸೆಳೆದವು. ಶೋಭಾಯಾತ್ರೆಯಲ್ಲಿ ಮನ್ಮುಲ್ ನಿರ್ದೇಶಕ ಡಾಲು ರವಿ, ಆರ್ ಟಿ ಓ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ್, ಪುರಸಭೆ ಮಾಜಿ ಅಧ್ಯಕ್ಷ ನಟರಾಜ್, ಮಂಡ್ಯ ಜಿಲ್ಲಾ ಹಾಪ್‌ಕಾಮ್ಸ್ ಮಾಜಿ ಅಧ್ಯಕ್ಷ ಕೆ.ಜಿ.ತಮ್ಮಣ್ಣ, ಪುರಸಭೆ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ಎಚ್.ಆರ್.ಲೋಕೇಶ್, ಮಾಜಿ ಸದಸ್ಯ ಹೆಚ್.ಡಿ.ಅಶೋಕ್ ಸೇರಿದಂತೆ ಹಲವು ಮುಖಂಡರು ಹಾಗೂ ಸಾವಿರಾರು ಜನರು ಪಾಲ್ಗೊಂಡಿದ್ದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ನಾಗಮಂಗಲ ಡಿವೈಎಸ್ಪಿ ಚೆಲುವರಾಜು ನೇತೃತ್ವದಲ್ಲಿ ಪಟ್ಟಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.


ಉದಯವಾಹಿನಿ ಚಿತ್ರ

## ನೆಲಮಂಗಲ ಬಳಿ ಫೆಸ್ಟಿವಲ್ ಹಬ್ಬದ ಸಮಾವೇಶ

• ಉದಯವಾಹಿನಿ, ಮಾಲೂರು.

ದೇಶದ ನಾನಾ ರಾಜ್ಯಗಳಲ್ಲಿ ಇರುವ ಗಾಣಿಗ ಸಮಾಜದವರನ್ನು ಒಗ್ಗೂಡಿಸಿ ಒಗ್ಗಟ್ಟು ಪ್ರದರ್ಶಿಸಲು ಡಿಸೆಂಬರ್ ತಿಂಗಳಲ್ಲಿ ನೆಲಮಂಗಲ ಬಳಿ ಇರುವ ತೈಲೇಶ್ವರ ಮಹಾಸಂಸ್ಥಾನ ಮಠದಲ್ಲಿ ರಾಷ್ಟ್ರೀಯ ತೆಲಿಕ್ ಸಾಹು ರಾಥೋಡ್ ಮಹಾಸಭಾ ಫೆಸ್ಟಿವಲ್ ಹಬ್ಬದ ಸಮಾವೇಶ ಏರ್ಪಡಿಸಲಾಗಿದೆ. ನೆಲಮಂಗಲದ ಬಳಿ ಇರುವ ಶ್ರೀ ತೈಲೇಶ್ವರ ಮಹಾ ಸಂಸ್ಥಾನ ಮಠದ ಸಭಾಂಗಣದಲ್ಲಿ ರಾಷ್ಟ್ರೀಯ ತೈಲಿಕ್ ಸಾಹು ರಾಥೋಡ್ ಮಹಾಸಭಾ ಸಂಘಟನೆಯ ಸಮಾವೇಶದ ಹಿನ್ನೆಲೆಯಲ್ಲಿ ಮಠದ ಪೀಠಾಧಿಪತಿ ಪೂರ್ಣಾನಂದ ಪುರಿ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಪೂರ್ವಭಾವಿ ಸಭೆ ನಡೆಯಿತು. ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಗಾಣಿಗ ಸಮಾಜದ ಹಿರಿಯ ಮುಖಂಡ ವೇಣುಗೋಪಾಲ್ ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಗಾಣಿಗ ಸಮಾಜದ ಎಲ್ಲಾ ಪಂಗಡದವರು ಈ ಸಮಾವೇಶದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಸಿದ್ಧಪಡಿಸಲಾಗುತ್ತಿದೆ ಎಂದು ಹೇಳಿದರು. ಗಾಣಿಗ ಸಮಾಜವು ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಎಣ್ಣೆ ತೆಗೆಯುವದು ವ್ಯಾಪಾರ ವಹಿವಾಟುಗಳಲ್ಲಿ ತೊಡಗಿಸಿಕೊಂಡಿದ್ದಾರೆ ದೇಶದ ಎಲ್ಲಾ ರಾಜ್ಯಗಳ ಸಮುದಾಯದವರನ್ನು ಒಗ್ಗೂಡಿಸುವ ಸಲುವಾಗಿ ಸಮುದಾಯದ ಒಗ್ಗಟ್ಟು ಪ್ರದರ್ಶಿಸಲು ವೇದಿಕೆಯನ್ನು ನಿರ್ಮಿಸಲಾಗುತ್ತಿದೆ ಸಂಸದರು ಸಚಿವರು ಮಾಜಿ ಸಂಸದರು ಸಚಿವರು ರಾಜ್ಯಸಭಾ ಸದಸ್ಯರು ಸಂಘಟನೆಯ ಪದಾಧಿಕಾರಿಗಳು ಸಮುದಾಯದವರು ಸಹಸ್ರರ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ ಎಂದರು.

## ಮನ್‌ಮುಲ್ ಮಾಜಿ ಅಧ್ಯಕ್ಷ ಉಮ್ಮಡಹಳ್ಳಿ ಶಿವಪ್ಪ ಅರೆಸ್ಟ್!



ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಂಡ್ಯ

ಮಂಡ್ಯದ ಮನ್‌ಮುಲ್ ನಂದಿನಿ ಹಾಲಿನ ಪುಡಿ ಕಲಬೆರಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಒಕ್ಕೂಟದ ಮಾಜಿ ಅಧ್ಯಕ್ಷ ಉಮ್ಮಡಹಳ್ಳಿ ಶಿವಪ್ಪ ಅವರನ್ನು ಮದ್ದೂರು ಪೊಲೀಸರು ನಿನ್ನೆ ತಡರಾತ್ರಿ ಬಂಧಿಸಿದ್ದಾರೆ ಎನ್ನಲಾಗಿದೆ. ಪ್ರಕರಣದಲ್ಲಿ ಶಿವಪ್ಪ ಅವರ ಪಾತ್ರವಿರುವುದು ಮೇಲ್ನೋಟಕ್ಕೆ ದೃಢಪಟ್ಟ ಹಿನ್ನೆಲೆಯಲ್ಲಿ ಪೊಲೀಸರು ಈ ಕ್ರಮ ಕೈಗೊಂಡಿದ್ದಾರೆ. ಮದ್ದೂರು ನ್ಯಾಯಾಲಯಕ್ಕೆ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ನೀಡಲಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣದ ಪ್ರಮುಖ ಆರೋಪಿ (01) ಪ್ರದೀಪ್ ಕುಮಾರ್ ಜಾದವ್, ನಿರ್ದೇಶಕರೊಬ್ಬರ ಜೊತೆ ಮಾತನಾಡಿದ್ದಾರೆ ಎನ್ನಲಾದ ಆಡಿಯೋದಲ್ಲಿ ಈ ಅಕ್ರಮ ದಂಧೆಯಲ್ಲಿ ಶಿವಪ್ಪ ಕೂಡಾ ಶಾಮೀಲಾಗಿದ್ದಾರೆ ಎಂದು ಆರೋಪ ಮಾಡಿದ್ದರು. ಈ ಸಾಕ್ಷ್ಯದ ಆಧಾರದ ಮೇಲೆ ಪೊಲೀಸರು ನ್ಯಾಯಾಂಗ ಬಂಧನದಲ್ಲಿದ್ದ ಜಾದವ್‌ನನ್ನು ಮತ್ತೆ ಪೊಲೀಸ್ ಕಸ್ಟಡಿಗೆ ಪಡೆದು ತೀವ್ರ ವಿಚಾರಣೆಗೊಳಪಡಿಸಿದ್ದರು.ಬಳಿಕ ಜಾದವ್ ಮತ್ತು ಮಾಜಿ ಅಧ್ಯಕ್ಷ ಶಿವಪ್ಪ ಇಬ್ಬರನ್ನೂ ಮುಖಾಮುಖಿ ಕೂರಿಸಿ ವಿಚಾರಣೆ ನಡೆಸಲಾಯಿತು.

# ಅರಣ್ಯದಲ್ಲಿ ಕಷ್ಟಗಳು ಬಂದರೂ ನೌಕರರು ಕುಗ್ಗಬಾರದು

• ಉದಯವಾಹಿನಿ, ಚಾಮರಾಜನಗರ,

ಅರಣ್ಯದಲ್ಲಿ ಸೇವೆ ಸಲ್ಲಿಸುವ ಅರಣ್ಯ ನೌಕರರು ಎಂತಹ ಕಷ್ಟಗಳು ಎದುರಾದರೂ ಧೈರ್ಯದಿಂದ ಎದುರಿಸುವ ಛಲ ಹೊಂದಿರಬೇಕು ಎಂದು ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಪಡೆಯ ಮುಖ್ಯಸ್ಥ ಬಿ.ಕೆ. ಸಿಂಗ್ ಹೇಳಿದರು. ಚಾಮರಾಜನಗರ ತಾಲ್ಲೂಕಿನ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಪುಣಜನೂರು ವಲಯ ಬೂದಿಪಡಗದಲ್ಲಿ 72ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಅರಣ್ಯ ನೌಕರರಿಗೆ ಆಯೋಜಿಸಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದ ಅರಣ್ಯ ಪ್ರದೇಶವಿದ್ದು, ಇಂತಹ ಅರಣ್ಯದಲ್ಲಿ ಸೇವೆ ಸಲ್ಲಿಸುವುದು ಪುಣ್ಯದ ಕೆಲಸ. ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಯಲ್ಲಿ ಅರಣ್ಯ ಇಲಾಖೆಯ ನೌಕರರು ಸಾರ್ವಜನಿಕರಿಗೂ ಅರಿವು ಮೂಡಿಸುವ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು. ಕಾಡುಗಳ್ಳ ವೀರಪ್ಪನ್ ಹಾವಳಿ ಇದ್ದ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಅರಣ್ಯ ಅಧಿಕಾರಿಯಾಗಿ ಹಲವು ಸವಾಲುಗಳನ್ನು ಎದುರಿಸಿದ್ದೇನೆ.

ಅಂದು ತಮಿಳುನಾಡು ಹಾಗೂ ಕರ್ನಾಟಕದ ಪೊಲೀಸ್ ಅಧಿಕಾರಿಗಳೊಂದಿಗೆ ಸೇರಿ ಹಲವು ಕಾರ್ಯಾಚರಣೆಗಳಲ್ಲಿ ಭಾಗವಹಿಸಿದ್ದೆ. ಆ ಸಂದರ್ಭದಲ್ಲಿ ಸರ್ಕಾರದಿಂದ ನಮಗೆ ಡಬಲ್ ಬ್ಯಾರೆಲ್ ಬಂದೂಕುಗಳಂತಹ ಸೀಮಿತ ಸೌಲಭ್ಯಗಳಲಭ್ಯವಿದ್ದವು. ಆದರೆ ಇಂದು ತಂತ್ರಜ್ಞಾನ ಸಾಕಷ್ಟು ಅಭಿವೃದ್ಧಿಯಾಗಿದೆ ಎಂದು ಹೇಳಿದರು.

ಅರಣ್ಯದಲ್ಲಿ ವನ್ಯಜೀವಿಗಳ ಬೇಟೆ ಸೇರಿದಂತೆ ಅಕ್ರಮ ಚಟುವಟಿಕೆಗಳು ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿ, ನಿಯಮಾನುಸಾರ ಕ್ರಮಕ್ಕೆ ಮುಂದಾಗಬೇಕು. ಅನಿವಾರ್ಯ ಸಂದರ್ಭಗಳಲ್ಲಿ ಕಾರ್ಯಾಚರಣೆ ನಡೆಸಬೇಕಾದ ಪರಿಸ್ಥಿತಿ ಎದುರಾದರೂ, ಕಾರ್ಯಾಚರಣೆ ನಿಯಮಾನುಸಾರ ನಡೆದಿದ್ದರೆ ಅಧಿಕಾರಿಗಳು ನಿಮ್ಮ ಬೆಂಬಲಕ್ಕೆ ನಿಲ್ಲುತ್ತಾರೆ ಎಂದು ಬಿ.ಕೆ. ಸಿಂಗ್ ಹೇಳಿದರು.

# ಮೂರು ವರ್ಷಗಳ ಆಡಳಿತದಲ್ಲಿ ದಲಿತರಿಗೆ ನೆರವಾಗಿಲ್ಲ

### ಅಂಬೇಡ್ಕರ್ ಅವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಶಾಸಕರು ಸಾಮಾಜಿಕ ನ್ಯಾಯದ ಪರವಾಗಿ ನಡೆದುಕೊಳ್ಳಬೇಕು

• ಉದಯವಾಹಿನಿ, ಚಿಕ್ಕಬಳ್ಳಾಪುರ

ಶಾಸಕ ಪ್ರದೀಪ್ ಈಶ್ವರ್ ಅವರ ಆಡಳಿತದ ಅವಧಿಯಲ್ಲಿ ಕ್ಷೇತ್ರದಲ್ಲಿ ಬಡವರು, ದಲಿತರು ಮತ್ತು ಸಾಮಾನ್ಯ ಮತದಾರರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ತಾಲ್ಲೂಕು ಆಡಳಿತ ಸಂಪೂರ್ಣ ವಿಫಲವಾಗಿದೆ.

1 ಸಮಸ್ಯೆಗೆ ಆಶ್ರಯ ಸಮಿತಿ ರಚನೆಯಾಗಿಲ್ಲ

2 ಹೋರಾಟಕ್ಕೂ ಸಾಕಷ್ಟು ಸ್ಪಂದನೆ ದೊರಕಿಲ್ಲ

3 ಸರ್ಕಾರದ ಯೋಜನೆಗಳ ಸ್ಪಂದನೆ ನೀಡಿಲ್ಲ

ಜನರ ಅಹವಾಲು ಆಲಿಸುವ ವ್ಯವಸ್ಥೆಯೇ ಇಲ್ಲದಂತಾಗಿದೆ. ಇನ್ನಾದರೂ ಮತದಾರರ ಋಣ ತೀರಿಸುವ ಕೆಲಸವಾಗಲಿ ಎಂದು ದಸಂಸ ಮುಖಂಡ ಕೆ.ಸಿ. ರಾಜಾಕಾಂತ್ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕರು ಮುಂದಿನ ಜನ್ಮದಲ್ಲಿ ದಲಿತ ಸಮುದಾಯದಲ್ಲಿ ಹುಟ್ಟುತ್ತೇನೆ ಎಂದು ನೀಡಿದ ಹೇಳಿಕೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ದಲಿತರನ್ನು ಪ್ರತ್ಯೇಕವಾಗಿ ನೋಡುವ ಬದಲು ಮನುಷ್ಯರಾಗಿ ಕಾಣಬೇಕು. ಜಾತಿ, ಸಮುದಾಯದ ಹೆಸರಿನಲ್ಲಿ ಶಾಂತಿ ಭಂಗಕ್ಕೆ ಕಾರಣವಾಗಬಾರದು ಎಂದು ಅಭಿಪ್ರಾಯಪಟ್ಟರು. ಅಂಬೇಡ್ಕರ್ ಅವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಶಾಸಕರು ಸಾಮಾಜಿಕ ನ್ಯಾಯದ ಪರವಾಗಿ ನಡೆದುಕೊಳ್ಳಬೇಕು.


ಉದಯವಾಹಿನಿ ಚಿತ್ರ

ಈ 3 ವರ್ಷಗಳಲ್ಲಿ ಸಾವಿರಾರು ಬಡವರಿಗೆ ಮನೆ ಮತ್ತು ಭೂಮಿ ಹಕ್ಕಿನ ಸೌಲಭ್ಯ ತಲುಪಬಹುದು. ಆದರೆ ಒಂದು ಕೆಡಿಪಿ ಸಭೆಯನ್ನೂ ನಡೆಸಿಲ್ಲ. ಮೈಲಪನಹಳ್ಳಿ ನಿರ್ಗತಿಕರ ಅಹವಾಲು ಆಲಿಸಿಲ್ಲ. ಜೆಸಿಬಿ ಮೂಲಕ ಮನೆ ತೆರವುಗೊಳಿಸಿದ್ದಕ್ಕಾಗಿ ಶಾಸಕರು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ಗುವ್ವಲಕಾನಹಳ್ಳಿ ನಿರಾಶ್ರಿತ ಸಮಸ್ಯೆಗೆ ಆಶ್ರಯ ಸಮಿತಿ ರಚನೆಯಾಗಿಲ್ಲ. ಸಿಂಗಾಟಿ ಕದಿರೇನಹಳ್ಳಿ ಗ್ರಾಮಸ್ಥರ 90 ದಿನಗಳ ಹೋರಾಟಕ್ಕೂ ಸಾಕಷ್ಟು ಸ್ಪಂದನೆ ದೊರಕಿಲ್ಲ. ತಮ್ಮದೇ ಸರ್ಕಾರದ ಯೋಜನೆಗಳ ಜತೆಗೆ ಸ್ಪಂದನೆ ನೀಡಿಲ್ಲ. ಜನರು ತಮ್ಮ ಅಹವಾಲುಗಳನ್ನು ಯಾರ ಬಳಿ ಹೇಳಿಕೊಳ್ಳಬೇಕು ಎಂಬ ಪರಿಸ್ಥಿತಿ ಬಂದಿದೆ ಎಂದು ದೂರಿದರು.

ಕ್ಷೇತ್ರದ ಸಮಗ್ರ ಅಭಿವೃದ್ಧಿ ಮುಖ್ಯ ಮತ್ತು ಪಕ್ಷದ ವೈಫಲ್ಯದ ವಿರುದ್ಧ ಹೋರಾಟ ನಡೆಸುತ್ತಿದ್ದೇವೆ. ಇನ್ನಾದರೂ ವರ್ತನೆ ತಿದ್ದಿಕೊಳ್ಳಿ ಎಂದು ಜನರನ್ನು ಎಚ್ಚರಿಸಿದರು.ಬಡವರ ಪರ ಅಹವಾಲುಗಳನ್ನು ಆಲಿಸಿ ಪರಿಹಾರ ಕಲ್ಪಿಸಬೇಕು. ದಲಿತರ ಹೆಸರನ್ನು ಬಳಸಿಕೊಂಡು ಸಮುದಾಯವನ್ನು ವಂಚಿಸಲು ಯತ್ನಿಸಬೇಡಿ ಎಂದು ಅವರು ಆಗ್ರಹಿಸಿದರು.ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಅವರ ರಾಜಕೀಯ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಚಿಂತಾಮಣಿ ಶಾಸಕ ಡಾಕ್ಟರ್ ಎಂ.ಸಿ. ಸುಧಾಕರ್ ವಿರುದ್ಧ ತಿರುಗಿಬಿದ್ದಿದ್ದಾರೆ. 108 ಸಮಸ್ಯೆಗಳು ಇರುವಾಗ ಚಿಂತಾಮಣಿಗೆ ಹೋಗಿ ಅಲ್ಲಿನ ಸಮಸ್ಯೆಗಳ ಬಗ್ಗೆ ಮಾತನಾಡುವ ನೈತಿಕತೆಯಿಲ್ಲ ಎಂದು ರಾಜಾಕಾಂತ್ ದೋಷಾರೋಪಿಸಿದರು.ಸುದ್ದಿಗೋಷ್ಠಿಯಲ್ಲಿ ಎನ್. ಪರಮೇಶ್, ರೈಲಪನಹಳ್ಳಿ ರಾಜಶೇಖರ, ಕುಪ್ಪಳ್ಳಿ ಪುಟ್ಟ ನರಸಿಂಹಯ್ಯ, ವೆಂಕಟೇಶ್, ರಾಮಪ್ಪ, ಲಕ್ಷ್ಮಣ್, ಕಣಿತಹಳ್ಳಿ ಮುನಿಯಪ್ಪ, ಸಿಂಗಾಟಿ ಕದಿರೇನಹಳ್ಳಿ ರಾಮಕೃಷ್ಣ, ಕುಮಾರ್ ಭಾಗವಹಿಸಿದ್ದರು.

> ಕಂಬಾಲಪಲ್ಲಿ ಪ್ರಕರಣವನ್ನು ಮತ್ತೆ ಕೆದಕುವ ಅಗತ್ಯವಿಲ್ಲ ಎಂದು ಅಭಿಪ್ರಾಯಪಟ್ಟರು. 50 ವರ್ಷಗಳಿಂದ ದಸಂಸ ಕಾರ್ಯ ಮಾಡುತ್ತಿದೆ. ಅನೇಕ ಹೋರಾಟಗಳು ನಡೆಸಲ್ಪಟ್ಟಿವೆ. ತಮ್ಮ ಮೂರು ವರ್ಷದ ಸಾಧನೆಯ ಸಂಪೂರ್ಣ ದಾಖಲೆಗಳನ್ನು ಬಿಡುಗಡೆ ಮಾಡಲಿ ಎಂದು ಶಾಸಕರಿಗೆ ಸವಾಲು ಹಾಕಿದರು. -ಕೆ.ಸಿ. ರಾಜಾಕಾಂತ್

**ಬೈನಾಮಿ ಹಸ್ತಾಂತರದ ಬಗ್ಗೆ ನಗರಸಭೆ ಕ್ರಮ**

ನಗರದ ಗೋಪಾಲಕೃಷ್ಣ ಕೆರೆಯ 24 ಎಕರೆಯ ಸರ್ಕಾರಿ ಭೂಮಿಯ ಬೈನಾಮಿ ಹಸ್ತಾಂತರದ ಬಗ್ಗೆ ನಗರಸಭೆ ಕ್ರಮ ಕೈಗೊಂಡಿಲ್ಲ ಎಂದು ರಾಜಾಕಾಂತ್ ಪ್ರಶ್ನಿಸಿದರು. ಶಾಸಕರ ಪ್ರಾಮಾಣಿಕತೆ ಹಾಗೂ ಕಂಬಾಲಪಲ್ಲಿಗಾಗಿ ಮಾಜಿ ಸಚಿವ ಎಂ.ಸಿ. ಸುಧಾಕರ್ ಕುಟುಂಬಕ್ಕೆ ಗುರಿಕಲ್ಪಿಸುವ ಸಂಬಂಧವೂ ವಿವರ ನೀಡಬೇಕು.

## ಮಾಲೂರು ಶಾಸಕನಿಗೆ ಸವಾಲು ಹಾಕಿದ ಜೆಡಿಎಸ್ ಮುಖಂಡ

• ಉದಯವಾಹಿನಿ, ಮಾಲೂರು

ತಾಲ್ಲೂಕಿನ ಅಭಿವೃದ್ಧಿಗೆ 3,200ಕೋಟಿ ರೂ.ಅನುದಾನ ತಂದಿರುವುದಾಗಿ ಹೇಳಿಕೊಳ್ಳುತ್ತಿರುವ ಶಾಸಕರು, ಯಾವ ಕಾಮಗಾರಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ ಎಂಬುದನ್ನು ಬಹಿರಂಗಪಡಿಸಲಿ ಎಂದು ಜೆಡಿಎಸ್ ಮುಖಂಡ ಹೂಡಿ ವಿಜಯಕುಮಾರ್ ಸವಾಲು ಹಾಕಿದರು.

ನಗರದ ಹನುಮಂತನಗರದಲ್ಲಿ ಹಲವು ಮುಖಂಡರು ಹಾಗೂ ಕಾರ್ಯಕರ್ತರನ್ನು ಜೆಡಿಎಸ್‌ಗೆ ಸ್ವಾಗತಿಸಿ ಮಾತನಾಡಿದ ಅವರು, ಶಾಸಕರು ಪದೇ ಪದೇ 3,200 ಕೋಟಿ ರೂ. ಅಭಿವೃದ್ಧಿಯ ಬಗ್ಗೆಪ್ರಚಾರ ಮಾಡುತ್ತಿರುವ ಶಾಸಕರು, ಮಾಲೂರುನಗರಕ್ಕೆ ಎಷ್ಟು ಅನುದಾನತಂದಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬೇಕು. ಕಳೆದ ಎಂಟುವರ್ಷಗಳಲ್ಲಿ ತಾಲ್ಲೂಕಿನ ಬಡವರಿಗೆ ಒಂದೇ ಒಂದು ಮನೆ ನಿವೇಶನ ನೀಡಿಲ್ಲ ಎಂದು ಆರೋಪಿಸಿದರು.

ಮಾಲೂರು ನಗರಕ್ಕೆ 500 ಕೋಟಿ ರೂ.ಅನುದಾನ ಮೀಸಲಿಟ್ಟರೆ ಮಾದರಿನಗರವನ್ನಾಗಿ ಅಭಿವೃದ್ಧಿಪಡಿಸಬಹುದು.ಆದರೆ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ, ಬೀದಿ ದೀಪಗಳ ಕೊರತೆ ಹಾಗೂ ಚರಂಡಿವ್ಯವಸ್ಥೆಯ ಸಮಸ್ಯೆ ಇದೆ. ಒಳಚರಂಡಿಯ ಕೊಳಚೆ ರಸ್ತೆಗಳಲ್ಲೇ ಹರಿಯುತ್ತಿರುವಪರಿಸ್ಥಿತಿ ಇದೆ ಎಂದು ವಿಜಯಕುಮಾರ್ ಆರೋಪಿಸಿದರು. ಮಾಜಿ ಶಾಸಕ ಎ. ನಾಗರಾಜು ಅವರ ಅವಧಿಯಲ್ಲಿ ಕೊಳಗೇರಿಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿತ್ತು. ಆದರೆ ನಂತರದ ಅವಧಿಯಲ್ಲಿ ನಿರೀಕ್ಷಿತ ಪ್ರಗತಿ ಕಂಡುಬಂದಿಲ್ಲ ಎಂದರು.


ಉದಯವಾಹಿನಿ ಚಿತ್ರ

ಅಂತರಾಳದಿಂದ...
EDITORIAL

# ಬಹುಧ್ರುವೀಯ ಜಾಗತಿಕ ವ್ಯವಸ್ಥೆ ಭಾರತಕ್ಕೆ ಆಶಾದಾಯಕ ಬೆಳವಣಿಗೆ



ಕೆಲವು ವರ್ಷಗಳ ಹಿಂದೆ ಜಗತ್ತಿನ ಮೇಲೆ ಪಾರಮ್ಯ ಸಾಧಿಸಿದ್ದ ಅಮೆರಿಕ ತನ್ನ ಇತ್ತೀಚಿನ ಏಕಪಕ್ಷೀಯ ನಿರ್ಧಾರಗಳಿಂದಾಗಿ ಜಾಗತಿಕ ಮಟ್ಟದಲ್ಲಿ ಏಕಾಂಗಿಯಾಗುತ್ತಾ ಸಾಗಿದ್ದರೆ, ಮತ್ತೊಂದೆಡೆಯಿಂದ ಚೀನ ಒಂದಿಷ್ಟು ಪ್ರಬಲಗೊಂಡಿದೆ. ಅಮೆರಿಕ ಮತ್ತು ಚೀನದ ಈ ಪೈಪೋಟಿಯ ಕಾರಣದಿಂದಾಗಿ ಭಾರತ ಸಹಿತ ವಿಶ್ವದ ಅಭಿವೃದ್ಧಿಶೀಲ ರಾಷ್ಟ್ರಗಳು ಪರಸ್ಪರ ಸಹಕಾರದೊಂದಿಗೆ ಮೈತ್ರಿಕೂಟಗಳನ್ನು ರಚಿಸಿ ಸ್ವಾವಲಂಬಿಯಾಗುವತ್ತ ಹೆಜ್ಜೆ ಇರಿಸಿರುವುದು ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆಯ ದಿಕ್ಸೂಚಿ' ಎಂಬ ಭಾರತದ ವಿದೇಶಾಂಗ ವ್ಯವಹಾರಗಳ ಖಾತೆ ಸಚಿವ ಎಸ್. ಜೈಶಂಕರ್ ಅವರ ಹೇಳಿಕೆಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರೀ ಕುತೂಹಲಕ್ಕೆ ಕಾರಣವಾಗಿದೆ. ಇದೇ ವೇಳೆ ಸಚಿವರು ಭಾರತದ ದಶಕಗಳ ಮಿತ್ರ ರಾಷ್ಟ್ರ ರಷ್ಯಾದೊಂದಿಗಿನ ಸ್ನೇಹವನ್ನು ಬಲವಾಗಿ ಸಮರ್ಥಿಸಿಕೊಂಡಿರುವುದೂ ಗಮನಾರ್ಹ.

**ಹೊಸದಿಲ್ಲಿಯಲ್ಲಿ ನಡೆದ ಮ್ಯೂನಿಚ್ ಲೀಡರ್ಸ್ ಸಮ್ಮೇಳನದಲ್ಲಿ ಸಚಿವ ಎಸ್. ಜೈಶಂಕರ್ ಅವರು ಅಮೆರಿಕದ ನಡೆಯ ವಿರುದ್ಧ ಪರೋಕ್ಷವಾಗಿ ಅಸಮಾಧಾನ ಹೊರಹಾಕುವ ಜತೆಯಲ್ಲಿ ಭಾರತದ ಪರಮಾಪ್ತ ರಾಷ್ಟ್ರ ರಷ್ಯಾವನ್ನು ಮುಕ್ತವಾಗಿ ಶ್ಲಾಘಿಸಿರುವುದು ಪ್ರಸಕ್ತ ಜಾಗತಿಕ ಭೌಗೋಳಿಕ-ರಾಜಕೀಯ ಸನ್ನಿವೇಶದಲ್ಲಿ ಅತ್ಯಂತ ಮಹತ್ವದ ಬೆಳವಣಿಗೆಯಾಗಿದೆ.**

**ರಷ್ಯಾ-ಉಕ್ರೇನ್ ಹಾಗೂ ಮಧ್ಯಪ್ರಾಚ್ಯ ಸಂಘರ್ಷದ ಬಳಿಕ ಜಾಗತಿಕ ಸಮೀಕರಣದಲ್ಲಿ ಮಹತ್ತರ ಏರುಪೇರುಗಳಾಗಿದ್ದು, ಜಗತ್ತಿನ ಮೇಲೆ ಹಿಡಿತ ಸಾಧಿಸುವ ಅಮೆರಿಕ ಸಹಿತ ಪಾಶ್ಚಾತ್ಯ ರಾಷ್ಟ್ರಗಳ ಪ್ರಯತ್ನಗಳಿಗೆ ಹಿನ್ನಡೆಯುಂಟಾಗಿದೆ. ಅಮೆರಿಕ ಮತ್ತು ಚೀನ ನಡುವೆ ಕ್ಷೇತ್ರಗಳಲ್ಲೂ ನೇರ ಪೈಪೋಟಿ ಏರ್ಪಟ್ಟಿರುವ ಪರಿಣಾಮ ಈಗ ಚೀನದ ಕೈಮೇಲಾದಂತೆ ಭಾಸವಾಗುತ್ತಿದೆ.**

**ಆದರೆ, ಈ ಎರಡು ರಾಷ್ಟ್ರಗಳ ಮಿತಿಮೀರಿದ ಸರ್ವಾಧಿಕಾರಿ ಧೋರಣೆಗಳಿಂದ ಬೇಸತ್ತ ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮದೇ ಆದ ಪ್ರತ್ಯೇಕ ಗುಂಪುಗಳಲ್ಲಿ ಗುರುತಿಸಿಕೊಳ್ಳಲು ಆರಂಭಿಸಿವೆ.**

ತಮ್ಮ ತಮ್ಮ ವ್ಯಾಪ್ತಿಯಲ್ಲಿ ಪರಸ್ಪರ ಒಪ್ಪಂದಗಳನ್ನು ಮಾಡಿಕೊಳ್ಳುವ ಮೂಲಕ ವಿಶ್ವದ ದಿಗ್ಗಜ ರಾಷ್ಟ್ರಗಳ ಹಿಡಿತದಿಂದ ಪಾರಾಗುವ ತಂತ್ರವನ್ನು ಕಂಡುಕೊಂಡಿವೆ.

ಸಣ್ಣಪುಟ್ಟ ದೇಶಗಳು ಕೂಡ ತಮ್ಮಲ್ಲಿರುವ ಸಂಪನ್ಮೂಲ, ಆರ್ಥಿಕ, ವಾಣಿಜ್ಯ ಹಾಗೂ ತಂತ್ರಜ್ಞಾನ ಸಾಮರ್ಥ್ಯಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದನ್ನು ತಮ್ಮ ಅಭಿವೃದ್ಧಿಯ ಕಾರ್ಯತಂತ್ರವನ್ನಾಗಿಸಿಕೊಂಡಿವೆ. ಇದೇ ವೇಳೆ ಈ ದೇಶಗಳು ಒಂದೆಡೆಯಿಂದ ಅಮೆರಿಕ ಮತ್ತು ಚೀನದೊಂದಿಗಿನ ತಮ್ಮ ಸಂಬಂಧವನ್ನು ಮುಂದುವರಿಸಿಕೊಳ್ಳುತ್ತಲೇ ಪರಸ್ಪರ ಸಹಕಾರವನ್ನು ಬಲಗೊಳಿಸುತ್ತ ಬರುತ್ತಿವೆ. ಸಚಿವ ಜೈಶಂಕರ್ ಅವರೇ ಪ್ರತಿಪಾದಿಸಿದಂತೆ ಇದಕ್ಕೆ ಕ್ವಾಡ್, ಬ್ರಿಕ್ಸ್‌ನಂತಹ ರಾಷ್ಟ್ರಗಳ ಒಕ್ಕೂಟವೇ ಸಾಕ್ಷಿ.

ಕಳೆದೊಂದು ದಶಕದ ಜಾಗತಿಕ ಬೆಳವಣಿಗೆಯನ್ನು ಗಮನಿಸಿದಾಗ ವಿಶ್ವದ ಮುಂಚೂಣಿಯ ರಾಷ್ಟ್ರಗಳ ಹಿಡಿತದಿಂದ ಬಹುತೇಕ ರಾಷ್ಟ್ರಗಳು ಕೈತಪ್ಪಿವೆ. ಪ್ರತಿಯೊಂದು ರಾಷ್ಟ್ರವೂ ತನ್ನ ಹಿತಾಸಕ್ತಿ ಕಾಯ್ದುಕೊಳ್ಳಲು ಸಣ್ಣಪುಟ್ಟ ರಾಷ್ಟ್ರಗಳೊಂದಿಗೂ ಸಹಯೋಗ ಹೊಂದಬಯಸುತ್ತಿವೆ. ಇಂತಹ ಸಣ್ಣ ಸಣ್ಣ ಮೈತ್ರಿಕೂಟ ರಾಷ್ಟ್ರಗಳ ನಡುವೆ ವ್ಯಾಪಾರ-ವ್ಯವಹಾರಗಳು ಹೆಚ್ಚಿ ದಿಗ್ಗಜ ರಾಷ್ಟ್ರಗಳ ಅವಲಂಬನೆಯ ಅನಿವಾರ್ಯತೆಯಿಂದ ಹೊರಬರುವ ಪ್ರಯತ್ನದಲ್ಲಿವೆ.

ಅಮೆರಿಕದ ಸುಂಕ ನೀತಿ, ಬೆದರಿಕೆ ತಂತ್ರಗಳಿಗೆ ಮಣಿಯದೆ ತನ್ನ ಪರಮಾಪ್ತ ರಾಷ್ಟ್ರ ರಷ್ಯಾದೊಂದಿಗಿನ ಬಾಂಧವ್ಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ತನ್ನ ವ್ಯಾಪಾರ-ವ್ಯವಹಾರವನ್ನು ಮುಂದುವರಿಸಿಕೊಂಡು ಬರುವ ಮೂಲಕ ಭಾರತ, ಸಾರ್ವಭೌಮ ರಾಷ್ಟ್ರವೊಂದರ ಮೇಲೆ ಪರರಾಷ್ಟ್ರವೊಂದು ಸವಾರಿ ನಡೆಸಲು ಆಸ್ಪದ ನೀಡಲಾಗದು ಎಂಬುದನ್ನು ಸಾರಿ ಹೇಳಿದೆ. ಪ್ರಸ್ತುತ ಸ್ಥಿತಿಯಲ್ಲಿ ಬಹುಧ್ರುವೀಯ ಜಾಗತಿಕ ವ್ಯವಸ್ಥೆ ರೂಪುಗೊಳ್ಳುತ್ತಿದ್ದು, ಭಾರತದ ದೃಷ್ಟಿಕೋನದಲ್ಲಿ ಇದು ಆಶಾದಾಯಕ ಬೆಳವಣಿಗೆಯಾಗಿದೆ.

# ರಾಮಾಯಣ



17. ಹಿಂದೆ ದೇವಾಸುರರು ಸೆಣಸಿದಂತೆ ಕಪಿಗಳೂ ರಕ್ಕಸರೂ ಬದ್ಧವೈರದಿಂದ ಹೋರಾಡಿದುದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಮೇರೆಯಿಲ್ಲದ ಸಂಖ್ಯೆಯಲ್ಲಿ ವಾನರರು ಒಸಿ ಪಾಕಾರವನ್ನು ಹತ್ತುತ್ತಿರಲು ರಕ್ಕಸರ ಗುಂಪು ಘೋರವಾಗಿ ಶಬ್ದ ಮಾಡುತ್ತ ಹಾಹಾಕಾರದಿಂದ, ಶಕ್ತಿ ತೋಮರ ಪರಶು ಮುಂತಾದ ಭಾರಿಯಾದ ಆಯುಧಗಳಿಂದ ಹೊಡೆಯುತ್ತ ಬರಲು, ಎರಡೂ ಕಡೆಯವರು ಪರಸ್ಪರ ಹೋರಾಡುತ್ತಿರಲು – ಈ ಹೋರಾಟದ ಸುದ್ದಿಯು ಚಾರಮುಖದಿಂದ ದಶಮುಖನನ್ನು ತಲುಪಲು ಅವನು ಲಗುಬಗೆಯಿಂದ ನಡೆತಂದ. ಅರಮನೆಯಿಂದ ಹೊರಬಂದು ಕರುಮಾಡದ ಗೋಪುರವನ್ನು ಹತ್ತಿ, ವಾನರಬಲವು ಕವಿದಿರುವುದನ್ನು ನೋಡಿ ಚಿಂತೆಯಿಂದ, ಯಾವ ಪರಿಯಲ್ಲಿ ಇದನ್ನು ನಿಲ್ಲಿಸಬಹುದೆಂಬ ಆಲೋಚನೆಯಿಂದ ಕೂಡಿದವನಾದ. ಕಪಿಗಳ ಪರಾಕ್ರಮವನ್ನು ಕಂಡು ವಿಸ್ಮಿತನಾಗಿ, ತುದಿಮೂಗಿನಲ್ಲಿ ಬೆರಳಿರಿಸಿಕೊಂಡು, ತಲೆಗಳನ್ನಲ್ಲಾಡಿಸುತ್ತ ಆ ದುರುಳದೈತ್ಯನು ಧೈರ್ಯವನ್ನು ತಾಳಿ ಲಂಕಾರಕ್ಷಣೆಯ ವ್ಯವಸ್ಥೆಯನ್ನು ಮಾಡತೊಡಗಿದ. ನಾಲ್ಕೂ ಕಡೆಯಲ್ಲಿ ಆವರಿಸಿಕೊಂಡು ಬರುತ್ತಿರುವ ಕಪಿನಾಯಕರು ವಿವಿಧ ರೀತಿಯಿಂದಿರಲು, ರಘುನಾಯಕನು ಲಂಕಾನಗರಿಯ ಚಿತ್ರತರ ವಿಲಾಸವನ್ನು ದಿಟ್ಟಿಸುತ್ತ ಜಾನಕಿಯನ್ನು ನೆನೆಸಿಕೊಂಡು, ಯುವತಿಯರ ರತ್ನವು ದೈತ್ಯನಿವಹದ ನಡುವೆ ಸಿಲುಕಿಕೊಂಡು ನವೆಯುತ್ತಿದ್ದಾಳೆ ಎಂದು ಕ್ಷೋಭೆಗೊಂಡ ಚಿತ್ತದೊಡನೆ ಕೂಡಿ ದೈತ್ಯಸಮೂಹವನ್ನು ಬಗ್ಗುಬಡಿಯಿರೆಂದು ಸೈನಿಕರನ್ನು ಹುರಿದುಂಬಿಸಿದ. ರಾಮನ ಮಾತನ್ನು ಕೇಳಿದ ಬಲಿಮುಖ ಸೈನ್ಯದ ನಾಯಕರೆಲ್ಲ ಕ್ರೋಧದಿಂದ ಆ ಕ್ಷಣವೇ ಗಿರಿಯ ಮೇಲ್ತುದಿಯಿಂದ ಭೂತಳಕ್ಕೆ ದಡದಡನೆ ಧುಮ್ಮಿಕ್ಕಿದರು. ಆ ಬಳಿಕ ಭೀಮಬಲರಾದ ರಕ್ಕಸರ ತಲೆಗಳನ್ನು ಕಿತ್ತು ರಭಸವಾಗಿ ಸಮುದ್ರಕ್ಕೆಸೆದರು. ಅರೆನಿಮಿಷದಲ್ಲಿಯೆ ಅಪಾರ ರಾಕ್ಷಸಬಲವು ನೀರುಪಾಲಾಯಿತು. ದುರ್ಗದ ತೆನೆಗಳನ್ನು ಕಿತ್ತಿಟ್ಟು ಗೋಪುರಗಳನ್ನು ಕೆಡವಿ, ಮನೆಮನೆಗಳನ್ನೂ ಹೊಕ್ಕು ಆಬಾಲವೃದ್ಧರನ್ನು ಕೊಡವಿ ಹಾಕಿ, ''ಜಯ ರಾಮ, ಲಕ್ಷ್ಮಣ, ಸೂರ್ಯತನಯ' ಎಂದು ಘೋಷಿಸುತ್ತ ಎದುರಾದವರನ್ನು ತರಿದುಹಾಕಿ, ಬೆಟ್ಟಗಳನ್ನೂ ಮರಗಳನ್ನೂ ದೂಳಿನಿಂದ ಮುಚ್ಚಿಬಿಟ್ಟರು. ಶತಕೋಟಿ ಬಲಿಮುಖರಿಂದ ಕೂಡಿದ ಶತಬಲನು ದಕ್ಷಿಣದ್ವಾರವನ್ನು ಹೊಗಲು, ಸುಷೇಣನು ನಗರದ ಪಡುವಣದ ಬಾಗಿಲಲ್ಲಿ ಬೆಂಬಲಕ್ಕೆ ನಿಂತುಕೊಂಡ, ಉತ್ತರದ್ವಾರದ ನಾಯಕತ್ವವನ್ನು ರಾಮಲಕ್ಷ್ಮಣರೇ ಹೊತ್ತರು. ಒಂದು ಅರ್ಬುದ ಸಂಖ್ಯೆಯ ಕಪಿಗಳೊಡನೆ ಗವಾಕ್ಷನು ರಾಮಲಕ್ಷ್ಮಣರಿಗೆ ವಂದಿಸಿ ಪಕ್ಕಕ್ಕೆ ನಿಂತುಕೊಂಡ ಧೂಮ್ರನು ಸಾಗರದಷ್ಟು ಸೈನ್ಯದೊಡನೆ ಬಂದು ರಘುವರನನ್ನು ಸುತ್ತುವರಿದು ಅವನ ಕಾವಲಿಗೆ ನಿಂತ.

ಗಜ ಗವಯ ಶರಭ ಮುಂತಾದವರು ಲಗುಬಗೆಯಿಂದ ಬಲವನ್ನು ಒಗ್ಗೂಡಿಸಿಕೊಂಡು ಎಲ್ಲಾ ಕಡೆಯಲ್ಲಿಯೂ ಸಂಚರಿಸುತ್ತಿದ್ದರು. ಈ ರೀತಿಯಲ್ಲಿ ಕಪಿಸೈನ್ಯವು ನಾಲ್ಕೂ ದಿಕ್ಕುಗಳಲ್ಲಿ ನಿಂತುಕೊಂಡು ಲಂಕಾನಗರಿಯನ್ನು ಬಂಧಿಸಿ ನಗರವನ್ನು ಹೊಕ್ಕಿತು. ಎದುರಾದ ರಕ್ಕಸರನ್ನು ತಮ್ಮ ಬಾಹುಬಲದಿಂದ ತುಂಡುಮಾಡುತ್ತ ಮುಂದುವರಿಯುತ್ತಿದ್ದರೆ, ಇದನ್ನರಿತ ಅಸುರೇಂದ್ರನು ಕೋಪದಿಂದ ಹಲ್ಲುಕಡಿದು, ಮಂದಮತಿಗಳಾದ ಕಪಿಗಳ ಹಲ್ಲುಗಳನ್ನು ಮುರಿದು ತನ್ನಿ ಎಂದು ಆಜ್ಞೆಯಿತ್ತಾಗ ದೈತ್ಯ ಸೈನ್ಯವು ಭೋರೆಂದು ಸಿಡಿಲಿನಂತೆ ವಾನರಸೈನ್ಯದ ಮೇಲೆ ಬಿದ್ದಿತು.

ಮೇರುಗಿರಿಯು ಆ ಡು ಬರುತ್ತಿದೆಯೋ ಎಂಬಂತೆ ರಥದ ಚೀತ್ಕಾರ, ಆನೆಗಳ ಘೀಂಕಾರ, ಕುದುರೆಗಳ ಹೇಷಾರವಗಳು ಮತ್ತು ವೀರಭಟರ ಸಿಂಹನಾದಗಳು, ಸಮುದ್ರವು ತನ್ನ ದಡವನ್ನು ಮೀರಿ ಬಂದು ಭೂಮಿಯನ್ನು ಕಬಳಿಸುವುದೋ ಎಂಬಂತೆ ದಾನವಸೈನ್ಯದ ಶೀರ ಆರ್ಭಟೆಯು ತ್ರಿಭುವನವನ್ನೂ ತಲ್ಲಣಗೊಳಿಸುವಂತೆ ಕೇಳಿಸುತ್ತಿತ್ತು ಹೊಡೆಯುವ ಭೇರಿಗಳ ಶಬ್ದ, ಬಡಿಯುವ ತಮ್ಮಟೆಗಳ ಆರ್ಭಟ, ಊದುವ ಶಂಖಗಳ ಧ್ವನಿಗಳೂ, ಹಿಡಿ ಹೊಡಿ ಬಡಿ ಕಡಿ' ಎಂಬ ದಾನವರ ಬರಸಿಡಿಲಿನಂತಹ ಕಿರಿಚಾಟಗಳಿಂದ ಭೂಮ್ಯಾಕಾಶಗಳು ತುಂಬಿಬಿಟ್ಟವು. ಅದರಿಂದಾಗಿ ಆಗಸದಲ್ಲಿದ್ದ ಹಕ್ಕಿಗಳೆಲ್ಲ ನೆಲಕ್ಕೆ ಉದುರಿದರೆ, ಪರಸ್ಪರರನ್ನು ಕತ್ತಿಗಳಿಂದ ತಿವಿದು ಹೊಡೆದು ಬಡಿದುದರಿಂದ ಸೈನಿಕರ ರಕ್ತವು ನೆಲದಲ್ಲಿ ಹರಿಯುತ್ತಿತ್ತು.

ಮುಂದುವರೆಯುವುದು



# ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

100

## ವಿಜಯದ ನಗೆ: ಸೋಲಿನೊಳಗಿನ ಬೆಳಕು

**ವೈಜ್ಞಾನಿಕವಾಗಿ ನೋಡಿದರೆ, ಸಕಾರಾತ್ಮಕ ಚಿಂತನೆ ಮೆದುಳಿನ ಒತ್ತಡ ಹಾರ್ಮೋನ್ ಮಟ್ಟವನ್ನು ಕಡಿಮೆ ಮಾಡುತ್ತದೆ. ಇದು ಮನಸ್ಸಿನ ಸ್ಥಿರತೆ, ಗಮನ ಕೇಂದ್ರೀಕರಣ ಮತ್ತು ನಿರ್ಧಾರ ಶಕ್ತಿಯನ್ನು ಹೆಚ್ಚಿಸುತ್ತದೆ. ಸೋಲಿನ ನಂತರದ ಪುನಃ ಪ್ರಯತ್ನವು ಮೆದುಳಿನ ಕಲಿಕೆ ಸಾಮರ್ಥ್ಯವನ್ನು ಬಲಪಡಿಸುತ್ತದೆ.**

ವಿದ್ಯಾರ್ಥಿಯು ತನ್ನ ವಿದ್ಯಾರ್ಥಿ ಜೀವನದಲ್ಲಿ ಯಶಸ್ಸನ್ನು ಸಾಧಿಸಬೇಕಾದರೆ ಸೋಲನ್ನು ಒಪ್ಪಿಕೊಳ್ಳುವ ಧೈರ್ಯ ಮತ್ತು ಸಕಾರಾತ್ಮಕ ಮನೋಭಾವ ಅತ್ಯಂತ ಅಗತ್ಯ. ''ವಿಜಯದ ನಗೆ'' ಎಂದರೆ ಸೋಲಿನ ನಂತರವೂ ಕುಗ್ಗದೆ ಮತ್ತೆ ಎದ್ದು ನಿಲ್ಲುವ ಮನಸ್ಸಿನ ಜಯಗಾನ. ವಿದ್ಯಾರ್ಥಿಯು ತನ್ನ ಜೀವನದಲ್ಲಿ ಯಾವುದೇ ಹಿನ್ನಡೆ ಎದುರಾದಾಗ ಅದನ್ನು ಅಂತ್ಯವೆಂದು ನೋಡುವುದಿಲ್ಲ, ಅದು ಹೊಸ ಆರಂಭವೆಂದು ಅರ್ಥಮಾಡಿಕೊಳ್ಳಬೇಕು. ತಪ್ಪುಗಳನ್ನು ಗುರುತಿಸಿ ಅವುಗಳಿಂದ ಕಲಿಯುವ ಅಭ್ಯಾಸವೇ ನಿಜವಾದ ಶಕ್ತಿ.

ಪ್ರತಿಯೊಂದು ಸೋಲು ಮುಂದಿನ ಗೆಲುವಿಗೆ ಪಾಠವಾಗುತ್ತದೆ. ವಿಜಯದ ನಗೆ ಹೊರುವ ವಿದ್ಯಾರ್ಥಿ ಸೋಲನ್ನು ಭಯಪಡದೆ ಸ್ವೀಕರಿಸುತ್ತಾನೆ. ಅವನಲ್ಲಿ ಆತ್ಮವಿಶ್ವಾಸ, ಸಹನೆ ಮತ್ತು ನಿರಂತರ ಪ್ರಯತ್ನದ ಶಕ್ತಿ ಬೆಳೆಯುತ್ತದೆ. ಹೀಗಾಗಿ ವಿಜಯದ ನಗೆ ಎಂದರೆ ಕೇವಲ ಗೆಲುವಿನ ಗುರುತು ಅಲ್ಲ. ಅದು ಸೋಲಿನ ಮೇಲೆ ಜಯ ಸಾಧಿಸಿದ ಮನಸ್ಸಿನ ಮೌನ ಆದರೆ ಶಕ್ತಿಶಾಲಿ ಘೋಷಣೆ.



# ಬೆಳಗ್ಗೆ ಎದ್ದ ತಕ್ಷಣ ನಡೆದಾಡಿದರೆ ತೀವ್ರವಾದ ಹಿಮ್ಮಡಿ ನೋವು ಕಾಣಿಸುತ್ತದೆಯೇ?: ವೈದ್ಯರು ಸೂಚಿಸುವ ಪರಿಹಾರ ಕ್ರಮಗಳೇನು?

ನಿದ್ರೆಯಿಂದ ಎದ್ದು ನೆಲದ ಮೇಲೆ ಹೆಜ್ಜೆ ಇಟ್ಟ ತಕ್ಷಣವೇ ಹಿಮ್ಮಡಿಯಲ್ಲಿ ಮೊಳೆ ಇಲ್ಲವೇ ಚೂಪಾದ ಸೂಜಿ ಚುಚ್ಚಿದಂತಹ ನೋವು ಅನುಭವಿಸುವುದು ತುಂಬಾ ತೊಂದರೆದಾಯಕವಾಗಿರುತ್ತದೆ. ಕೆಲವು ನಿಮಿಷಗಳ ನಡಿಗೆಯ ಬಳಿಕ ನೋವು ಸ್ವಲ್ಪ ಕಡಿಮೆಯಾಗುತ್ತದೆ. ಇಡೀ ದಿನ ಹೆಚ್ಚು ಹೊತ್ತು ನಡೆದರೆ ಹಾಗೂ ಕೆಲಸದ ಸ್ಥಳದಲ್ಲಿ ನಿರಂತರವಾಗಿ ನಿಂತಾಗ ಹಾಗೂ ಸೋಫಾದಿಂದ ಇದ್ದಕ್ಕಿದ್ದಂತೆ ಎದ್ದಾಗ ಮತ್ತೆ ನೋವು ಕಾಣಿಸಿಕೊಳ್ಳುತ್ತದೆ. ಈ ರೀತಿಯ ಅಸ್ವಸ್ಥತೆ ಅನುಭವಿಸುತ್ತಿದ್ದರೆ, ಪ್ಲಾಂಟರ್ ಫ್ಯಾಸಿಟಿಸ್ ಸಮಸ್ಯೆಯಿಂದ ಬಳಲುತ್ತಿರುವ ಸೂಚನೆಯಾಗಿದೆ. ಹಿಮ್ಮಡಿ ಹಾಗೂ ಪಾದದ ಅಡಿಭಾಗದ ಮೇಲೆ ಪರಿಣಾಮ ಬೀರುವ ಅತ್ಯಂತ ಸಾಮಾನ್ಯವಾಗಿರುವ ಆರೋಗ್ಯದ ಸ್ಥಿತಿಯಾಗಿದೆ. ಮುಖ್ಯವಾಗಿ ದೀರ್ಘಕಾಲದವರೆಗೆ ನಿಲ್ಲುವ ವ್ಯಕ್ತಿಗಳಲ್ಲಿ, ಇದ್ದಕ್ಕಿದ್ದಂತೆ ಓಟ ಅಥವಾ ತೀವ್ರ ವ್ಯಾಯಾಮ ಆರಂಭಿಸುವವರಲ್ಲಿ ಹಾಗೂ ಅಧಿಕ ದೇಹದ ತೂಕವಿರುವವರಲ್ಲಿ ಕಂಡು ಬರುತ್ತದೆ. ಸೂಕ್ತ ಆರೈಕೆಯೊಂದಿಗೆ ಶಸ್ತ್ರಚಿಕಿತ್ಸೆಯಿಲ್ಲದೇ ಈ ಸ್ಥಿತಿಯನ್ನು ಸಂಪೂರ್ಣವಾಗಿ ಗುಣಪಡಿಸಬಹುದು ಎಂದು ವೈದ್ಯರು ತಿಳಿಸುತ್ತಾರೆ.

ಹಿಮ್ಮಡಿಯ ಮೂಳೆಯಿಂದ ಪಾದದ ಬೆರಳುಗಳವರೆಗೆ ಪಾದದ ಅಡಿಭಾಗದಲ್ಲಿ ಹರಡಿರುವ ಬಲವಾದ ಅಂಗಾಂಶದ ಅಂತಿನವರೆಗೆ ಹರಡಿರುತ್ತದೆ. ಇದನ್ನು ಪ್ಲಾಂಟರ್ ಫ್ಯಾಸಿಯಾ ಎಂದು ಕರೆ ಯಲಾಗುತ್ತದೆ. ಈ ಪಟ್ಟಿಯು ಪಾದದ ಕಮಾನು ಭಾಗಕ್ಕೆ ಆಧಾರ ನೀಡುತ್ತದೆ, ನಡೆಯುವಾಗ ಉಂಟಾಗುವ ಒತ್ತಡ ಹೀರಿಕೊಳ್ಳುತ್ತದೆ. ಚೇತರಿಸಿಕೊಳ್ಳಲು ಸಾಕಷ್ಟು ಸಮಯವಿಲ್ಲದೇ ಪದೇ ಪದೆ ಅತಿಯಾದ ಒತ್ತಡಕ್ಕೆ ಒಳಗಾದಾಗ ಹಿಮ್ಮಡಿಯ ಮೂಳೆಯ ಬಳಿ ಸೂಕ್ಷ್ಮವಾದ ಬಿರುಕುಗಳು, ಉರಿಯೂತ ಉಂಟಾಗುತ್ತದೆ. ಈ ಸ್ಥಿತಿಯನ್ನು ಪ್ಲಾಂಟರ್ ಫ್ಯಾಸಿಟಿಸ್ ಎಂದು ಹೇಳಲಾಗುತ್ತದೆ. ದೀರ್ಘಕಾಲದ ಸಮಸ್ಯೆಗಳ ಸಂದರ್ಭದಲ್ಲಿ ಪ್ಲಾಂಟರ್ ಫ್ಯಾಸಿಯೋಪತಿ ಎಂದು ಕರೆಯಲಾಗುತ್ತದೆ.

ನಿದ್ದೆಯ ಸಮಯದಲ್ಲಿ ಪಾದವು ವಿಶ್ರಾಂತಿಯಲ್ಲಿರುತ್ತದೆ, ಪ್ಲಾಂಟರ್ ತಂತುಕೋಶವು ಸ್ವಲ್ಪ ಸಂಕುಚಿತಗೊಳ್ಳುತ್ತದೆ. ಎಚ್ಚರವಾದ ಬಳಿಕ ದೇಹದ ಸಂಪೂರ್ಣ ತೂಕವು ಇದ್ದಕ್ಕಿದ್ದಂತೆ ಪಾದದ ಮೇಲೆ ಬೀಳುತ್ತಿದ್ದಂತೆ ಸಂಕುಚಿತ ಅಂಚಿನ ಭಾಗದ ನೋವು ವೇಗವಾಗಿ ವಿಸ್ತರಿಸುತ್ತದೆ. ಮೊದಲ ಹೆಜ್ಜೆಯಿಂದಲೇ ತೀವ್ರವಾದ, ಇರಿತದ ನೋವು ಕಾಣಿಸುತ್ತದೆ. ಇದನ್ನು ಸಾಮಾನ್ಯವಾಗಿ ಮೊಳೆಯನ್ನು ತಳ್ಳಿದಂತೆ ಭಾಸವಾಗುತ್ತದೆ.

ಸ್ವಲ್ಪ ಸಮಯದವರೆಗೆ ನಡೆದ ಬಳಿಕ, ಬ್ಯಾಂಡ್ ಹೆಚ್ಚು ಹೊಂದಿಕೊಳ್ಳುತ್ತದೆ , ನೋವು ಸ್ವಲ್ಪ ಕಡಿಮೆಯಾಗುತ್ತದೆ. ನಮ್ಮ ಪಾದಗಳು ಪ್ರತಿದಿನ ಅಪಾರ ಒತ್ತಡ ಸಹಿಸಿಕೊಳ್ಳುತ್ತವೆ. ಪ್ಲಾಂಟರ್ ಫ್ಯಾಸಿಟಿಸ್ ಅಪಾಯ ಈ ಅಂಶಗಳಿಂದ ಹೆಚ್ಚಾಗುತ್ತದೆ. ದೀರ್ಘಾವಧಿಯ ನಿಷ್ಕ್ರಿಯತೆಯ ಬಳಿಕ ಇದ್ದಕ್ಕಿದ್ದಂತೆ ನಡೆಯಲು ಇಲ್ಲವೇ ನಿತ್ಯ ಹಲವಾರು ಕಿಲೋಮೀಟರ್ ಓಡಲು ಆರಂಭಿಸುವುದು. ಕೆಲಸದಲ್ಲಿ ಗಟ್ಟಿಯಾದ ಮೇಲ್ಮೈಗಳಲ್ಲಿ ದೀರ್ಘಕಾಲ ನಿಲ್ಲುವುದು. ಸರಿಯಾದ ಕಮಾನು ಬೆಂಬಲ, ಮೆತ್ತನೆಯ ಕೊರತೆಯಿರುವ ಪಾದರಕ್ಷೆಗಳನ್ನು ಧರಿಸುವುದು. ಕೆಲವು ನಗರಗಳಲ್ಲಿ ಕಂಡುಬರುವ ಗಟ್ಟಿಯಾದ ರಸ್ತೆಗಳು, ಪಾದಚಾರಿ ಮಾರ್ಗಗಳಲ್ಲಿ ನಡೆಯುವಾಗ ಉಲ್ಬಣಗೊಳ್ಳುವ ಸಮಸ್ಯೆ ಕಾಣಿಸುತ್ತದೆ. ಅಧಿಕ ತೂಕ ಹಾಗೂ ಪಾದದ ಸ್ನಾಯುಗಳ ಸಮಸ್ಯೆಗಳು ಕಾಣಿಸುತ್ತದೆ.

ಎಕ್ಸ್ – ರೇದಿಂದ ಸಾಮಾನ್ಯವಾಗಿ ಹಿಮ್ಮಡಿಯ ಮೂಳೆಯ ಬಳಿ ಸಣ್ಣ ಮೂಳೆ ಬೆಳವಣಿಗೆಯನ್ನು ಬಹಿರಂಗವಾಗುತ್ತದೆ.

ಇದನ್ನು ಹೀಲ್ ಸ್ಪರ್ ಎಂದು ಕರೆಯಲಾಗುತ್ತದೆ. ರೋಗಿಗಳು ಸಾಮಾನ್ಯವಾಗಿ ಈ ಸ್ಪರ್ ಅಂಗಾಂಶವನ್ನು ಚುಚ್ಚುತ್ತಿದೆ, ಹಿಮ್ಮಡಿ ನೋವನ್ನು ಉಂಟುಮಾಡುತ್ತದೆ ಎಂದು ತಿಳಿಯುತ್ತಾರೆ. ಹೀಲ್ ಸ್ಪರ್ ಸ್ವತಃ ನೋವಿನ ಮೂಲವಲ್ಲ. ಹಲವರಿಗೆ ಹೀಲ್ ಸ್ಪರ್ ಇರುತ್ತದೆ, ಯಾವುದೇ ನೋವು ಅನುಭವಿಸುವುದಿಲ್ಲ.

ಪ್ಲಾಂಟರ್ ಫ್ಯಾಸಿಟಿಸ್ ಪ್ರಕರಣಗಳಲ್ಲಿ ನಿಜವಾದ ಸಮಸ್ಯೆ ಅಂಗಾಂಶದ ಅಂಚಿನಲ್ಲಿ ಇರುತ್ತದೆ.

ಎಕ್ಸ್ ಕಿರಣದಲ್ಲಿ ಹೀಲ್ ಸ್ಪರ್ ಅನ್ನು ನೋಡುವುದು ಎಂದರೆ ಅದನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದುಹಾಕಬೇಕು ಎಂದಲ್ಲ ಎಂದು ವೈದ್ಯರು ವಿವರಿಸುತ್ತಾರೆ. ಪಾದದ ಮೇಲಿನ ಒತ್ತಡ ಕಡಿಮೆ ಮಾಡುವುದು ಚಿಕಿತ್ಸೆಯಲ್ಲಿ ಅತ್ಯಂತ ನಿರ್ಣಾಯಕ ಹಂತವಾಗಿದೆ. ಗೋಡೆಗೆ ಒರಗಿಕೊಂಡು ಕರು ಸ್ನಾಯುಗಳನ್ನು ಹಿಗ್ಗಿಸುವುದು ಸಹಾಯಕವಾಗಿದೆ.



# ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

**ಮೊದಲು ನಾವು ಮಾನವನಾಗಲು ಮಾನವೀಯತೆ ಮತ್ತು ನೀತಿ ಶಿಕ್ಷಣ ಕಡ್ಡಾಯ ನಂತರ ಉಳಿದ ಶಿಕ್ಷಣ ಅವಶ್ಯಕ ಕಾರಣ ರಾಷ್ಟ್ರದ ಸಮಗ್ರ ಏಳಿಗೆಗೆ ಹಾಗೂ ಉತ್ತಮ ಬದುಕಿಗೆ ಶಿಕ್ಷಣ ಬೇಕು. ಶಿಕ್ಷಣದ ಜೊತೆಗೆ ಸುಸಂಸ್ಕೃತ,ಸಂಸ್ಕಾರ, ಸದ್ಬುದ್ಧಿ, ಸನ್ಮಾರ್ಗ,ಶಿಸ್ತು ಇದ್ದಾಗ ಮಾತ್ರ ಒಬ್ಬ ಪರಿಪೂರ್ಣ ವಿದ್ಯಾವಂತನಾಗಲು ಅರ್ಹತೆ ಪಡೆಯುತ್ತಾನೆ. ಇಲ್ಲಿಂದ ಮಾನವೀಯತೆ ಮತ್ತು ನೀತಿ ಶಿಕ್ಷಣ ಪಡೆದ ನಂತರ ಜಗತ್ತಿನ ಯಾವ ಮೂಲೆಯಲ್ಲಾದರೂ ಹೆಚ್ಚಿನ ವ್ಯಾಸಂಗವನ್ನು ಮಾಡುವುದರ ಜೊತೆಗೆ ಬದುಕನ್ನು ಕಟ್ಟಿಕೊಂಡು ಒಬ್ಬ ನಿಜವಾದ ಮನುಷ್ಯನಾಗಿ ಬಾಳಿ ಬದುಕಬಹುದು. ಈ ತರಹ ಶಿಕ್ಷಣ ಇಲ್ಲದೇ ಬೇರೆ ಯಾವುದೇ ಶಿಕ್ಷಣ ಇದ್ದರೂ ಕೂಡ ಪ್ರಯೋಜನವಿಲ್ಲ. ಅದು ಕೇವಲ ಹಣಗಳಿಕೆಗೆ ಹಾಗೂ ಸ್ವಾರ್ಥ ತುಂಬಿರುವ ಐಷಾರಾಮ ಬದುಕಿಗೆ ಮಾತ್ರ ಆದರೆ ಉತ್ತಮ ಮನುಷ್ಯನಾಗಲು ಸಾಧ್ಯವಿಲ್ಲ. ಜಾಗತಿಕ ಮಟ್ಟದಲ್ಲಿ ನಮ್ಮ ರಾಷ್ಟ್ರ ಶಿಕ್ಷಣ ಕ್ಷೇತ್ರದಲ್ಲಿ ಇತರೆ ಪ್ರಬಲ ರಾಷ್ಟ್ರಗಳೊಂದಿಗೆ ಪೈಪೋಟಿಯಾಗಿ ನಿಲ್ಲುವ ಸಮರ್ಥ ರಾಷ್ಟ್ರವಾಗಬೇಕು.**

## ಮಾನವೀಯತೆ ಹಾಗೂ ಮಾನವೀಯ ಮೌಲ್ಯಗಳು ಒಳಗೊಂಡ ನೀತಿ ಶಿಕ್ಷಣ ವಿಶ್ವವಿದ್ಯಾಲಯ ಪ್ರಸ್ತುತ ಅವಶ್ಯಕ ಹಾಗೂ ಅನಿವಾರ್ಯ

ರಾಷ್ಟ್ರ ಸೇರಿ ಇಡೀ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಮಾನವೀಯ ಮೌಲ್ಯಗಳು ಕುಸಿಯುತ್ತಿರುವ ಕಾಲಘಟ್ಟದಲ್ಲಿ ಪ್ರಸ್ತುತ ನಾವುಗಳು ಬದುಕುತ್ತಿದ್ದೇವೆ. ಈಗ್ಗೆ ಐವತ್ತು ವರ್ಷಗಳ ಹಿಂದೆ ಮಾನವೀಯತೆ, ಮಾನವೀಯ ಮೌಲ್ಯಗಳು ಹಾಗೂ ಸಂಸ್ಕಾರ ಇತ್ತು ಆದರೆ ಶಿಕ್ಷಣ ಇರಲಿಲ್ಲ. ಈಗ ಶಿಕ್ಷಣ ಇದೆ, ಮಾನವೀಯತೆ ಮಾಯವಾಗಿದೆ. ಬಹುತೇಕ ಎಲ್ಲಾ ವರ್ಗದ ಜನರು ಆಗ ಬಡವರಾಗಿದ್ದರು ಆದರೆ ಸಂಸ್ಕಾರದಲ್ಲಿ ಶ್ರೀಮಂತರಾಗಿದ್ದರು ಈಗ ಎಲ್ಲಾ ಶ್ರೀಮಂತರು ಆದರೆ ಸಂಸ್ಕಾರದಲ್ಲಿ ಬಡವರಾಗಿದ್ದಾರೆ ಎಂತಹ ವಿಪರ್ಯಾಸ. ಇಂದು ಮಾನವೀಯತೆ ಮತ್ತು ಮಾನವೀಯ ಮೌಲ್ಯಗಳು ಹಾಗೂ ನೀತಿ ಶಿಕ್ಷಣ ಇರುವ ವಿಶ್ವವಿದ್ಯಾಲಯವು ಸರ್ವಾಂಗೀಣ ಸರ್ವತೋಮುಖ ದೂರದೃಷ್ಟಿ ಇಟ್ಟುಕೊಂಡು ಮುಂದಿನ ಭವಿಷ್ಯಕ್ಕೆ ಅವಶ್ಯಕ ಹಾಗೂ ಅನಿವಾರ್ಯ. ಈ ರೀತಿ ಇರುವ ವಿಶ್ವವಿದ್ಯಾಲಯವು ಜಗತ್ತಿನ ಯಾವ ವಿಶ್ವವಿದ್ಯಾಲಯಕ್ಕೂ ಸಮವಿಲ್ಲ.ಇದನ್ನು ಮನುಷ್ಯತ್ವವುಳ್ಳ ಮಾನವ ವಿಶ್ವವಿದ್ಯಾಲಯ ಎಂದೂ ಸಹ ನಾವು ನಾಮಕರಣ ಮಾಡಬಹುದು.

ಜೊತೆಗೆ ಮಾನವೀಯತೆ ಮತ್ತು ನೈತಿಕ ನೀತಿ ಶಿಕ್ಷಣ ದೊರೆತರೆ ವಿಶ್ವದ ಭೂಪಟದಲ್ಲಿ ಭಾರತ ಗುರುತಿಸಿಕೊಳ್ಳುತ್ತದೆ ಹಾಗೂ ಇತಿಹಾಸ ಪುಟವನ್ನು ಸೇರುತ್ತದೆ ಮಿಗಿಲಾಗಿ ಭಾರತವು ಮಾನವೀಯತೆಯಲ್ಲಿ ಗಿನ್ನಿಸ್ ಪುಸ್ತಕದಲ್ಲಿ ಧಾಖಲಾಗುತ್ತದೆ. **ಉದಾಹರಣೆಗೆ:** ಜಪಾನ್ ದೇಶ ಈಗಾಗಲೇ ಗುರುತಿಸಿಕೊಂಡು ಜಗತ್ತಿಗೆ ಮಾದರಿಯಾಗಿದೆ.ಅಲ್ಲಿನ ಪ್ರಾರಂಭಿಕ ಶಿಕ್ಷಣ ಮಾನವೀಯತೆ, ಸಮಯ ಪ್ರಜ್ಞೆ ಮತ್ತು ಶಿಸ್ತು ನಂತರ ಉಳಿದ ಶಿಕ್ಷಣ ಈ ರೀತಿಯ ಶಿಕ್ಷಣ ಕಡ್ಡಾಯ ಜಾರಿಯಲ್ಲಿದೆ. ಇತ್ತೀಚಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರ ಬಹಳ ವೇಗವಾಗಿ ತಡೆರಹಿತ ಓಡುತ್ತಿದೆ. ಈ ವಿಜ್ಞಾನ ಯುಗದಲ್ಲಿ ಕೆಲವರು ಸದ್ಬಳಕೆ ಮಾಡಿಕೊಳ್ಳುವ ಬದಲು ದುರ್ಬಳಕೆ ಮಾಡಿಕೊಂಡು ಬಹಳಷ್ಟು ಮಂದಿ ಸೋಮಾರಿಗಳಾಗುತ್ತಿದ್ದಾರೆ ಹಾಗೂ ಅನ್ಯಮಾರ್ಗಗಳನ್ನು ಕಂಡುಹಿಡಿದುಕೊಂಡಿದ್ದಾರೆ ಎಂತಹ ವಿಪರ್ಯಾಸ. ಇದು ರಾಷ್ಟ್ರದ ನಿರ್ಮಾಣಕ್ಕೆ ಹಾಗೂ ರಾಷ್ಟ್ರದ ಅಭಿವೃದ್ಧಿಗೆ ಮಾರಕ. ಭವಿಷ್ಯದಲ್ಲಿ ಉತ್ತಮ ರಾಷ್ಟ್ರ ನಿರ್ಮಾಣವಾಗಬೇಕಾದರೆ ಉದ್ಯೋಗ ಸಿಗುವ ಶಿಕ್ಷಣದ ಜೊತೆಗೆ ಮಾನವೀಯತೆ ಮತ್ತು ನೀತಿ ಪಾಠ ಪದ್ಧತಿ ಪ್ರಸ್ತುತ ಅವಶ್ಯಕ ಹಾಗೂ ಅನಿವಾರ್ಯ. ಇಂದು ಕೆಲವು ಶಿಕ್ಷಣ ಸಂಸ್ಥೆಗಳು ಮಕ್ಕಳ ಭವಿಷ್ಯದ ಮೇಲೆ ಚೆಲ್ಲಾಟವಾಡುತ್ತಾ ನಾಗಾಲೋಟದಲ್ಲಿ ಹಣದ ಹಿಂದೆ ಓಡುತ್ತಾ ಹೊಸ ಹೊಸ ಅಗತ್ಯ ಶಿಕ್ಷಣ ಪದ್ಧತಿಗಳನ್ನು ಜಾರಿಗೆ ತರುವಲ್ಲಿ ವಿಫಲ ಮತ್ತು ವೈಫಲ್ಯವನ್ನು ಕಂಡಿವೆ.ಇಂದು ಶಿಕ್ಷಣ ಸಂಸ್ಥೆಗಳು ಉದ್ಯೋಗಕ್ಕಾಗಿ ನೀಡುವ ಶಿಕ್ಷಣ ಸರ್ಟಿಫಿಕೇಟ್ ಗಳಾಗಿವೆ ಆದರೆ ಉತ್ತಮ ಜೀವನಕ್ಕಾಗಿ ಶಿಕ್ಷಣವಾಗಿಲ್ಲ. ಯಾವುದೇ ಪರೀಕ್ಷೆಗಳಲ್ಲಿ ಜೀವನವಿಲ್ಲ ಆದರೆ ಜೀವನದಲ್ಲಿ ಪರೀಕ್ಷೆ ಇದೆ. ಶಿಕ್ಷಣ ಕೇವಲ ಉದ್ಯೋಗಕ್ಕೆ ಮೀಸಲಾಗಬಾರದು, ಮಾನವೀಯತೆ ಬೆಳೆಸಲು ಪೂರಕವಾಗಿರಬೇಕು.

**ಶಿಕ್ಷಣ ಕೇವಲ ನೌಕರಿಗೆ ಅವಶ್ಯಕವಲ್ಲ, ಜೀವನಕ್ಕೊಂದು ಆದರ್ಶವನ್ನು, ಬದುಕಿಗೊಂದು ಹಿರಿದಾದ ಗುರಿಯನ್ನು ಮತ್ತು ವ್ಯಕ್ತಿತ್ವಕ್ಕೊಂದು ಹೊಸ ಮೆರಗನ್ನು ನೀಡುವ ಪ್ರಕ್ರಿಯೆಯೇ ನಿಜವಾದ ಶಿಕ್ಷಣ. ರಾಷ್ಟ್ರದಲ್ಲಿ ಬಹುತೇಕ ಎಲ್ಲಾ ವಿಷಯಗಳಲ್ಲೂ ಶಿಕ್ಷಣ ಇರುವ ವಿಶ್ವವಿದ್ಯಾಲಯಗಳು ಇರುವುದುಂಟು ಆದರೆ ಮಾನವೀಯತೆ ಮತ್ತು ನೀತಿ ಶಿಕ್ಷಣ ಸಂಬಂಧ ವಿಶ್ವವಿದ್ಯಾಲಯಗಳು ಇರದೇ ರಾಷ್ಟ್ರ ಹಾಗೂ ಜಗತ್ತು ಬಡವಾಗಿದೆ.**

ಮುಖ್ಯವಾಗಿ ಮಾನವ ಮತ್ತು ಮಾನವನ ನಡುವೆ ಅತ್ಯಂತ ಅವಿನಾಭಾವ ಸಂಬಂಧ ಇಟ್ಟುಕೊಂಡು ಬದುಕು ನಡೆಸುವ ಬಗ್ಗೆ ಬೇಕಾಗಿರುವ ಮಾನವೀಯತೆ ಮತ್ತು ನೀತಿ ಶಿಕ್ಷಣ ಪದ್ಧತಿ (Humanity and Moral Education System ) ರಾಷ್ಟ್ರದಲ್ಲಿ ಪ್ರಸ್ತುತ ಅವಶ್ಯಕ ಹಾಗೂ ಅನಿವಾರ್ಯವಾಗಿ ಕಡ್ಡಾಯವಾಗಬೇಕು.

ಮೌಲ್ಯಗಳು ಮನುಷ್ಯನ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ವಿಕಾಸಗೊಳಿಸುತ್ತದೆ. ವಿಕಾಸವೇ ಜೀವನ, ಸಂಕೋಚವೇ ಮರಣ. ಮನುಷ್ಯನು ಉದಾತ್ತ ಗುರಿಯನ್ನು ಸಾಧಿಸುವಲ್ಲಿ ಮೌಲ್ಯಗಳು ಅತ್ಯಂತ ಸಹಾಯವಾಗುವುದರಿಂದ ಮಾನವ ಬದುಕಿನಲ್ಲಿ ಮೌಲ್ಯಗಳ ಪಾತ್ರ ಗಮನಾರ್ಹವಾಗಿದೆ. ಸತ್ಯ,ಧರ್ಮ, ಅಹಿಂಸೆ,ಶಾಂತಿ, ಪ್ರಾಮಾಣಿಕತೆ ಮುಂತಾದ ಆದರ್ಶಗಳು ಮಾನವೀಯ ಮೌಲ್ಯಗಳು. ಮೌಲ್ಯಗಳಲ್ಲಿ ಶಾರೀರಿಕ,ಆರ್ಥಿಕ, ಧಾರ್ಮಿಕ,ಚಾರಿತ್ರಿಕ, ಬೌದ್ಧಿಕ,ಆಧ್ಯಾತ್ಮಿಕ, ನೈತಿಕ,ಸಾಮಾಜಿಕ ಮುಂತಾದ ಹಲವು ರೀತಿಯ ಮೌಲ್ಯಗಳಿವೆ.

ಈ ರೀತಿಯ ಮಾನವೀಯ ಗುಣಗಳುಳ್ಳ ಮಾನವೀಯತೆ ಮತ್ತು ನೀತಿ ಶಿಕ್ಷಣ ಪ್ರಾರಂಭದಲ್ಲಿ ಮಕ್ಕಳ ಕಲಿಕೆಯ ಶಿಕ್ಷಣದಲ್ಲಿ ಬೇರೂರಬೇಕು. ಈ ರೀತಿಯಾಗಿ ಕಲಿತ ಮಕ್ಕಳು ರಾಷ್ಟ್ರದಲ್ಲಿ ಶಕ್ತಿ ಹಾಗೂ ಆಸ್ತಿವಂತರಾಗಿ ಗುರ್ತಿಸಿಕೊಳ್ಳುವುದರ ಜೊತೆಗೆ ಹೆತ್ತ ತಾಯಿಗೂ ಮತ್ತು ಹೊತ್ತ ನಾಡಿಗೂ ಕೀರ್ತಿ. ಭವಿಷ್ಯದಲ್ಲಿ ಮಕ್ಕಳು ಹೆತ್ತವರಿಗೆ ಮತ್ತು ರಾಷ್ಟ್ರಕ್ಕೆ ಹೊರೆಯಾಗುವುದಿಲ್ಲ. ಈಗಿರುವ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷಣ ಪಡೆದ ಬಹುತೇಕ ಕೆಲವು ಯುವಕ ಯುವತಿಯರು ಹಣದ ಹಿಂದೆ ಓಡುತ್ತಾ ದುಶ್ಚಟಗಳ ದಾಸರಾಗಿ ಸಮಾಜಘಾತಕ ಶಕ್ತಿಗಳಲ್ಲಿ ಸೇರಿಕೊಂಡು ಮಾನವೀಯ ಮೌಲ್ಯಗಳನ್ನು ಮರೆತಿದ್ದಾರೆ.

ಇಂದು ನಮ್ಮ ರಾಷ್ಟ್ರ ಕೆಲವು ಅಕ್ಷರಸ್ತರಿಂದ ಅನ್ಯಾಯ, ಅಸತ್ಯ,ಅಧರ್ಮ, ಅಶಾಂತಿ, ಅಪ್ರಮಾಣಿಕತೆ, ಸುಳ್ಳು,ಮೋಸ, ಲಂಚದಿಂದ ತಾಂಡವಾಡುತ್ತಿದೆ. ಆದರೆ ಅನಕ್ಷರಸ್ಥರಿಂದ ಈ ದೇಶ ಪ್ರಾರಂಭದಿಂದಲೂ ಹಾಳಾಗಿಲ್ಲ.

ಅಕ್ಷರ ಕಲಿತ ವ್ಯಕ್ತಿ ಭವಿಷ್ಯದಲ್ಲಿ ಭ್ರಷ್ಟನಾಗಬಹುದು ಆದರೆ ಸಂಸ್ಕಾರ ಕಲಿತವ ಎಂದಿಗೂ ಭ್ರಷ್ಟನಾಗಲಾರ.

ಇಲ್ಲಿ ಶಿಕ್ಷಣಕ್ಕಿಂತ ಸಂಸ್ಕಾರವೇ ಮುಖ್ಯ.ಆದ್ದರಿಂದ ಮುಂದಿನ ಭವಿಷ್ಯಕ್ಕೆ ದೂರದೃಷ್ಟಿ ಇಟ್ಟುಕೊಂಡು ರಾಷ್ಟ್ರದಲ್ಲಿ ಇತರೆ ವಿಶ್ವವಿದ್ಯಾಲಯಗಳ ಜೊತೆಗೆ ಕಡ್ಡಾಯವಾಗಿ ಮಾನವೀಯತೆ ಮತ್ತು ನೈತಿಕ ನೀತಿ ಶಿಕ್ಷಣ ವಿಶ್ವವಿದ್ಯಾಲಯ ತೆರೆಯುವುದು ಅತ್ಯಂತ ಸೂಕ್ತ, ಅವಶ್ಯಕ ಹಾಗೂ ಅನಿವಾರ್ಯ.ಈ ಬಗ್ಗೆ ಮುಂದಿನ ಎಲ್ಲಾ ಕೋನದಲ್ಲೂ ಅರ್ಥೈಸಿಕೊಂಡರೆ ಭವಿಷ್ಯಕ್ಕೆ ದೂರದೃಷ್ಟಿಯ ಚಿಂತನೆ.

# ಮಕ್ಕಳು ಬ್ರೊಕೊಲಿ ತಿನ್ನಲ್ಲವೇ? ಒಮ್ಮೆ ಈ ರೀತಿ ಪುಲಾವ್ ಮಾಡಿ

ಕೊಲಿ ಎಂದರೆ ಸಾಕು, ಅನೇಕ ಮಕ್ಕಳು ಮುಖ ಸಿಂಡರಿಸುತ್ತಾರೆ. ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ ತರಕಾರಿಯಾಗಿದ್ದರೂ, ಅದರ ರುಚಿ ಮತ್ತು ವಾಸನೆಯ ಕಾರಣದಿಂದ ಮಕ್ಕಳಿಗೆ ಬ್ರೊಕೊಲಿ ಅಷ್ಟಾಗಿ ಇಷ್ಟವಾಗುವುದಿಲ್ಲ. ಆದರೆ ಬ್ರೊಕೊಲಿಯನ್ನು ಸ್ವಲ್ಪ ಮಸಾಲೆಯೊಂದಿಗೆ ರುಚಿಕರವಾಗಿ ತಯಾರಿಸಿದರೆ ಮಕ್ಕಳು ಕೂಡ ಖುಷಿಯಿಂದ ತಿನ್ನಬಹುದು. ಅದರಲ್ಲೂ ತುಪ್ಪದ ಸುವಾಸನೆ, ಗೋಡಂಬಿಯ ರುಚಿ ಮತ್ತು ಮಸಾಲೆಯ ಪರಿಮಳ ಹೊಂದಿರುವ ಬ್ರೊಕೊಲಿ ಪುಲಾವ್ ಊಟದ ಬಾಕ್ಸ್‌ಗೆ ಮಾತ್ರವಲ್ಲ, ರಾತ್ರಿ ಊಟಕ್ಕೂ ಉತ್ತಮ ಆಯ್ಕೆಯಾಗುತ್ತದೆ.

ಈ ರುಚಿಕರವಾದ ಬ್ರೊಕೊಲಿ ಪುಲಾವ್ ತಯಾರಿಸಲು 100 ಗ್ರಾಂ ಬ್ರೊಕೊಲಿ, ಮೂರು ಕಪ್ ಬೇಯಿಸಿದ ಸೋನಾ ಮಸೂರಿ ಅಕ್ಕಿ, ಒಂದು ಚಮಚ ತುಪ್ಪ, ಕೊನೆಯಲ್ಲಿ ಸೇರಿಸಲು ಅರ್ಧ ಚಮಚ ತುಪ್ಪ, ಎಂಟು ಗೋಡಂಬಿ, ಅರ್ಧ ಕಪ್ ಸಣ್ಣಗೆ ಹೆಚ್ಚಿದ ಈರುಳ್ಳಿ, ಎರಡು ಹಸಿಮೆಣಸಿನಕಾಯಿ, ಎರಡು ಬೆಳ್ಳುಳ್ಳಿ ಎಸಳು, ಕಾಲು ಚಮಚ ಅರಿಶಿನ, ಒಂದು ಚಮಚ ಗರಂ ಮಸಾಲ, ಕಾಲು ಚಮಚ ಕಾಳುಮೆಣಸಿನ ಪುಡಿ, ರುಚಿಗೆ ತಕ್ಕಷ್ಟು ಉಪ್ಪು, ಅರ್ಧ ಚಮಚ ನಿಂಬೆ ರಸ ಮತ್ತು ಸ್ವಲ್ಪ ಎಳ್ಳೆಣ್ಣೆ ಬೇಕಾಗುತ್ತದೆ. ಮೊದಲಿಗೆ ಮೂರು ಕಪ್ ಬೇಯಿಸಿದ ಸೋನಾ ಮಸೂರಿ ಅಕ್ಕಿಯನ್ನು ಅಗಲವಾದ ತಟ್ಟೆಗೆ ಹಾಕಿ ಹರಡಿ. ಅನ್ನದ ಮೇಲೆ ಸ್ವಲ್ಪ ಎಳ್ಳೆಣ್ಣೆಯನ್ನು ಚಿಮುಕಿಸಿ ನಿಧಾನವಾಗಿ ಮಿಶ್ರಣ ಮಾಡಿ. ನಂತರ ಅನ್ನವನ್ನು ಸ್ವಲ್ಪ ಸಮಯ ತಣ್ಣಗಾಗಲು ಬಿಡಿ. ಈ ರೀತಿ ಮಾಡುವುದರಿಂದ ಅನ್ನದ ಕಾಳುಗಳು ಒಂದಕ್ಕೊಂದು ಅಂಟಿಕೊಳ್ಳದೆ ಪ್ರತ್ಯೇಕವಾಗಿರುತ್ತವೆ.

ಪುಲಾವ್ ಮಾಡುವಾಗ ಅನ್ನ ಮುದ್ದೆಯಾಗದಂತೆ ನೋಡಿಕೊಳ್ಳುವುದು ಈ ಹಂತದಲ್ಲಿ ಬಹಳ ಮುಖ್ಯ.

ಈಗ ಒಂದು ಪಾತ್ರೆಯಲ್ಲಿ ನೀರು ಕುದಿಸಿ ಅದರ ಮೇಲೆ ಸ್ಟೀಮರ್ ಇಡಿ. ಸ್ವಚ್ಛವಾಗಿ ತೊಳೆದು ಸಣ್ಣ ತುಂಡುಗಳಾಗಿ ಕತ್ತರಿಸಿರುವ ಬ್ರೊಕೊಲಿಯನ್ನು ಸ್ಟೀಮರ್‌ನಲ್ಲಿ ಹಾಕಿ ಸುಮಾರು ಐದು ನಿಮಿಷ ಆವಿಯಲ್ಲಿ ಬೇಯಿಸಿ. ಬ್ರೊಕೊಲಿಯನ್ನು ತುಂಬಾ ಮೃದುವಾಗುವವರೆಗೆ ಬೇಯಿಸಬಾರದು. ಈಗ ಒಲೆಯ ಮೇಲೆ ದಪ್ಪವಾದ ಅಗಲದ ಬಾಣಲೆ ಇಟ್ಟು ಒಂದು ಚಮಚ ತುಪ್ಪ ಹಾಕಿ ಬಿಸಿ ಮಾಡಿ. ತುಪ್ಪ ಕರಗಿದ ಬಳಿಕ ಗೋಡಂಬಿಯನ್ನು ಹಾಕಿ ಹೊಂಬಣ್ಣ ಬರುವವರೆಗೆ ಹುರಿಯಿರಿ. ಗೋಡಂಬಿ ಚೆನ್ನಾಗಿ ಹುರಿದ ಬಳಿಕ ಅದನ್ನು ಬಾಣಲೆಯಿಂದ ತೆಗೆದು ಪ್ರತ್ಯೇಕವಾಗಿ ಇಟ್ಟುಕೊಳ್ಳಿ. ಕೊನೆಯಲ್ಲಿ ಇವುಗಳನ್ನು



ಪುಲಾವ್‌ಗೆ ಸೇರಿಸಿದರೆ ಪ್ರತಿ ತುತ್ತಿನಲ್ಲೂ ಗರಿಗರಿಯಾದ ರುಚಿ ಸಿಗುತ್ತದೆ. ಅದೇ ಬಾಣಲೆಗೆ ಸಣ್ಣಗೆ ಹೆಚ್ಚಿದ ಈರುಳ್ಳಿ, ಬೆಳ್ಳುಳ್ಳಿ ಮತ್ತು ಹಸಿಮೆಣಸಿನಕಾಯಿ ಹಾಕಿ ಹುರಿಯಿರಿ. ಈರುಳ್ಳಿ ಮೃದುವಾಗುವವರೆಗೆ ಹುರಿಯಬೇಕು.

ನಂತರ ಅರಿಶಿನ, ಗರಂ ಮಸಾಲ, ಕಾಳುಮೆಣಸಿನ ಪುಡಿ ಸೇರಿಸಿ. ಉರಿಯನ್ನು ಕಡಿಮೆ ಮಾಡಿ ಮಸಾಲೆಯನ್ನು ಒಂದೆರಡು ನಿಮಿಷ ಚೆನ್ನಾಗಿ ಹುರಿಯಿರಿ. ಮಸಾಲೆಯ ಹಸಿ ವಾಸನೆ ಹೋಗಿ ಉತ್ತಮ ಸುವಾಸನೆ ಬಂದ ಬಳಿಕ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ. ಈಗ ಬೇಯಿಸಿ ಇಟ್ಟುಕೊಂಡಿರುವ ಬ್ರೊಕೊಲಿ ತುಂಡುಗಳನ್ನು ಮಸಾಲೆಗೆ ಸೇರಿಸಿ. ಸುಮಾರು ಒಂದು ನಿಮಿಷ ನಿಧಾನವಾಗಿ ಹುರಿಯಿರಿ. ಇದರಿಂದ ಮಸಾಲೆಯ ರುಚಿ ಬ್ರೊಕೊಲಿಗೆ ಚೆನ್ನಾಗಿ ಹೀರಿಕೊಳ್ಳುತ್ತದೆ. ನಂತರ ತಣ್ಣಗಾಗಿರುವ ಅನ್ನವನ್ನು ಬಾಣಲೆಗೆ ಹಾಕಿ. ಅನ್ನದ ಕಾಳುಗಳು ಮುರಿಯದಂತೆ ನಿಧಾನವಾಗಿ ಎಲ್ಲವನ್ನೂ ಮಿಶ್ರಣ ಮಾಡಿ.ಒಲೆ ಆಫ್ ಮಾಡಿದ ಬಳಿಕ ಅರ್ಧ ಚಮಚ ನಿಂಬೆ ರಸ, ಹುರಿದು ಇಟ್ಟುಕೊಂಡಿರುವ ಗೋಡಂಬಿ ಮತ್ತು ಅರ್ಧ ಚಮಚ ತುಪ್ಪವನ್ನು ಸೇರಿಸಿ ನಿಧಾನವಾಗಿ ಮಿಶ್ರಣ ಮಾಡಿ. ತುಪ್ಪದ ಸುವಾಸನೆ ಮತ್ತು ನಿಂಬೆ ರಸದ ಸ್ವಲ್ಪ ಹುಳಿ ಪುಲಾವ್‌ನ ರುಚಿಯನ್ನು ಮತ್ತಷ್ಟು ಹೆಚ್ಚಿಸುತ್ತದೆ.

# ಸಿಂಪಲ್ ರೆಸಿಪಿ; ಕೇವಲ 20 ನಿಮಿಷ ಮಂಗಳೂರು ಸೌತೆ-ಕೊಬ್ಬರಿ ಸ್ಪೆಷಲ್ ಚಟ್ನಿ

ಬ್ಯಾಚುಲರ್ ಜೀವನದಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ಕೆಲಸ ಪ್ರಯಾಣ ಮತ್ತು ಇತರ ಕೆಲಸಗಳ ನಡುವೆ ಅಡುಗೆ ಮಾಡಲು ಸಮಯವೇ ಸಿಗುವುದಿಲ್ಲ. ಮನೆಯವರು ಮಾಡಿದಂತಹ ರುಚಿ ಬೇಕೆಂದು ಮನಸ್ಸು ಆಸೆಪಡುತ್ತದೆ. ಆದರೆ ಹೆಚ್ಚು ಪದಾರ್ಥಗಳು ಬೇಕಾಗುವುದು, ತಯಾರಿಸಲು ಹೆಚ್ಚು ಸಮಯ ಹಿಡಿಯುವುದು ಇವೆಲ್ಲವೂ ಕಷ್ಟವಾಗಿ ಕಾಣುತ್ತದೆ. ಅಂತಹ ಸಮಯದಲ್ಲಿ ಮನೆಯಲ್ಲೇ ಸಿಗುವ ಸರಳ ವಸ್ತುಗಳಿಂದಲೇ ಮನೆಯ ರುಚಿ ಬರುವ ಒಂದು ಚಟ್ನಿ ಇದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅನ್ನಿಸುತ್ತದೆ. ಮಂಗಳೂರು ಸೌತೆ-ಕೊಬ್ಬರಿ ಚಟ್ನಿ ಅದ್ಭುತ ರುಚಿಯನ್ನು ಕೊಡುತ್ತದೆ. ಈ ಚಟ್ನಿಯಲ್ಲಿ ಫ್ರೆಶ್ ವಾಸನೆ ಮತ್ತು ಮೃದುವಾದ ರುಚಿ ಇರುತ್ತದೆ. ಇದನ್ನು ಮಾಡುವುದು ಸುಲಭವಾಗಿದ್ದು, **ಬ್ಯಾಚುಲರ್‌ಗಳಿಗೆ ತುಂಬಾ ಅನುಕೂಲ.**

**ಮಂಗಳೂರು ಸೌತೆಕಾಯಿ: 1 ಕಪ್ (ಸಿಪ್ಪೆ ಮತ್ತು ಬೀಜ ತೆಗೆದು ಸಣ್ಣದಾಗಿ ಹೆಚ್ಚಿದ್ದು) ತುರಿದ ಹಸಿ ಕೊಬ್ಬರಿ:** 1/2 ಕಪ್ ಹಸಿರು ಮೆಣಸಿನಕಾಯಿ: 3 ರಿಂದ 4 (ನಿಮ್ಮ ಖಾರಕ್ಕೆ ತಕ್ಕಂತೆ) **ಹುಣಸೆಹಣ್ಣು: ಸಣ್ಣ ನೆಲ್ಲಿಕಾಯಿ ಗಾತ್ರದ್ದು ಬೆಲ್ಲ:** 1 ಸಣ್ಣ ಚೂರು (ಆಪ್ಷನಲ್ – **ರುಚಿಗೆ ತಕ್ಕಂತೆ) ಕೊತ್ತಂಬರಿ ಸೊಪ್ಪು: ಸ್ವಲ್ಪ ಉಪ್ಪು:** ರುಚಿಗೆ ತಕ್ಕಷ್ಟು ಎಣ್ಣೆ – 2 ಚಮಚ, ಸಾಸಿವೆ – 1/2 ಚಮಚ, ಉದ್ದಿನಬೇಳೆ – 1 ಚಮಚ, ಒಣಮೆಣಸಿನಕಾಯಿ – 1, ಕರಿಬೇವಿನ ಸೊಪ್ಪು – ಸ್ವಲ್ಪ, ಇಂಗು – ಒಂದು ಚಿಟಿಕೆ. ಮಂಗಳೂರು ಸೌತೆಕಾಯಿಯನ್ನು ಚೆನ್ನಾಗಿ ತೊಳೆಯಿರಿ. ಸಿಪ್ಪೆ ತೆಗೆದು, ಒಳಗಿನ ಬೀಜದ ಭಾಗವನ್ನು ತೆಗೆದುಹಾಕಿ, ಸಣ್ಣ ತುಂಡುಗಳಾಗಿ ಕತ್ತರಿಸಿಡಿ.

ಬಾಣಲೆಯಲ್ಲಿ 1 ಚಮಚ ಎಣ್ಣೆ ಬಿಸಿಮಾಡಿ. ಹಸಿರು ಮೆಣಸಿನಕಾಯಿ ಮತ್ತು ಕತ್ತರಿಸಿದ ಸೌತೆಕಾಯಿ ತುಂಡುಗಳನ್ನು ಹಾಕಿ. ಹಸಿ ವಾಸನೆ ಹೋಗುವವರೆಗೆ 2–3 ನಂತರ ತಣ್ಣಗಾಗಲು ಬಿಡಿ.

ಮಿಕ್ಸರ್ ಜಾರ್‌ಗೆ ಹುರಿದ ಸೌತೆಕಾಯಿ–ಮೆಣಸಿನಕಾಯಿ, ತೆಂಗಿನಕಾಯಿ, ಹುಣಸೆಹಣ್ಣು, ಬೆಲ್ಲ, ಕೊತ್ತಂಬರಿ ಸೊಪ್ಪು ಮತ್ತು ಬೇಕಾದಷ್ಟು ಉಪ್ಪು ಬಾಣಲೆಯಲ್ಲಿ ಎಣ್ಣೆ ಬಿಸಿಮಾಡಿ. ಸಾಸಿವೆ, ಉದ್ದಿನಬೇಳೆ, ಒಣ ಮೆಣಸಿನಕಾಯಿ, ಇಂಗು ಮತ್ತು ಕರಿಬೇವಿನ ಸೊಪ್ಪು ಹಾಕಿ ಒಗ್ಗರಣೆ ಮಾಡಿ. ಈ ಒಗ್ಗರಣೆಯನ್ನು ರುಬ್ಬಿದ ಚಟ್ನಿಗೆ ಸೇರಿಸಿ ಚೆನ್ನಾಗಿ ಬೆರೆಸಿ. ಈಗ ಮಂಗಳೂರು ಸೌತೆ–ಕೊಬ್ಬರಿ ಸ್ಪೆಷಲ್ ಚಟ್ನಿ ರೆಡಿ.

ಎಂಆರ್‌ಐ ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ಬೇರೆ ಜಿಲ್ಲೆಗಳಿಗೆ ತೆರಳಬೇಕಾಗಿರುವುದರಿಂದ ರೋಗಿಗಳಿಗೆ ಬಹಳಷ್ಟು ತೊಂದರೆ ಉಂಟಾಗುತ್ತಿದೆ

# ಹಾವೇರಿ ಜಿಲ್ಲಾಸ್ಪತ್ರೆಯಲ್ಲಿ ಇನ್ನೂ ಕಾರ್ಯಾರಂಭಿಸದ ಎಂಆರ್‌ಐ ಸ್ಕ್ಯಾನರ್

**ಉದಯವಾಹಿನಿ, ಹಾವೇರಿ**

ಜಿಲ್ಲಾಸ್ಪತ್ರೆಯ ಬಡರೋಗಿಗಳ ಪರದಾಟ ತಪ್ಪಿಸುವ ಸಲುವಾಗಿ ಎಂಆರ್‌ಐ ಸ್ಕ್ಯಾನರ್ ಬಿಡುಗಡೆ ಮಾಡಲಾಗಿದೆ. ಎಂಆರ್‌ಐ ಸ್ಕ್ಯಾನರ್ ಆಸ್ಪತ್ರೆಗೆ ಬಂದು ಮೂರು ತಿಂಗಳಾಗಿವೆ. ಎಂಆರ್‌ಐ ಯಂತ್ರದ ಇನ್‌ಸ್ಟಾಲೇಶನ್ ಸಹ ಆಗಿದೆ. ಆದರೆ ಎಂಆರ್‌ಐ ಸ್ಕ್ಯಾನಿಂಗ್ ಮಾತ್ರ ಆರಂಭವಾಗಿಲ್ಲ. ಇದು ಬಡರೋಗಿಗಳಿಗೆ ತೀವ್ರ ನಿರಾಶೆ ಮೂಡಿಸಿದೆ.

**1.** ಹಣ, ಸಮಯ, ಆರೋಗ್ಯಕ್ಕೆ ಹಾನಿ
**2.** ತಿಂಗಳುಗಟ್ಟಲೆ ಸರತಿಗಾಗಿ ಕಾಯಬೇಕು
**3.** ಯಂತ್ರದ ಅಳವಡಿಕೆ ಪೂರ್ಣವಾಗಿಲ್ಲ

ಹಾವೇರಿ ಜಿಲ್ಲಾಸ್ಪತ್ರೆಗೆ ಬರುವ ರೋಗಿಗಳು ಈ ಹಿಂದೆ ಎಂಆರ್‌ಐ ಸ್ಕ್ಯಾನಿಂಗ್‌ಗಾಗಿ ದಾವಣಗೆರೆ, ಹುಬ್ಬಳ್ಳಿ, ಶಿವಮೊಗ್ಗ ಮತ್ತು ಚಿತ್ರದುರ್ಗ ಸೇರಿದಂತೆ ದೂರ ದೂರದ ಊರುಗಳಿಗೆ ತೆರಳಬೇಕಾದ ಅನಿವಾರ್ಯತೆ ಇತ್ತು. ಇದನ್ನರಿತ ಹಾವೇರಿ ಜಿಲ್ಲೆಯ ಹಿಂದಿನ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ್ ಜಿಲ್ಲಾಸ್ಪತ್ರೆಗೆ ಎಂಆರ್‌ಐ ಸ್ಕ್ಯಾನಿಂಗ್ ಸೆಂಟರ್ ಬೇಕು ಎಂದು ಯಂತ್ರ ತರಿಸುವ ವ್ಯವಸ್ಥೆ ಮಾಡಿದ್ದರು. ಅದರಂತೆ ಜೂನ್ ತಿಂಗಳಲ್ಲಿ ಹಾವೇರಿ ಜಿಲ್ಲಾಸ್ಪತ್ರೆಗೆ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರ ಬಂದಿದೆ. ಬಂದ ನಂತರ ಅದರ ಇನ್‌ಸ್ಟಾಲೇಶನ್ ಸಹ ಆರಂಭವಾಗಿದ್ದು, ಜಿಲ್ಲಾಸ್ಪತ್ರೆಯ ರೋಗಿಗಳಿಗೆ ಸಂತಸ ತಂದಿತ್ತು. ಆದರೆ ಇದೀಗ ಇನ್‌ಸ್ಟಾಲೇಶನ್ ಕಾರ್ಯ ಮುಗಿದರೂ ಎಂಆರ್‌ಐ ಸ್ಕ್ಯಾನಿಂಗ್ ಆರಂಭವಾಗದಿರುವುದು ಬಡರೋಗಿಗಳಿಗೆ ಬೇಸರ ತರಿಸಿದೆ.

ಜಿಲ್ಲಾಸ್ಪತ್ರೆಗೆ ಹಾವೇರಿ ಸೇರಿ ಎಂಟು ತಾಲ್ಲೂಕುಗಳಿಂದ ದಿನನಿತ್ಯ 500ಕ್ಕೂ ಅಧಿಕ ರೋಗಿಗಳು ಚಿಕಿತ್ಸೆಗೆ ಆಗಮಿಸುತ್ತಾರೆ. ಅದರಲ್ಲಿ ಕೆಲವರು ಹೊರರೋಗಿಗಳಾದರೆ ಇನ್ನೂ ಕೆಲವರನ್ನು ಒಳರೋಗಿಗಳಾಗಿ ಅಡ್ಮಿಟ್ ಮಾಡಿಕೊಳ್ಳಲಾಗುತ್ತದೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ಹುಬ್ಬಳ್ಳಿಯ ಕಿಮ್ಸ್‌ಗೆ ರೆಫರ್ ಮಾಡಲಾಗುತ್ತದೆ. ಈ ಮಧ್ಯ ಬಡರೋಗಿಗಳಿಗೆ ಎಂಆರ್‌ಐ ಸ್ಕ್ಯಾನ್ ಮಾಡಿಸುವ ಅನಿವಾರ್ಯತೆ ಬಂದರೆ ಅವರು ಚಿತ್ರದುರ್ಗ, ಶಿವಮೊಗ್ಗ ಸರ್ಕಾರಿ ಆಸ್ಪತ್ರೆಗಳಿಗೆ ತೆರಳಬೇಕು. ಅಲ್ಲಿ ಯಾವ ದಿನಾಂಕ ನೀಡುತ್ತಾರೆ ಆ ದಿನಾಂಕಕ್ಕೆ ಹೋಗಿ ಸ್ಕ್ಯಾನ್ ಮಾಡಿಸಿಕೊಂಡು ಬರಬೇಕು. ಖಾಸಗಿ ಆಸ್ಪತ್ರೆಗಳಿಗೆ ಹೋಗಬೇಕು ಅಂದರೂ ಹುಬ್ಬಳ್ಳಿ, ದಾವಣಗೆರೆಗಳಿಗೆ ಹೋಗಬೇಕು. ಅಲ್ಲದೆ, ಐದಾರು ಸಾವಿರ ರೂಪಾಯಿ ವ್ಯಯಿಸಬೇಕು. ಇದರಿಂದ ಒಂದು ಕಡೆ ಸಮಯ ವ್ಯರ್ಥವಾಗುತ್ತದೆ. ಮತ್ತೊಂದು ಕಡೆ ಹಣ ಸಹ ಹಾಳಾಗುತ್ತದೆ. ದೂರ ದೂರದ ಊರುಗಳಿಗೆ ತೆರಳುವ ವಾಹನ ಬಾಡಿಗೆ ಪಡೆಯಬೇಕು. ತಿಂಗಳುಗಟ್ಟಲೆ ಸರತಿಗಾಗಿ ಕಾಯಬೇಕು. ರೋಗಿಗಳ ಎಂಆರ್‌ಐ ಸ್ಕ್ಯಾನಿಂಗ್ ಸರತಿಯಲ್ಲಿ ಬರಬೇಕು ಅಂದರೆ ನಮ್ಮ ಆರೋಗ್ಯವೇ ಹಾಳಾಗಿಹೋಗಿರುತ್ತೆ ಎನ್ನುತ್ತಾರೆ ರೋಗಿಗಳ ಸಂಬಂಧಿಕರು. ಹಾವೇರಿ ಜಿಲ್ಲಾಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ಪಿ.ಆರ್. ಹಾವನೂರು, "ಜಿಲ್ಲಾಸ್ಪತ್ರೆಗೆ ಎಂಆರ್‌ಐ ಸ್ಕ್ಯಾನರ್ ಮಷಿನ್ ಬಂದು ಕೆಲವೇ ತಿಂಗಳುಗಳಾಗಿವೆ. ಆದರೆ ಎಂಆರ್‌ಐ ಸ್ಕ್ಯಾನರ್ ಯಂತ್ರದ ಅಳವಡಿಕೆ ಪೂರ್ಣವಾಗಿಲ್ಲ. ಎಂಆರ್‌ಐ ಆಪರೇಟ್ ಮಾಡಲು ನಮ್ಮಲ್ಲಿ ತಂತ್ರಜ್ಞರಿದ್ದಾರೆ, ವೈದ್ಯರು ಸಹ ಇದ್ದಾರೆ. ಆದರೆ ಎಂಆರ್‌ಐ ಸ್ಕ್ಯಾನರ್ ಇನ್‌ಸ್ಟಾಲೇಶನ್ ಸಂಪೂರ್ಣವಾಗಿ ಮುಗಿದಿಲ್ಲ. ಈ ಹಿನ್ನೆಲೆಯಲ್ಲಿ ಸ್ಕ್ಯಾನಿಂಗ್ ಕಾರ್ಯಾರಂಭ ಮಾಡಿಲ್ಲ.



ಉದಯವಾಹಿನಿ ಚಿತ್ರ

ಹಾವೇರಿ ಜಿಲ್ಲಾಸ್ಪತ್ರೆಗೆ ಎಂಆರ್‌ಐ ಸ್ಕ್ಯಾನರ್ ಮಾಡಬೇಕು ಎನ್ನುವುದು ಬಹುದಿನಗಳ ಬೇಡಿಕೆಯಾಗಿತ್ತು. ಈಗ ಎಂಆರ್‌ಐ ಸ್ಕ್ಯಾನರ್ ಬಂದು ರೆಡಿಯಾಗಿದೆ. ಆದರೆ ಕಾರ್ಯಾರಂಭ ಮಾಡಿಲ್ಲ. ಎಂಆರ್‌ಐ ಸ್ಕ್ಯಾನಿಂಗ್ ಶುರುವಾದರೆ ಒಳ್ಳೆಯದಾಗುತ್ತದೆ. ವೈದ್ಯರು ಬರಬೇಕು ಅಂತ ಸುಮ್ಮನೆ ಇದ್ದಾರೆ. ಆದರೆ ಜನರಿಗೆ ಸಮಸ್ಯೆಯಾಗುತ್ತಿದೆ.
– ಅಬ್ದುಲ್ ಖಾದರ್, ಸಮಾಜಸೇವಕ

### ದೂರದ ನಗರಗಳಿಗೆ ಹೋಗಬೇಕು....

ಹುಬ್ಬಳ್ಳಿ, ಶಿವಮೊಗ್ಗ, ಗದಗ ನಗರಗಳಿಗೆ ಹೋಗಬೇಕು. ಇದರಿಂದ ಬಡರೋಗಿಗಳಿಗೆ ಬಹಳ ತೊಂದರೆಯಾಗಿದೆ. ಅನಾರೋಗ್ಯ ಕಾರಣದಿಂದ ಜಿಲ್ಲಾಸ್ಪತ್ರೆಗೆ ಬಂದಿರುತ್ತಾರೆ. ಅವರನ್ನು ಮತ್ತೆ ಕಾರಿನಲ್ಲಿ ಕರೆದುಕೊಂಡು ಬೇರೆ ಊರಿಗೆ ಹೋಗಿ ಎಂಆರ್‌ಐ ಸ್ಕ್ಯಾನ್ ಮಾಡಿಸಿಕೊಂಡು ಬರುವುದು ಕಷ್ಟದ ಕೆಲಸ" ಎಂದು ಸಮಸ್ಯೆಯನ್ನು ವಿವರಿಸಿದರು.

---

## ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಅಧಿಕಾರಕ್ಕೆ

**ಉದಯವಾಹಿನಿ, ಕಲಬುರಗಿ**

ಮುಂಬರುವ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು. ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಪಕ್ಷದ ಅಭ್ಯರ್ಥಿ ಶಶಿಲ್ ನಮೋಶಿ ನಾಮಪತ್ರ ಸಲ್ಲಿಕೆ ಹಿನ್ನೆಲೆಯಲ್ಲಿ ನಗರಕ್ಕೆ ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.



ಹೆಚ್.ಡಿ.ಕುಮಾರಸ್ವಾಮಿ ಅವರು ಮೈತ್ರಿ ಸರ್ಕಾರದ ಮುಂದಿನ ಸಿಎಂ ಎನ್ನುವ ವಿಚಾರ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿದ ಅವರು, ಬಿಜೆಪಿ-ಜೆಡಿಎಸ್ ಮೈತ್ರಿ ಕೂಟ ಅಧಿಕಾರಕ್ಕೆ ಬರುತ್ತದೆ. ಬಳಿಕ ಯಾರು ಸಿಎಂ ಆಗಬೇಕು ಎಂಬುವುದರ ತೀರ್ಮಾನವಾಗುತ್ತದೆ. ಚುನಾವಣೆ ಬಳಿಕ ಯಾರು ಸಿಎಂ ಎಂಬುದು ಈಗಾಗಲೇ ವಿಜಯೇಂದ್ರ ಸ್ಪಷ್ಟಪಡಿಸಿದ್ದಾರೆ. ಮೊದಲು ಚುನಾವಣೆಯನ್ನು ಎದುರಿಸುತ್ತೇವೆ. ನಮ್ಮ ಬಳಿ ಬಿಜೆಪಿ ಜೆಡಿಎಸ್ ಎರಡು ಒಂದೆ ಎಂಬ ಅಭಿಪ್ರಾಯವಿದೆ. ಸಿಎಂ ಯಾರಾಗಬೇಕು ಎನ್ನುವುದು ನಂತರ ತೀರ್ಮಾನವಾಗುತ್ತದೆ ಎಂದರು. 2028 ರಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಸಿಎಂ ಡಿಕೆ ಶಿವಕುಮಾರ್ ಇನ್ನು ಭ್ರಮೆಯಲ್ಲಿದ್ದಾರೆ ಇರಲಿ, ಅವರ ಭ್ರಮೆಗೆ ನಮ್ಮ ಅಭ್ಯಂತರವೇನೂ ಇಲ್ಲ. ಹಣ ಹೆಂಡ ಬಲದ ಮೇಲೆ ಚುನಾವಣೆಯಲ್ಲಿ ಗೆಲ್ಲುವ ಕಾಲ ಹೋಗಿದೆ. ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಈ ಸರ್ಕಾರಕ್ಕೆ ಪಾಠ ಕಲಿಸಬೇಕು ಅಂದ್ರೆ ಈ ಚುನಾವಣೆಯಲ್ಲಿ ಸೋಲಿಸಬೇಕಿದೆ ಎಂದು ಹೇಳಿದರು.

## ಕಾಂಗ್ರೆಸ್ ಕೈಗೆ ದೇಶದ ಚುಕ್ಕಾಣಿ ಸಿಕ್ಕರೆ ಭಾರತ ಮರಳಿ ಪಾಕಿಸ್ತಾನದಲ್ಲಿ ವಿಲೀನವಾಗುತ್ತೆ

**ಉದಯವಾಹಿನಿ, ಗದಗ**

ದೇಶದ ಚುಕ್ಕಾಣಿ ಕಾಂಗ್ರೆಸ್ ಕೈನಲ್ಲಿ ಸಿಕ್ಕರೆ ಭಾರತ ಮರಳಿ ಪಾಕಿಸ್ತಾನಕ್ಕೆ ಮರ್ಜ್ ಆಗುತ್ತೆ ಎಂದು ಮಾಜಿ ಸಚಿವ ಸಿ.ಸಿ ಪಾಟೀಲ್ ಲೇವಡಿ ಮಾಡಿದ್ದಾರೆ.



ಗದಗದಲ್ಲಿ ರಾಮಕೃಷ್ಣ ಹೆಗಡೆ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತಮ್ಮ ವೈಫಲ್ಯ ಮರೆಮಾಚಲು ಎಸ್‌ಐಆರ್, ಇವಿಎಮ್ ಮತ್ತು ಕೇಂದ್ರ ಸರ್ಕಾರದ ಬಗ್ಗೆ ಮಾತನಾಡ್ತಾರೆ. ಬರ ಪರಿಹಾರ ಎಂದು ರೈತರಿಗೆ 2500 ರೂ. ಬೃಹತ್ ಘೋಷಣೆ ಮಾಡಿದ್ದಾರೆ. ಇದು ಜಗತ್ತಿನಲ್ಲಿ 8ನೇ ಅದ್ಭುತ. ಇದೊಂದು ರೈತ ಪರ ಸರ್ಕಾರ ಎಂದು ಟೀಕಿಸಿದರು. ಡಿ.ಕೆ ಶಿವಕುಮಾರ್ ಆಡಳಿತ ವೈಫಲ್ಯತೆ ಕಂಡಿದೆ. ಫ್ಲೇನ್ ಟೇಕ್ ಆಫ್ ಆಗುವ ಹಂತದಲ್ಲಿಲ್ಲ. ರನ್-ವೇಗೆ ಬಂದು ನಿಂತಿದೆ ಎಂದು ವ್ಯಂಗ್ಯವಾಡಿದ್ದಾರೆ. ಎಸ್‌ಐಆರ್, ಇವಿಎಮ್ ಮಷಿನ್ ಬಗ್ಗೆ ಕಾಂಗ್ರೆಸ್‌ನಿಂದ ಅಪಸ್ವರ ಕೇಳಿಬರುತ್ತಿದೆ. 133 ಸ್ಥಾನ ಕಾಂಗ್ರೆಸ್ ಪಕ್ಷಕ್ಕೆ ಬಂದಾಗ ಇವಿಎಮ್ ಮಷಿನ್ ವರ್ಕ್ ಸರಿಯಾಗಿತ್ತಾ? ಎಮ್‌ಪಿ ಎಲೆಕ್ಷನ್‌ನಲ್ಲಿ ಸೋತಾಗ ಸರಿ ಇರಲಿಲ್ವಾ? ರಾಜ್ಯ ಸರ್ಕಾರಕ್ಕೆ ಆಲೋಚನಾ ಶಕ್ತಿ ಇರಬೇಕು ಎಂದು ಹೇಳಿದರು.

## ಲಾಭದತ್ತ ವಿಶ್ವೇಶ್ವರಯ್ಯ ಉಕ್ಕು ಕಾರ್ಖಾನೆ

**ಉದಯವಾಹಿನಿ, ಶಿವಮೊಗ್ಗ**

ಭದ್ರಾವತಿಯ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಸತತ ಮೂರನೇ ತಿಂಗಳು ಲಾಭ ದಾಖಲಿಸಿದ್ದು, ನಷ್ಟದಲ್ಲಿದ್ದ ಘಟಕದ ಆರ್ಥಿಕ ಕಾರ್ಯಕ್ಷಮತೆಯಲ್ಲಿ ಸುಧಾರಣೆಯಾಗುತ್ತಿರುವುದನ್ನು ಇದು ಸೂಚಿಸುತ್ತದೆ ಎಂದು ಕೇಂದ್ರ ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ. ಜುಲೈನಲ್ಲಿ ರೂ.33 ಲಕ್ಷ, ಆಗಸ್ಟ್‌ನಲ್ಲಿ ರೂ.1.71 ಕೋಟಿ ಹಾಗೂ ಸೆಪ್ಟೆಂಬರ್‌ನಲ್ಲಿ ರೂ.1.96 ಕೋಟಿ ನಿವ್ವಳ ಲಾಭವನ್ನು ಕಾರ್ಖಾನೆ ದಾಖಲಿಸಿದೆ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕೇಂದ್ರ ಉಕ್ಕು ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಕೈಗೊಂಡ ಸುಧಾರಣಾ ಕ್ರಮಗಳು, ನಿರಂತರ ಮೇಲ್ವಿಚಾರಣೆ ಹಾಗೂ ಕಾರ್ಖಾನೆಗೆ ಆಗಾಗ್ಗೆ ಭೇಟಿ ನೀಡಿರುವುದು ಈ ಸುಧಾರಣೆಗೆ ಕಾರಣ ಎಂದು ಅವರು ಹೇಳಿದ್ದಾರೆ.ಇತ್ತೀಚಿನ ಕಾರ್ಯಕ್ಷಮತೆ ಆಶಾದಾಯಕವಾಗಿದ್ದು, ಕಾರ್ಮಿಕರ ಬದ್ಧತೆ ಮತ್ತು ಸಾಮೂಹಿಕ ಪರಿಶ್ರಮವನ್ನು ಪ್ರತಿಬಿಂಬಿಸುತ್ತದೆ ಎಂದು ತಿಳಿಸಿದ್ದಾರೆ.

## ಭಕ್ತಿಭಾವ, ಸಡಗರದಿಂದ ನವರಾತ್ರಿ ಆಚರಣೆಗೆ ಅಗತ್ಯ ಸಿದ್ಧತೆ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಮುದ್ದೇಬಿಹಾಳ**

ಸ್ಥಳೀಯ ಕ್ಷತ್ರೀಯ ಮರಾಠಾ ಸಮಾಜದ ಬಸವನಗರದಲ್ಲಿರುವ ಶ್ರೀ ಅಂಬಾಭವಾನಿ ಮಂದಿರದಲ್ಲಿ ಪ್ರತಿವರ್ಷದಂತೆ ಈ ಬಾರಿಯೂ ನವರಾತ್ರೋತ್ಸವವನ್ನು ಭಕ್ತಿಭಾವ ಹಾಗೂ ಸಡಗರದಿಂದ ಆಚರಿಸಲು ಸಿದ್ಧತೆಗಳು ಆರಂಭಗೊಂಡಿವೆ.

ಈ ಹಿನ್ನೆಲೆಯಲ್ಲಿ ರವಿವಾರ ಶ್ರೀ ಅಂಬಾಭವಾನಿ ಮಂದಿರದಲ್ಲಿ ನವರಾತ್ರೋತ್ಸವದ ಪೂರ್ವಭಾವಿ ಸಭೆ ನಡೆಯಿತು. ಸಭೆಯಲ್ಲಿ ನವರಾತ್ರೋತ್ಸವದ ಅಂಗವಾಗಿ ಅ. 11ರಂದು ಘಟಸ್ಥಾಪನೆ ಕಾರ್ಯಕ್ರಮ ನಡೆಸಲು ನಿರ್ಧರಿಸಲಾಯಿತು. ಒಂಬತ್ತು ದಿನಗಳ ಉತ್ಸವದಲ್ಲಿ ಪ್ರತಿದಿನ ಬೆಳಗ್ಗೆ ಹಾಗೂ ಸಂಜೆ ಶ್ರೀ ಅಂಬಾಭವಾನಿ ದೇವಿಗೆ ವಿಶೇಷ ಪೂಜೆ, ಅಭಿಷೇಕ, ಅಲಂಕಾರ ಹಾಗೂ ಆರತಿ ನೆರವೇರಿಸಲಾಗುವುದು. ವಿವಿಧ ದಿನಗಳಲ್ಲಿ ದೇವಿಯನ್ನು ವಿವಿಧ ರೂಪಗಳಲ್ಲಿ ಅಲಂಕರಿಸಿ ಭಕ್ತರಿಗೆ ವಿಶೇಷ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು. ಬಳಿಕ ಭಕ್ತರಿಗೆ ಪ್ರಸಾದ ವಿತರಿಸಲಾಗುವುದು. ಶ್ರೀ ಜೀಜಾಮಾತಾ ಮಹಿಳಾ ಮಂಡಳದ ವತಿಯಿಂದ ಭಜನಾ ಕಾರ್ಯಕ್ರಮ ಹಾಗೂ ಕೋಲಾಟ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ದುರ್ಗಾಷ್ಟಮಿ ದಿನದಂದು ಶ್ರೀ ಅಂಬಾಭವಾನಿ ದೇವಿಗೆ ವಿಶೇಷ ಮಹಾಪೂಜೆ ನೆರವೇರಿಸುವುದರ ಜೊತೆಗೆ ಸುಮಂಗಲೆಯರಿಗೆ ಉಡಿತುಂಬುವ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಯಿತು. ನಂತರ ಮಹಾಮಂಗಳಾರತಿ ಹಾಗೂ ಪ್ರಸಾದ ವಿತರಣೆ ನಡೆಯಲಿದೆ. ಸಭೆಯಲ್ಲಿ ನವರಾತ್ರೋತ್ಸವದ ವಿವಿಧ ಕಾರ್ಯಕ್ರಮಗಳ ರೂಪುರೇಷೆ, ಪೂಜಾ ವ್ಯವಸ್ಥೆ, ವಿದ್ಯುತ್ ಅಲಂಕಾರ, ಪ್ರಸಾದ ವಿತರಣೆ ಸೇರಿದಂತೆ ಅಗತ್ಯ ವ್ಯವಸ್ಥೆಗಳ ಕುರಿತು ಚರ್ಚಿಸಲಾಯಿತು. ಉತ್ಸವವು ಶಿಸ್ತುಬದ್ಧವಾಗಿ ಹಾಗೂ ಭಕ್ತಿಭಾವದಿಂದ ನಡೆಯುವಂತೆ ಅಗತ್ಯ ಸಿದ್ಧತೆ ಕೈಗೊಳ್ಳಲು ತೀರ್ಮಾನಿಸಲಾಯಿತು. ನವರಾತ್ರಿಯ ಎಲ್ಲಾ ದಿನಗಳಲ್ಲೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀ ಅಂಬಾಭವಾನಿ ದೇವಿಯ ದರ್ಶನ ಪಡೆದು ದೇವಿಯ ಕೃಪೆಗೆ ಪಾತ್ರರಾಗಬೇಕು ಎಂದು ಕ್ಷತ್ರೀಯ ಮರಾಠಾ ಸಮಾಜದ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಪದಾಧಿಕಾರಿಗಳು ಹಾಗೂ ಶ್ರೀ ಜೀಜಾಮಾತಾ ಮಹಿಳಾ ಮಂಡಳದ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

## ವಿದ್ಯಾರ್ಥಿಗಳು ಶಿಕ್ಷಣದ ಜತೆ ಕ್ರೀಡೆಗಳಿಗೂ ಮಹತ್ವ ನೀಡಬೇಕು

**ಉದಯವಾಹಿನಿ, ಚಿಂಚೋಳಿ**

ವಿದ್ಯಾರ್ಥಿಗಳು ಶಿಕ್ಷಣದ ಜೊತೆ ಕ್ರೀಡೆಗಳಿಗೂ ಮಹತ್ವ ನೀಡಬೇಕು, ಕ್ರೀಡೆಗಳಿಂದ ದೈಹಿಕ, ಮಾನಸಿಕ ಶಕ್ತಿ ಹೆಚ್ಚುತ್ತದೆ ಎಂದು ತಾಲ್ಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ ಚವ್ಹಾಣ ಹೇಳಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಮೈಸೂರಿನ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಆಟದ ಹಕ್ಕು ಸಮಾನ ಹಕ್ಕು ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು,ಕ್ರೀಡೆಯಲ್ಲಿ ಸೋಲು ಗೆಲುವು ಸಹಜ ಸೋತವರು ಯಾವುದೇ ಕಾರಣಕ್ಕೂ ಎದೆಗುಂದಬಾರದು ಸೋಲಿನಿಂದ ಪಾಠ ಕಲಿತು ಮುಂದೆ ಸಾಗಬೇಕು ಎಂದರು.

ಪುರಸಭೆ ಮುಖ್ಯಾಧಿಕಾರಿ ವಿಜಯಮಹಾಂತೇಶ ಹೂಗಾರ ಮಾತನಾಡಿ ಕ್ರೀಡೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಬೆಳವಣಿಗೆ ಹೊಂದಲು ತುಂಬಾ ಸಹಕಾರಿಯಾಗಿದೆ,ಹೆಣ್ಣುಮಕ್ಕಳು ಎಲ್ಲಾ ಕ್ರೀಡೆಯಲ್ಲಿ ಭಾಗವಹಿಸುವುದರ ಮೂಲಕ ಪ್ರಗತಿಯನ್ನು ಸಾಧಿಸಬೇಕು ಎಂದು ಕರೆ ನೀಡಿದರು. ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಯ ನಿರ್ದೇಶಕರು ಸರಸ್ವತಿ ಪ್ರಾಸ್ತಾವಿಕವಾಗಿ ಮಾತನಾಡಿ ಸಂಸ್ಥೆಯು ತಾಲ್ಲೂಕಿನ 20 ಗ್ರಾಮಗಳಲ್ಲಿ ಕೆಲಸ ಮಾಡುತ್ತಿದ್ದು ಹೆಣ್ಣುಮಕ್ಕಳ ಸಬಲೀಕರಣಕ್ಕಾಗಿ ವೃತ್ತಿಪರ ತರಬೇತಿಗಳನ್ನು ಹಮ್ಮಿಕೊಳ್ಳುವುದರ ಮೂಲಕ ದುಡಿಯುತ್ತಿದೆ ಎಂದರು. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ವಿಶ್ವರಾಧ್ಯ ಇಂಜೇರಿ,ತಾಲ್ಲೂಕಾ ವೈದ್ಯಾಧಿಕಾರಿ ಡಾ.ಸೈಯದ್ ಲತೀಫ್, ತಾಲ್ಲೂಕು ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷೆ ನರಸಮ್ಮ ಲಕ್ಷ್ಮಣ ಅವುಂಟಿ ಮಾತನಾಡಿದರು. ಈ ಸಂದರ್ಭದಲ್ಲಿ ಬಿಸಿಎಂ ಕಲ್ಯಾಣಾಧಿಕಾರಿ ರಾಹುಲ್ ಪಂಚಶೀಲ್,ಶಿಕ್ಷಣ ಸಂಯೋಜಕ ಅಶೋಕ ಹೂವಿನಭಾವಿ,ಕಾನೂನು ಪರಿವೀಕ್ಷಣಾಧಿಕಾರಿ ಭರತೇಶ,ಗೋವಿಂದ,ಆನಂದ್ ರಾಜ,ಮಹಮ್ಮದ್ ಅಮ್ಜದ್ ಅಲಿ,ಮಲ್ಲಿಕಾರ್ಜುನ ನೆಲ್ಲಿ,ಸೇರಿದಂತೆ ಅನೇಕರಿದರು. ವೀರಭದ್ರಪ್ಪ ಬಳೆರ್ ಸ್ವಾಗತಿಸಿದರು,ನಾಗರಾಜ ಶೀಲವಂತ ನಿರೂಪಿಸಿದರು,ಅಶ್ವಿನಿ ವಂದಿಸಿದರು.


ಉದಯವಾಹಿನಿ ಚಿತ್ರ

### ಕ್ರೀಡಾಕೂಟದ ಫಲಿತಾಂಶ

ಕ್ರಿಕೆಟ್‌ನಲ್ಲಿ ಪ್ರಥಮ– ಐನೋಳ್ಳಿ ತಂಡ, ದ್ವಿತೀಯ ಶಾದಿಪುರ ತಂಡ ಪಡೆದಿದೆ, ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಭೋಗಲಿಂಗದಳ್ಳಿ ತಾಂಡ ಪಡೆದರೆ ದ್ವಿತೀಯ ಸ್ಥಾನ ಐನೋಳ್ಳಿ ತಂಡ ಪಡೆದಿದೆ, ಮಡಿಕೆ ಒಡೆಯುವ ಆಟದಲ್ಲಿ ಪ್ರಥಮ ಸ್ಥಾನ ಪಟಪಳ್ಳಿ, ದ್ವಿತೀಯ ಸ್ಥಾನ ಐನೋಳ್ಳಿ ತಂಡ, ರಿಲೇ ಓಟ ಪ್ರಥಮ–ಗಾರಂಪಳ್ಳಿ, ದ್ವಿತೀಯ ದೇಗಲಮಡಿ ಪಡೆದಿದೆ, ರನ್ನಿಂಗ್ ಪ್ರಥಮ ಸ್ಥಾನ ಐನೋಳ್ಳಿ ಪಡೆದರೆ, ದ್ವಿತೀಯ ಸ್ಥಾನ ಕಲಭಾವಿ ತಾಂಡಾ,ತೃತೀಯ – ಐನೋಳ್ಳಿ ಪಡೆದಿದೆ. ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು.

---

ಸಾಂಸ್ಕೃತಿಕ ಮಹತ್ವ ಹಾಗೂ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಪರಿಗಣಿಸಿ ಅಧಿಕೃತ ಮಾನ್ಯತೆಗೆ ಅರ್ಹವಾಗಿದೆ ಎಂದು ತಿಳಿಸಲಾಗಿದೆ.

# ಯಕ್ಷಗಾನಕ್ಕೆ ರಾಜ್ಯ ಕಲಾ ಪ್ರಕಾರದ ಮಾನ್ಯತೆ ನೀಡಿ: ಸಿಎಂಗೆ ಅಕಾಡೆಮಿ ಮನವಿ

**ಉದಯವಾಹಿನಿ, ಮಂಗಳೂರು**

ಕರ್ನಾಟಕದ ಶತಮಾನಗಳಷ್ಟು ಹಳೆಯ ಸಾಂಪ್ರದಾಯಿಕ ರಂಗಕಲೆಯಾಗಿರುವ ಯಕ್ಷಗಾನವನ್ನು ರಾಜ್ಯದ ಅಧಿಕೃತ ಕಲಾ ಪ್ರಕಾರ ಎಂದು ಘೋಷಿಸುವಂತೆ ಕರ್ನಾಟಕ ಯಕ್ಷಗಾನ ಅಕಾಡೆಮಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಇದರಿಂದ ರಾಜ್ಯದ ಸಾಂಸ್ಕೃತಿಕ ಅಸ್ಮಿತೆಯ ಅವಿಭಾಜ್ಯ ಅಂಗವಾಗಿರುವ ಯಕ್ಷಗಾನದ ಸಂರಕ್ಷಣೆ ಹಾಗೂ ಪ್ರಚಾರಕ್ಕೆ ಮತ್ತಷ್ಟು ಉತ್ತೇಜನ ದೊರೆಯಲಿದೆ ಎಂದು ಅಕಾಡೆಮಿ ಹೇಳಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಲ್ಲಿಸಿರುವ ಮನವಿಯಲ್ಲಿ ಅಕಾಡೆಮಿ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ, ಕರ್ನಾಟಕದ ಪ್ರಮುಖ ಜಾನಪದ ರಂಗಕಲೆಗಳಲ್ಲಿ ಒಂದಾಗಿರುವ ಯಕ್ಷಗಾನವು ತನ್ನ ಶ್ರೀಮಂತ ಪರಂಪರೆ, ಸಾಂಸ್ಕೃತಿಕ ಮಹತ್ವ ಹಾಗೂ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಅಧಿಕೃತ ಮಾನ್ಯತೆಗೆ ಅರ್ಹವಾಗಿದೆ ಎಂದು ತಿಳಿಸಿದ್ದಾರೆ.

**1.** ಬಡಗುತಿಟ್ಟು ಹಾಗೂ ತೆಂಕುತಿಟ್ಟು ಪರಂಪರೆ
**2.** ಜಿಲ್ಲೆಗಳಲ್ಲಿ ಶತಮಾನ ಬೆಳವಣಿಗೆ ಕಂಡಿದೆ
**3.** ಮುಖವರ್ಣಿಕೆ ಹಾಗೂ ರಂಗಸಜ್ಜಿಕೆಯ ವಿಶಿಷ್ಟ

ಬಡಗುತಿಟ್ಟು ಹಾಗೂ ತೆಂಕುತಿಟ್ಟು ಪರಂಪರೆಗಳಲ್ಲಿ ಮುಖ್ಯವಾಗಿ ಪ್ರದರ್ಶಿಸಲಾಗುವ ಯಕ್ಷಗಾನವು ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಶತಮಾನಗಳಿಂದ ಬೆಳವಣಿಗೆ ಕಂಡಿದೆ. ಸಂಗೀತ, ನೃತ್ಯ, ಸಂಭಾಷಣೆ, ಅಭಿನಯ, ವೈಭವಯುತ ವೇಷಭೂಷಣ, ಮುಖವರ್ಣಿಕೆ ಹಾಗೂ ರಂಗಸಜ್ಜಿಕೆಯ ವಿಶಿಷ್ಟ ಸಂಯೋಜನೆಯಾಗಿರುವ ಯಕ್ಷಗಾನವು ಭಾರತದ ಅತ್ಯಂತ ವಿಶಿಷ್ಟ ಜೀವಂತ ರಂಗಕಲೆ ಪರಂಪರೆಗಳಲ್ಲಿ ಒಂದಾಗಿದೆ ಎಂದು ಅಕಾಡೆಮಿ ವಿವರಿಸಿದೆ.



ಉದಯವಾಹಿನಿ ಚಿತ್ರ

ಅಕಾಡೆಮಿ ನೀಡಿರುವ ಮಾಹಿತಿಯ ಪ್ರಕಾರ, 15,000ಕ್ಕೂ ಹೆಚ್ಚು ವೃತ್ತಿಪರ ಕಲಾವಿದರು, ಸಾವಿರಾರು ಹವ್ಯಾಸಿ ಕಲಾವಿದರು ಹಾಗೂ 100ಕ್ಕೂ ಅಧಿಕ ಯಕ್ಷಗಾನ ತಂಡಗಳು ಈ ಕಲಾ ಪ್ರಕಾರದೊಂದಿಗೆ ಗುರುತಿಸಿಕೊಂಡಿವೆ. ಯಕ್ಷಗಾನದ ಕುರಿತು 50ಕ್ಕೂ ಹೆಚ್ಚು ಡಾಕ್ಟರೇಟ್ ಅಧ್ಯಯನಗಳು ಹಾಗೂ ಹಲವು ಎಂ.ಫಿಲ್. ಪ್ರಬಂಧಗಳು ಪೂರ್ಣಗೊಂಡಿವೆ. ಅಲ್ಲದೆ, ಹೊರ ದೇಶಗಳಲ್ಲಿಯೂ ಯಕ್ಷಗಾನ ಪ್ರದರ್ಶನಗಳು ನಡೆಯುತ್ತಿವೆ ಎಂದು ತಿಳಿಸಿದೆ.

ಯಕ್ಷಗಾನ ಕೇವಲ ಮನರಂಜನೆಯ ಮಾಧ್ಯಮವಲ್ಲ. ನೈತಿಕ ಮೌಲ್ಯಗಳನ್ನು ಬೋಧಿಸುವುದರ ಜತೆಗೆ ರಾಮಾಯಣ, ಮಹಾಭಾರತ ಹಾಗೂ ಭಾಗವತ ಪುರಾಣದಂತಹ ಭಾರತೀಯ ಮಹಾಕಾವ್ಯಗಳು ಮತ್ತು ಪೌರಾಣಿಕ ಪರಂಪರೆಯನ್ನು ಸಂರಕ್ಷಿಸುವ ಮಾಧ್ಯಮವೂ ಆಗಿದೆ.

ಯಕ್ಷಗಾನಕ್ಕೆ ರಾಜ್ಯ ಕಲಾ ಪ್ರಕಾರದ ಅಧಿಕೃತ ಮಾನ್ಯತೆ ದೊರೆತರೆ ಸಂರಕ್ಷಣಾ ಕಾರ್ಯಗಳಿಗೆ ಮತ್ತಷ್ಟು ಬಲ ಸಿಗಲಿದೆ. ಜತೆಗೆ ಮುಂದಿನ ಪೀಳಿಗೆಯ ಯುವಜನರು ಈ ಕಲೆಯನ್ನು ಅಳವಡಿಸಿಕೊಳ್ಳಲು ಉತ್ತೇಜನ ದೊರೆಯಲಿದೆ ಎಂದು ಅಕಾಡೆಮಿ ಅಭಿಪ್ರಾಯಪಟ್ಟಿದೆ.

ಕೇರಳದ ಕಥಕಳಿ ಮತ್ತು ಮೋಹಿನಿಯಾಟ್ಟಂ, ಮಹಾರಾಷ್ಟ್ರದ ಲಾವಣಿ ಹಾಗೂ ಆಂಧ್ರಪ್ರದೇಶದ ಕೂಚಿಪುಡಿ ಕಲಾ ಪ್ರಕಾರಗಳಿಗೆ ದೊರೆತಿರುವ ಮಾನ್ಯತೆಯನ್ನು ಉಲ್ಲೇಖಿಸಿರುವ ಅಕಾಡೆಮಿ, ಯಕ್ಷಗಾನಕ್ಕೂ ರಾಜ್ಯ ಕಲಾ ಪ್ರಕಾರದ ಸ್ಥಾನಮಾನ ನೀಡಿ, ಅದರ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಸಾಂಸ್ಥಿಕ ಬೆಂಬಲ ಒದಗಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದೆ.

ಪ್ರತಿದಿನ ನೂರಾರು ಯಕ್ಷಗಾನ ಪ್ರದರ್ಶನಗಳು ಹಾಗೂ ತಾಳಮದ್ದಳೆ ಕಾರ್ಯಕ್ರಮಗಳು ನಡೆಯುತ್ತಿದ್ದು, ಇವುಗಳ ಮೂಲಕ ಕಲಾವಿದರು, ಭಾಗವತರು, ಸಂಗೀತಗಾರರು, ವೇಷಭೂಷಣ ವಿನ್ಯಾಸಕರು, ಮುಖವರ್ಣಿಕೆ ಕಲಾವಿದರು, ತಂತ್ರಜ್ಞರು ಹಾಗೂ ಆಯೋಜಕರು ಸೇರಿದಂತೆ ದೊಡ್ಡ ಸಂಖ್ಯೆಯ ಜನರಿಗೆ ಜೀವನೋಪಾಯ ದೊರೆಯುತ್ತಿದೆ.
– ಡಾ. ತಲ್ಲೂರು ಶಿವರಾಮ ಶೆಟ್ಟಿ

### ಅಕಾಡೆಮಿ ಕಳವಳ

ಯುವಜನರಲ್ಲಿ ಯಕ್ಷಗಾನದ ಮೇಲಿನ ಆಸಕ್ತಿ ಕಡಿಮೆಯಾಗುತ್ತಿರುವುದು, ಪ್ರದರ್ಶನಗಳ ವೆಚ್ಚ ಹೆಚ್ಚುತ್ತಿರುವುದು, ಕಲಾವಿದರಿಗೆ ದೊರೆಯುತ್ತಿರುವ ಆದಾಯ ಕಡಿಮೆಯಾಗಿರುವುದು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಪ್ರದರ್ಶನಗಳ ಅವಕಾಶಗಳು ಕುಗ್ಗುತ್ತಿರುವ ಬಗ್ಗೆ ಅಕಾಡೆಮಿ ಕಳವಳ ವ್ಯಕ್ತಪಡಿಸಿದೆ.

---

# ಮಿನಿ ನ್ಯೂಸ್

## ಕೇಂದ್ರ ಸಚಿವ ಪ್ರಲ್ಹಾದ್ ಜೋಶಿಗೆ ಮನವಿ

**ಉದಯವಾಹಿನಿ, ಹುಬ್ಬಳ್ಳಿ**

ರೈತರ ಸಾಲ ಮನ್ನಾ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಭಾರತೀಯ ಕೃಷಿಕ ಸಮಾಜ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರನ್ನು ಹುಬ್ಬಳ್ಳಿಯ ನಿವಾಸದಲ್ಲಿಂದು ಭೇಟಿ ಮಾಡಿ ಆಗ್ರಹಿಸಿದೆ. ಧಾರವಾಡ ಜಿಲ್ಲೆ ಸೇರಿದಂತೆ ರಾಜ್ಯದಲ್ಲಿ ರೈತರು ಇಂದು ಅತ್ಯಂತ ಗಂಭೀರವಾದ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಸತತ 4 ವರ್ಷಗಳಿಂದ ಅತಿವೃಷ್ಟಿಯಿಂದ ಬೆಳೆ ಹಾನಿ ಆಗಿತ್ತು. ಈ ವರ್ಷ ತೀವ್ರ ಬರ ಪರಿಸ್ಥಿತಿ ಎದುರಾಗಿದ್ದು ಮಳೆ ಕೊರತೆ, ಬೆಳೆ ನಷ್ಟ, ಕೃಷಿ ಉತ್ಪಾದನಾ ವೆಚ್ಚದ ಏರಿಕೆ ಹಾಗೂ ಕೃಷಿ ಉತ್ಪನ್ನಗಳಿಗೆ ಸಮರ್ಪಕ ಬೆಲೆ ದೊರೆಯದ ಕಾರಣ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದ್ದರಿಂದ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಮನ್ನಾ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ವಿಶೇಷ ಬರ ಪರಿಹಾರ ಧನ ಬಿಡುಗಡೆ ಮಾಡಬೇಕು. ಕೃಷಿ ಸಾಲದ ಬಡ್ಡಿ ಹಾಗೂ ದಂಡ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು. ಬೆಳೆ ವಿಮೆ ಹಾಗೂ ಬೆಳೆ ನಷ್ಟ ಪರಿಹಾರವನ್ನು ಯಾವುದೇ ವಿಳಂಬವಿಲ್ಲದೆ ರೈತರ ಖಾತೆಗೆ ಜಮಾ ಮಾಡಬೇಕು. ಮುಂದಿನ ಹಂಗಾಮಿಗೆ ರೈತರಿಗೆ ಬೀಜ, ಗೊಬ್ಬರ ಮತ್ತು ನೀರಾವರಿ ಸೌಲಭ್ಯಗಳಿಗೆ ವಿಶೇಷ ನೆರವು ನೀಡಬೇಕು ಹಾಗೂ ರೈತರ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಹಾಗೂ ನ್ಯಾಯಯುತ ಬೆಲೆ ದೊರೆಯುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

## ಸುದರ್ಶನ್ ಸಾವಿಗೆ ನ್ಯಾಯ ಒದಗಿಸಿ

**ಉದಯವಾಹಿನಿ, ಭಾಲ್ಕಿ**

ಪಟ್ಟಣದ ನಿವಾಸಿ ಸುದರ್ಶನ್ ರಟ್ಕಲೆ ಅವರ ಸಾವಿನ ಪ್ರಕರಣದ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸುವ ಮೂಲಕ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಒತ್ತಾಯಿಸಿದರು. ಸುದರ್ಶನ್ ಅವರ ಮನೆಗೆ ಭಾನುವಾರ ಭೇಟಿ ನೀಡಿದ ಅವರು, ತಂದೆ–ತಾಯಿ ಹಾಗೂ ಕುಟುಂಬದವರಿಗೆ ಸಾಂತ್ವನ ಹೇಳಿದರು. ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವವರೆಗೂ ಹೋರಾಟ ಮುಂದುವರಿಸಲಾಗುವುದು ಎಂದು ಕುಟುಂಬಕ್ಕೆ ಭರವಸೆ ನೀಡಿದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭಾಲ್ಕಿಗೆ ಭೇಟಿ ನೀಡಿ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸುದರ್ಶನ್ ಅವರ ಸ್ನೇಹಿತರು ಹಾಗೂ ಸ್ಥಳೀಯರು ಖೂಬಾ ಅವರನ್ನು ಭೇಟಿಯಾಗಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಚನಾಮೆಗೆ ಹೋಗದಂತೆ ಹಾಗೂ ಸಾಕ್ಷ್ಯ ಹೇಳದಂತೆ ಕೆಲವರು ದೂರವಾಣಿ ಮೂಲಕ ಬೆದರಿಕೆ ಹಾಕುತ್ತಿದ್ದಾರೆ ಎಂದು ಆರೋಪಿಸಿದರು. ತಾವು ಭಯದ ವಾತಾವರಣದಲ್ಲಿ ಬದುಕುತ್ತಿದ್ದೇವೆ ಎಂದು ತಿಳಿಸಿದರು. ತಂತ್ರಜ್ಞಾನ ಹಾಗೂ ಲಭ್ಯವಿರುವ ವಿಡಿಯೊ ಸೇರಿದಂತೆ ಎಲ್ಲಾ ಸಾಕ್ಷ್ಯಗಳನ್ನು ಪರಿಶೀಲಿಸಿ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಅವರು ಒತ್ತಾಯಿಸಿದರು. ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಖೂಬಾ, ಪ್ರಕರಣದ ತನಿಖೆ ಯಾವುದೇ ರಾಜಕೀಯ ಒತ್ತಡಕ್ಕೆ ಒಳಗಾಗದೆ ಪಾರದರ್ಶಕವಾಗಿ ನಡೆಯಬೇಕು. ಸುದರ್ಶನ್ ಕುಟುಂಬದವರು ಹಾಗೂ ಸಾಕ್ಷಿದಾರರಿಗೆ ಸೂಕ್ತ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದರು. ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದ ಅವರು, ತನಿಖೆಯಲ್ಲಿ ಲೋಪ ಕಂಡುಬಂದರೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

## ಚುನಾವಣೆ: ಪಕ್ಷೇತರ ಅಭ್ಯರ್ಥಿ ಪರ ಯತ್ನಾಳ್ ರ‍್ಯಾಲಿ

**ಉದಯವಾಹಿನಿ, ಧಾರವಾಡ**

ಬಸನಗೌಡ ಪಾಟೀಲ್ ಯತ್ನಾಳ್ ಬೆಂಬಲದಿಂದ ಅಕ್ಸಾ ಸಂಘಟನೆ ಅಧ್ಯಕ್ಷ ಕಾಂತಕುಮಾರ ನಾಮಪತ್ರ ಸಲ್ಲಿಸಲು ತಯಾರಿ ಮಾಡಿಕೊಂಡಿದ್ದಾರೆ. ಪಶ್ಚಿಮ ಪದವೀಧರರ ಕ್ಷೇತ್ರದ ವಿಧಾನ ಪರಿಷತ್ ಚುನಾವಣಾ ಅಖಾಡ ರಂಗೇರಿದೆ. ಧಾರವಾಡ ಪದವೀಧರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಗೆ ಬೆಂಬಲವಾಗಿ ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಎಂಟ್ರಿಯಾಗಿದ್ದು, ಬಿಜೆಪಿ, ಕಾಂಗ್ರೆಸ್ ಪಕ್ಷದ ನಡುವೆ ಪಕ್ಷೇತರ ಅಭ್ಯರ್ಥಿ ಕಣಕ್ಕಿಳಿದಿದ್ದಾರೆ. ಕಾಂಗ್ರೆಸ್ ಹಾಗೂ ಪಕ್ಷೇತರ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲಿದ್ದು, ನಾಳೆ ಬಿಜೆಪಿ ಅಭ್ಯರ್ಥಿ ಎಸ್.ವಿ. ಸಂಕನೂರ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ. ಕಾಂಗ್ರೆಸ್ ನಿಂದ ಮೋಹನ ಲಿಂಬಿಕಾಯಿ ಹಾಗೂ ಅಕ್ಸಾ ಸಂಘಟನೆ ಅಧ್ಯಕ್ಷ ಕಾಂತಕುಮಾರ್ ಇಂದು ನಾಮಪತ್ರ ಸಲ್ಲಿಸಲಿದ್ದಾರೆ. ಪಕ್ಷೇತರ ಅಭ್ಯರ್ಥಿ ಕಾಂತಕುಮಾರಗೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬೆಂಬಲ ಸೂಚಿಸಿ ಇಂದು ನಾಮಪತ್ರ ಸಲ್ಲಿಸಲು ಆಗಮಿಸಲಿದ್ದಾರೆ. ಬಿಜೆಪಿಯಿಂದ ಉಚ್ಚಾಟನೆಗೊಂಡಿರೋ ಬಸನಗೌಡ ಪಾಟೀಲ್ ಯತ್ನಾಳ್ ಬೆಂಬಲದಿಂದ ಅಕ್ಸಾ ಸಂಘಟನೆ ಅಧ್ಯಕ್ಷ ಕಾಂತಕುಮಾರ ನಾಮಪತ್ರ ಸಲ್ಲಿಸಲು ತಯಾರಿ ಮಾಡಿಕೊಂಡಿದ್ದಾರೆ. ಕಾಂತಕುಮಾರ ಶ್ರೀನಗರದ ಶಿವಾಲಯದ ಶಿವನ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಅಲ್ಲಿಂದ ಆರಂಭವಾಗುವ ಮೆರವಣಿಗೆ ಬಳಿಕ ಡಿಸಿ ಕಚೇರಿ ತಲುಪಿ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ. ಧಾರವಾಡದ ಕಡಪಾ ಮೈದಾನದಿಂದ ಕಾಂಗ್ರೆಸ್ ಅಭ್ಯರ್ಥಿ ಮೋಹನ ಲಿಂಬಿಕಾಯಿ ಅವರ ಮೆರವಣಿಗೆ ಆರಂಭಗೊಳ್ಳಲಿದ್ದು, ಅವರು ಸಹ ಬೃಹತ್ ಮೆರವಣಿಗೆ ಮೂಲಕ ಆಗಮಿಸಿ ನಾಮಪತ್ರ ಸಲ್ಲಿಸಲಿದ್ದಾರೆ. ಈ ವೇಳೆ ಕಾಂಗ್ರೆಸ್ ಹಿರಿಯ ನಾಯಕರು ಭಾಗವಹಿಸುವ ಸಾಧ್ಯತೆಯಿದೆ.

## ತಾಯಂದಿರ ಋಣ ತೀರಿಸಬೇಕು: ಬಸವಲಿಂಗ ಶ್ರೀ

**ಉದಯವಾಹಿನಿ, ಬಳ್ಳಾರಿ**

ನಗರದ ಕೊಟ್ಟೂರುಸ್ವಾಮಿ ಮಠದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆ, ವೀರಶೈವ ಶಿವಯೋಗ ಮಂದಿರ ಸಂಸ್ಥೆಗಳ ಸಂಸ್ಥಾಪಕ ಹಾನಗಲ್ಲ ಕುಮಾರ ಮಹಾಶಿವಯೋಗಿಗಳ 159ನೇ ಹಾಗೂ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳ 88ನೇ ಜಯಂತ್ಯೋತ್ಸವದ ಅಂಗವಾಗಿ 1111 ಮುತ್ತೈದೆಯರಿಗೆ ಉಡಿತುಂಬುವ ಕಾರ್ಯಕ್ರಮ ನಿನ್ನೆ ನಡೆಯಿತು. ನಿರಂಜನ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮೀಜಿಗಳು ಸಾನಿಧ್ಯವಹಿಸಿ, ತಾಯಿಯ ಋಣವನ್ನು ತೀರಿಸಬೇಕು, ತಾಯಿ ಅಂದರೆ ಕೇವಲ ಹೆಣ್ಣು ಅಲ್ಲ, ಮಾತೃ ಹೃದಯದ ಪ್ರತಿಯೊಬ್ಬರೂ ತಾಯಿ ಸ್ಥಾನಕ್ಕೆ ಗೌರವಕ್ಕೆ ಅರ್ಹರು. ಕಾರಣ ಪ್ರತಿಯೊಬ್ಬ ತಾಯಿಯೂ ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಬೆಳೆಸಬೇಕು. ತಾಯಂದಿರರು ಮಕ್ಕಳಿಗೆ ಸಂಬಂಧಗಳ ಬೆಲೆ, ಗೌರವ ಮತ್ತು ಅನಿವಾರ್ಯತೆಗಳ ಮಹತ್ವವನ್ನು ತಿಳಿಸಿಕೊಡಬೇಕು. ಇಲ್ಲವಾದಲ್ಲಿ ಮಕ್ಕಳು ಒಬ್ಬಂಟಿಗರಾಗಿ, ಸಮಾಜದ ಹೊರತಾಗಿ ಜೀವಿಸುವ ಪರಿಸ್ಥಿತಿ ನಿರ್ಮಾಣ ಆಗಲಿದೆ. ಪ್ರತಿಯೊಬ್ಬ ಮಗುವೂ ಸಮಾಜಮುಖಿ ಆಗಬೇಕು ಎನ್ನುವ ಉದಾತ್ತತೆಯು ತಾಯಂದಿರರಲ್ಲಿ ಮೂಡಬೇಕೆಂದರು. ಪ್ರತಿಯೊಬ್ಬರೂ ಸಂತೋಷವಾಗಿರಬೇಕು. ಸಂತೋಷವಾಗಿ ಇರುವವರು ಮಹಾತ್ಮರಂತೆ, ಸಂತರಂತೆ ಇರುತ್ತಾರೆ. ಆದರೆ, ಸಾಮಾನ್ಯರು ಸದಾಕಾಲ ಅಶಾಂತಿ, ಅಸಹನೆ, ಅಸಹಾಕಾರ, ಪ್ರಾಪಂಚಿಕ ಚಿಂತೆಗಳನ್ನು ತುಂಬಿಕೊಂಡು ತೊಳಲಾಡುತ್ತಲೇ ಇರುತ್ತಾರೆ. ಯಾರೇ ಆಗಲಿ ಮನಸ್ಸಿನಲ್ಲಿ ಪ್ರಪಂಚದ ವಿಷಯಗಳನ್ನು ತುಂಬಿಕೊಂಡಲ್ಲಿ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂದರು. ಗಂಗಾವತಿಯ ನಿವೃತ್ತ ಪ್ರಾಚಾರ್ಯರಾದ ದ್ರಾಕ್ಷಾಯಿಣಿ ಜಿ. ಮಠದ ಅವರು 'ತಾಯಿಯ ಋಣ' ಕುರಿತು ಉಪನ್ಯಾಸ ನೀಡಿದರು.

### 1111 ಮುತ್ತೈದೆಯರಿಗೆ ಉಡಿ


ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ**: ರಕ್ತದೊತ್ತಡವಿರುವ ರೋಗಿಗಳು ತಮ್ಮ ರಕ್ತದೊತ್ತಡ ಕಡಿಮೆ ಮಾಡಲು ಮತ್ತು ಕೊಲೆಸ್ಟ್ರಾಲ್ ನಿಯಂತ್ರಣದಲ್ಲಿರಿಸಲು ಕೆಂಪು ವೈನ್ ಕೊಳ್ಳಬಹುದು. ಇದು ಅವರಿಗೆ ಮತ್ತಷ್ಟು ವಿಶ್ರಾಂತಿ ತರುತ್ತದೆ. ಉದ್ಯಮಿಗಳು ಯೋಚಿಸಿ ಹಣದ ಹೂಡಿಕೆ ಮಾಡಬೇಕು.

**ವೃಷಭ**: ನಿಮ್ಮ ಕೋಪ ಕಡ್ಡಿಯನ್ನು ಗುಡ್ಡ ಮಾಡಬಹುದು-ಇದು ನಿಮ್ಮ ಕುಟುಂಬದ ಸದಸ್ಯರ ಅಸಮಾಧಾನಕ್ಕೆ ಕಾರಣವಾಗುತ್ತದೆ ಕೋಪ ನಿಯಂತ್ರಣದಲ್ಲಿಡುವುದನ್ನು ಕಲಿತ ಆ ಮಹಾನ್ ಆತ್ಮಗಳೇ ಅದೃಷ್ಟಶಾಲಿಗಳು.

**ಮಿಥುನ**: ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ನೀವು ದೀರ್ಘಕಾಲದ ಆಧಾರದ ಮೇಲೆ ಹೂಡಿಕೆ ಮಾಡಿದಲ್ಲಿ ಗಣನೀಯ ಲಾಭ ಮಾಡುತ್ತೀರಿ. ನಿಮ್ಮ ಹೆತ್ತವರ ಆರೋಗ್ಯದ ಬಗೆಗೆ ಹೆಚ್ಚುವರಿ ಗಮನ ಮತ್ತು ಎಚ್ಚರಿಕೆ ಅಗತ್ಯವಿದೆ.

**ಕರ್ಕಾಟಕ**: ಅತಿಯಾಗಿ ತಿನ್ನುವುದು ಮತ್ತು ಹೆಚ್ಚಿನ ಕ್ಯಾಲೋರಿ ಆಹಾರವನ್ನು ತಪ್ಪಿಸಬೇಕು. ಆರ್ಥಿಕ ನಿರ್ಬಂಧಗಳನ್ನು ತಪ್ಪಿಸಲು ನಿಮ್ಮ ಬಜೆಟ್‌ಗೆ ಅಂಟಿಕೊಳ್ಳಿ. ಮಕ್ಕಳ ಅವರ ಸಾಧನೆಗಳಿಂದ ನೀವು ಹೆಮ್ಮೆ ಪಡುವಂತೆ ಮಾಡಬಹುದು.

**ಸಿಂಹ**: ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಇವು ನಿಮಗೆ ನಿಮ್ಮ ಸಹೋದರ ಅಥವಾ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ. ಮನಸ್ಸಿನಲ್ಲಿ ಒತ್ತಡವಿದ್ದಲ್ಲಿ ಸಂಬಂಧಿಕರಲ್ಲಿ ಹಂಚಿಕೊಳ್ಳಿ

**ಕನ್ಯಾ**: ನಿಮ್ಮ ನಗು ಖಿನ್ನತೆಯ ವಿರುದ್ಧ ಕೆಲಸ ಮಾಡುತ್ತದೆ. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ಕುಟುಂಬದ ಸದಸ್ಯರು ನಿಮ್ಮ ಜೀವನದಲ್ಲಿ ಒಂದು ವಿಶೇಷ ಸ್ಥಾನವನ್ನು ಹೊಂದಿರುತ್ತಾರೆ.

**ತುಲಾ**: ನಿಮ್ಮ ಬಲವಾದ ಧೃಢತೆ ಮತ್ತು ನಿರ್ಭಯತೆ ನಿಮ್ಮ ಮಾನಸಿಕ ಶಕ್ತಿ ವರ್ಧಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಇದು ನಿಮಗೆ ಯಾವುದೇ ಪರಿಸ್ಥಿತಿ ನಿಯಂತ್ರಣದಲ್ಲಿರಿಸಿಕೊಳ್ಳಲು ಉತ್ತೇಜಿಸುವುದರಿಂದ ಇದನ್ನು ಕಾಯ್ದುಕೊಳ್ಳಿ.

**ವೃಶ್ಚಿಕ**: ನಿಮ್ಮ ಚೈತನ್ಯವನ್ನು ಪುನಃ ಸಂಪಾದಿಸಲು ವಿಶ್ರಾಂತಿ ತೆಗೆದುಕೊಳ್ಳಿ. ಜೀವನದ ವಾಹನವನ್ನು ಚೆನ್ನಾಗಿ ಚಲಾಯಿಸಲು ಬಯಸುತ್ತಿದ್ದರೆ, ಇಂದು ನೀವು ಹಣದ ಬಗ್ಗೆ ವಿಶೇಷ ಗಮನ ಹರಿಸಬೇಕು. ನಿಮ್ಮ ಪ್ರೇಮದ ಸಂಗಾತಿ ನಿಮ್ಮನ್ನು ಹೊಗಳಬಹುದು.

**ಧನಸ್ಸು**: ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ತನ್ನ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಈ ಕೌಶಲ್ಯವನ್ನು ಇಂದು ನೀವು ಕಲಿಯಬಹುದು

**ಮಕರ**: ಆರೋಗ್ಯ ಪರಿಪೂರ್ಣವಾಗಿರುತ್ತದೆ. ಆವತ್ತಿಗಾಗಿ ಮಾತ್ರ ಬದುಕುವ ಮತ್ತು ಮನೋರಂಜನೆಗಾಗಿ ಹೆಚ್ಚು ಸಮಯ ಮತ್ತು ಹಣ ಖರ್ಚು ಮಾಡುವ ನಿಮ್ಮ ಪ್ರವೃತ್ತಿಯನ್ನು ನಿಯಂತ್ರಿಸಿ. ಇವತ್ತು ಡೇಟ್‌ಗೆ ಹೋದಲ್ಲಿ ವಿವಾದಾತ್ಮಕ ವಿಷಯ ಕೆದಕುವುದನ್ನು ತಪ್ಪಿಸಿ.

**ಕುಂಭ**: ಆರೋಗ್ಯ ಚೆನ್ನಾಗಿರುತ್ತದೆ. ನಿಮ್ಮ ಖರ್ಚುಗಳಲ್ಲಿ ಅನಿರೀಕ್ಷಿತ ಏರಿಕೆ ನಿಮ್ಮ ಮನಸ್ಸಿನ ಶಾಂತಿಗೆ ಭಂಗ ತರುತ್ತದೆ. ಸಂಜೆ ಅಡಿಗೆ ಮನೆಗೆ ಅಗತ್ಯ ವಸ್ತುಗಳ ಖರೀದಿ ನಿಮ್ಮನ್ನು ವ್ಯಸ್ತವಾಗಿಡುತ್ತದೆ. ಭೌತಿಕ ಅಸ್ತಿತ್ವಕ್ಕೆ ಯಾವುದೇ ಮಹತ್ವವಿರುವುದಿಲ್ಲ.

**ಮೀನ**: ಖಿನ್ನತೆಯನ್ನು ಹೊಡೆದೋಡಿಸಿ. ಇದ ನಿಮ್ಮನ್ನು ಆವರಿಸಿಕೊಳ್ಳುತ್ತಿದೆ ಮತ್ತು ನಿಮ್ಮ ಪ್ರಗತಿಗೆ ಅಡ್ಡಿಪಡಿಸುತ್ತಿದೆ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ಥ್ಯರಾಗಿರುತ್ತೀರಿ.

## ಟಿಪ್ಪರ್ ಡಿಕ್ಕಿಗೆ ನುಜ್ಜುಗುಜ್ಜಾದ ಟೋಲ್ ಪ್ಲಾಜಾ

**ಉದಯವಾಹಿನಿ, ವಿಜಯಪುರ**

ಟಿಪ್ಪರ್‌ವೊಂದು ಟೋಲ್ ಪ್ಲಾಜಾಗೆ ಡಿಕ್ಕಿ ಹೊಡೆದ ಪರಿಣಾಮ ಶುಲ್ಕ ಸಂಗ್ರಹ ಕೇಂದ್ರ ಸಂಪೂರ್ಣ ನುಜ್ಜುಗುಜ್ಜಾಗಿ, ವಿಜಯಪುರ-ಕಲಬುರಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಕೆಲಕಾಲ ಅಸ್ತವ್ಯಸ್ತಗೊಂಡ ಘಟನೆ ಸಿಂದಗಿ ತಾಲ್ಲೂಕಿನ ಕನ್ನೊಳ್ಳಿ ಬಳಿ ಭಾನುವಾರ ನಸುಕಿನ ಜಾವ ನಡೆದಿದೆ. ರಾಷ್ಟ್ರೀಯ ಹೆದ್ದಾರಿ-52ರಲ್ಲಿರುವ ನ್ಯಾಷನಲ್ ಹೈವೇಸ್ ಅಥಾರಿಟಿ ಆಫ್ ಇಂಡಿಯಾಗೆ ಸೇರಿದ ಟೋಲ್ ಪ್ಲಾಜಾಗೆ ಟಿಪ್ಪರ್ ಡಿಕ್ಕಿ ಹೊಡೆದ ರಭಸಕ್ಕೆ ಶುಲ್ಕ ಸಂಗ್ರಹಿಸುವ ಕಟ್ಟಡ ಹಾಗೂ ಟೋಲ್ ವ್ಯವಸ್ಥೆಗೆ ಭಾರಿ ಹಾನಿಯಾಗಿದೆ. ಟೋಲ್ ಪ್ಲಾಜಾದ ಪ್ರಮುಖ ಭಾಗ ಹಾನಿಗೊಳಗಾದ ಪರಿಣಾಮ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಿ, ಹೆದ್ದಾರಿಯಲ್ಲಿ ಕೆಲಕಾಲ ವಾಹನಗಳು ಸಾಲುಗಟ್ಟಿ ನಿಲ್ಲುವಂತಾಯಿತು. ವಿಜಯಪುರ-ಕಲಬುರಗಿ ಮಾರ್ಗದಲ್ಲಿ ಸಂಚಾರದ ಮೇಲೆ ಅಪಘಾತದ ಪರಿಣಾಮ ಬೀರಿತು. ಮಾಹಿತಿ ತಿಳಿದು ಸ್ಥಳಕ್ಕೆ ಧಾವಿಸಿದ ಪೊಲೀಸರು ಅಪಘಾತಕ್ಕೀಡಾದ ಟಿಪ್ಪರ್‌ಅನ್ನು ತೆರವುಗೊಳಿಸಿ, ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಅದೃಷ್ಟವಶಾತ್ ಟಿಪ್ಪರ್ ಡಿಕ್ಕಿಯ ತೀವ್ರತೆಯ ನಡುವೆಯೂ ಯಾವುದೇ ಪ್ರಾಣಹಾನಿ ಅಥವಾ ಗಾಯಗಳಾಗಿಲ್ಲ. ಘಟನೆ ಸಿಂದಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಅಪಘಾತದಿಂದ ಉಂಟಾದ ಹಾನಿಯ ಕುರಿತು ಪರಿಶೀಲನೆ ಮುಂದುವರಿದಿದೆ.



ಉದಯವಾಹಿನಿ ಚಿತ್ರ

## ವೃದ್ಧೆ ಮೇಲೆ ನಾಯಿ ದಾಳಿ

**ಉದಯವಾಹಿನಿ, ಕಾರಟಗಿ**

ಪಟ್ಟಣದ 10ನೇ ವಾರ್ಡ್ ನಲ್ಲಿ ಮನೆಯಂಗಳದಲ್ಲಿ ಮಲಗಿದ್ದ ವೃದ್ಧೆಯೊಬ್ಬರ ಮೇಲೆ ಬೀದಿ ನಾಯಿಯೊಂದು ಏಕಾಏಕಿ ದಾಳಿ ನಡೆಸಿ ಕಚ್ಚಿ ತೀವ್ರವಾಗಿ ಗಾಯಗೊಳಿಸಿದ ಘಟನೆ ಬೆಳಿಗ್ಗೆ ನಡೆದಿದೆ.


ಉದಯವಾಹಿನಿ ಚಿತ್ರ

**ಘಟನೆ ವಿವರ:** 10ನೇ ವಾರ್ಡ್ ನ ನಿವಾಸಿ ಶ್ರೀಮತಿ ತುಳಸಮ್ಮ ಮೊಡಿಕಾರ್ ಉಪ್ಪಾರ ಎಂಬುವವರು ತಮ್ಮ ಮನೆಯ ಹೊರಭಾಗದಲ್ಲಿ ಸೊಳ್ಳೆ ಪರದೆ ಕಟ್ಟಿಕೊಂಡು ಮಲಗಿದ್ದರು. ಭಾನುವಾರ ಬೆಳಗಿನ ಜಾವ ಸುಮಾರು 4 ಗಂಟೆ ಸಮಯದಲ್ಲಿ ನಾಯಿಯೊಂದು ಏಕಾಏಕಿ ಸೊಳ್ಳೆ ಪರದೆ ಸರಿಸಿಕೊಂಡು ಒಳನುಗ್ಗಿ ಮಲಗಿದ್ದ ಮಹಿಳೆ ಮೇಲೆ ದಾಳಿ ಮಾಡಿ ತೀವ್ರವಾಗಿ ಕಚ್ಚಿದೆ.

ನಾಯಿ ಕಡಿತದಿಂದ ಗಂಭೀರವಾಗಿ ಗಾಯಗೊಂಡಿರುವ ವೃದ್ಧೆಯನ್ನು ತಕ್ಷಣ ಕಾರಟಗಿಯ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ.

**ಪುರಸಭೆ ವಿರುದ್ಧ ಆಕ್ರೋಶ:** ಪಟ್ಟಣದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಪುರಸಭೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿ 10ನೇ ವಾರ್ಡ್ ನ ನಿವಾಸಿಗಳು ಪುರಸಭೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೀದಿ ನಾಯಿಗಳ ನಿಯಂತ್ರಣಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

### ಭಗವಂತನ ಸಾಕ್ಷಾತ್ಕಾರಕ್ಕೆ ಹಲವಾರು ಮಾರ್ಗಗಳಿದ್ದರೂ ಶ್ರದ್ಧಾ-ಭಕ್ತಿಯಿಂದ ಲಯಬದ್ಧವಾಗಿ ಶಿಸ್ತಿನಿಂದ ಭಜನೆ ಹಾಡಿದರೆ ದೇವರ ಅನುಗ್ರಹಕ್ಕೆ ಪಾತ್ರರಾಗಬಹುದು

# ಭಜನೆಯಿಂದ ಭಗವಂತನ ಸಾಕ್ಷಾತ್ಕಾರ, ಉತ್ತಮ ಸಂಸ್ಕಾರ

**ಉದಯವಾಹಿನಿ, ಉಜಿರೆ**

ಭಗವಂತನ ಅನುಗ್ರಹಕ್ಕೆ ಪಾತ್ರರಾಗಲು ಭಜನೆ ಅತ್ಯಂತ ಸರಳ ಮಾರ್ಗವಾಗಿದ್ದು, ಭಜನೆಯಿಂದ ಭಗವಂತನ ಸಾಕ್ಷಾತ್ಕಾರವಾಗಿ ಭಜಕರಲ್ಲಿ ಉತ್ತಮ ಸಂಸ್ಕಾರ ಮೂಡಿ ಬರುತ್ತದೆ ಎಂದು ಮೈಸೂರಿನ ಸುತ್ತೂರು ಮಠದ ಪೂಜ್ಯ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಹೇಳಿದರು.

ಅವರು ಧರ್ಮಸ್ಥಳದಲ್ಲಿ ಅಮೃತವರ್ಷಿಣಿ ಸಭಾಭವನದಲ್ಲಿ 28 ನೇ ವರ್ಷದ ಭಜನಾ ಕಮ್ಮಟದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದರು.

**1.** 28 ನೇ ವರ್ಷದ ಭಜನಾ ಕಮ್ಮಟದ ಸಮಾರಂಭ
**2.** ಭಗವಂತನ ಮಧ್ಯೆ ಸಂಬಂಧ ಮೂಡಿ ಬರುತ್ತದೆ
**3.** ಜನಮಂಗಳ ಕಾರ್ಯಗಳನ್ನು ಮಾಡಿ ರಾಜರ್ಷಿ

ಭಗವಂತನ ಸಾಕ್ಷಾತ್ಕಾರಕ್ಕೆ ಹಲವಾರು ಮಾರ್ಗಗಳಿದ್ದರೂ ಶ್ರದ್ಧಾ-ಭಕ್ತಿಯಿಂದ ರಾಗ, ತಾಳ, ಲಯಬದ್ಧವಾಗಿ ಶಿಸ್ತಿನಿಂದ ಭಜನೆ ಹಾಡಿದರೆ ಸುಲಭದಲ್ಲಿ ದೇವರ ಅನುಗ್ರಹಕ್ಕೆ ಪಾತ್ರರಾಗಬಹುದು. ನಾಡಿನ ಅನೇಕ ಸಾಧು-ಸಂತರು, ಮೀರಾಬಾಯಿಯಂತಹ ಸಾಧಕರು ಭಕ್ತಿಯಿಂದ ತಮ್ಮನ್ನು ತಾವು ಸಮರ್ಪಿಸಿಕೊಂಡು ದೇವರ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ.ಇಸ್ಕಾನ್‌ನವರು ವಿದೇಶಗಳಲ್ಲಿ ಕೂಡಾ ಭಜನೆ ಮೂಲಕ ದೇವರ ಅನುಗ್ರಹಕ್ಕೆ ಪಾತ್ರರಾಗುವ ಬಗ್ಗೆ ಅರಿವು, ಜಾಗೃತಿ ಮೂಡಿಸಿದ್ದಾರೆ.

ಎಲ್ಲಾ ವಿಷಯಗಳಲ್ಲಿಯೂ ಸೂಕ್ಷ್ಮಗ್ರಾಹಿಯಾದ ವೀರೇಂದ್ರ ಹೆಗ್ಗಡೆಯವರು ಹತ್ತು-ಹಲವು ಜನಮಂಗಳ ಕಾರ್ಯಗಳನ್ನು ಮಾಡಿ "ರಾಜರ್ಷಿ' ಯಾಗಿರುವುದು ಎಲ್ಲರಿಗೂ ಸಂತಸ ಮತ್ತು ಅಭಿಮಾನದ ಸಂಗತಿಯಾಗಿದೆ ಎಂದು ಅವರು ಹೇಳಿದರು.

ಸುಬ್ರಹ್ಮಣ್ಯ ಮಠದ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ ಮಾತನಾಡಿ,



ಉದಯವಾಹಿನಿ ಚಿತ್ರ

ಸನಾತನ ಸಂಸ್ಕೃತಿಯ ಪುನರುತ್ಥಾನಕ್ಕೆ ಕೃಷಿಸಂಸ್ಕೃತಿ ಮತ್ತು ಋಷಿಸಂಸ್ಕೃತಿಯನ್ನು ಮರೆಯಬಾರದು. ಭಜನೆಯಿಂದ ನಾಲಗೆ ಪವಿತ್ರವಾಗಿ ಸಾರ್ಥಕ ಬದುಕಿಗೆ ಸ್ಫೂರ್ತಿ ದೊರಕುತ್ತದೆ. ಭಾವುಕರಾಗಿ ಭಜನೆ ಹಾಡುವುದರಿಂದ ಜೀವನಮಟ್ಟ ಸುಧಾರಣೆಯೊಂದಿಗೆ ನೈತಿಕ ಹಾಗೂ ಧಾರ್ಮಿಕ ಮಟ್ಟವೂ ಉನ್ನತಿಗೇರುತ್ತದೆ ಎಂದು ಅವರು ಹೇಳಿದರು. ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆ ಸಲ್ಲದು ಎಂದು ಅವರು ತಿಳಿಸಿದರು.ಸುಶ್ರಾವ್ಯವಾಗಿ ಭಜನೆಯೊಂದನ್ನು ಹಾಡಿ, ಸ್ವಾಮೀಜಿ ಶ್ರೋತೃಗಳ ಮುಕ್ತ ಪ್ರಶಂಸೆಗೆ ಪಾತ್ರರಾದರು.

ಕಮ್ಮಟದಲ್ಲಿ ಉತ್ತಮ ತರಬೇತಿ ಮತ್ತು ಮಾರ್ಗದರ್ಶನ ನೀಡಿದ ಸಂಪನ್ಮೂಲ ವ್ಯಕ್ತಿಗಳನ್ನು ಮತ್ತು ಹಿರಿಯ ವಿದ್ವಾಂಸರನ್ನು ಹೆಗ್ಗಡೆಯವರು ಅಭಿನಂದಿಸಿದರು.

ಶಿಬಿರಾರ್ಥಿಗಳಿಂದ ಸಾಮೂಹಿಕ ನೃತ್ಯ ಭಜನೆ ಮತ್ತು ಕುಣಿತ ಭಜನೆ ನಡೆಯಿತು. ಹೇಮಾವತಿ ವೀ. ಹೆಗ್ಗಡೆ, ಡಿ. ಸುರೇಂದ್ರ ಕುಮಾರ್, ಡಿ. ಹರ್ಷೇಂದ್ರ ಕುಮಾರ್, ಸುಪ್ರಿಯಾಹರ್ಷೇಂದ್ರ ಕುಮಾರ್, ಐಶ್ವರ್ಯನಿಶ್ಚಲ್ ಕುಮಾರ್ ಉಪಸ್ಥಿತರಿದ್ದರು. ಭಜನಾ ಕಮ್ಮಟದ ಕಾರ್ಯದರ್ಶಿ ಎ.ವಿ. ಶೆಟ್ಟಿ ವರದಿ ಸಾದರಪಡಿಸಿ ಒಂದು ವಾರ ನಡೆದ ಕಮ್ಮಟದಲ್ಲಿ 107 ಪುರುಷರು ಮತ್ತು 105 ಮಹಿಳೆಯರು ಸೇರಿದಂತೆ ಒಟ್ಟು 212 ಶಿಬಿರಾರ್ಥಿಗಳು ಭಾಗವಹಿಸಿದ್ದಾರೆ ಎಂದರು.

> ಶಿಬಿರಾರ್ಥಿಗಳು ಕಮ್ಮಟದಲ್ಲಿ ಪಡೆದ ಅನುಭವವನ್ನು ಸದುಪಯೋಗ ಮಾಡಿ ಆಯಾ ಊರಿನ ನಾಯಕರಾಗಿ ಪ್ರಗತಿಯ ರೂವಾರಿಗಳಾಗಬೇಕು. ನಿತ್ಯವೂ ರಾಗ, ತಾಳ, ಲಯಬದ್ಧವಾಗಿ ಭಜನೆ ಹಾಡಿ ಸಾರ್ಥಕ ಜೀವನ ನಡೆಸಬೇಕು.
> – ಡಿ. ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿ

> ಭಜನೆಯಿಂದ ನಮ್ಮಲ್ಲಿರುವ ಸಾತ್ವಿಕಶಕ್ತಿ ಜಾಗೃತವಾಗಿ ನೈತಿಕತೆಯೊಂದಿಗೆ ಆರೋಗ್ಯಪೂರ್ಣ ಸಮಾಜ ನಿರ್ಮಾಣವಾಗುತ್ತದೆ. ಪ್ರಾರ್ಥನೆ, ಜಪ, ತಪ, ಧ್ಯಾನ ಇದ್ದಲ್ಲಿ ಭಕ್ತರು ಮತ್ತು ಭಗವಂತನ ಮಧ್ಯೆ ಅವಿನಾಭಾವ ಸಂಬಂಧ ಮೂಡಿ ಬರುತ್ತದೆ.
> – ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ

ಬ್ರಹ್ಮಾವರದ ತಿಮ್ಮಪ್ಪ ಕರ್ಕೇರಾ ಮತ್ತು ಸುಳ್ಯದ ಶ್ರೀಲತಾ ಕಮ್ಮಟದ ಬಗ್ಗೆ ಅಭಿಪ್ರಾಯ, ಅನಿಸಿಕೆ ವ್ಯಕ್ತಪಡಿಸಿದರು. ಮಾಣಿಲದ ಮೋಹನದಾಸ ಸ್ವಾಮೀಜಿ, ಶಾಸಕ ಹರೀಶ್ ಪೂಂಜ, ಮಾಜಿ ಶಾಸಕ ಕೆ. ಪ್ರತಾಪಸಿಂಹ ನಾಯಕ್ ಇದ್ದರು. ಭಜನಾ ಕಮ್ಮಟದ ಸಂಚಾಲಕ ಸುಬ್ರಹ್ಮಣ್ಯ ಪ್ರಸಾದ್ ಸ್ವಾಗತಿಸಿದರು. ರತ್ನವರ್ಮ ಜೈನ್ ಧನ್ಯವಾದವಿತ್ತರು. ಶ್ರೀನಿವಾಸ ರಾವ್ ಧರ್ಮಸ್ಥಳ ಕಾರ್ಯಕ್ರಮ ನಿರ್ವಹಿಸಿದರು.

## ಅಭಿವೃದ್ಧಿಗೆ 40 ಕೋಟಿ ಅನುದಾನಕ್ಕೆ ಸಮ್ಮತಿ

**ಉದಯವಾಹಿನಿ, ಯಲಬುರ್ಗಾ**

ಯಲಬುರ್ಗಾ ಕ್ಷೇತ್ರದ ಅಭಿವೃದ್ಧಿಗೆ 40 ಕೋಟಿ ಅನುದಾನ ನೀಡುವಂತೆ ಮನವಿ ಮಾಡಿದ್ದು, ಇದಕ್ಕೆ ಉಪ ಮುಖ್ಯಮಂತ್ರಿ ಅನುದಾನ ನೀಡುವ ಬಗ್ಗೆ ಸಮ್ಮತಿಸಿದ್ದಾರೆ ಎಂದು ಸಚಿವ ಬಸವರಾಜ ರಾಯರಡ್ಡಿ ತಿಳಿಸಿದರು.

ತಾಲ್ಲೂಕಿನ ಕರಮುಡಿ ಗ್ರಾಮದಲ್ಲಿ ಕಾಂಗ್ರೇಸ್ ಪಕ್ಷದ ವತಿಯಿಂದ ಹಮ್ಮಿಕೊಂಡ ಜನಸೇವಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ರಾಜ್ಯ ಸರ್ಕಾರ ಬರ ನಿರ್ವಹಣೆಗೆ ಬದ್ಧವಾಗಿದೆ ಎಂದರು ಕಾರ್ಯಕ್ರಮದ ವೇದಿಕೆಯಲ್ಲಿ ಸಚಿವ ಬಸವರಾಜ ರಾಯರಡ್ಡಿ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದರು.

> ರಾಜ್ಯದಲ್ಲಿ ಡಿಸೆಂಬರ್‌ನಲ್ಲಿ ಜಿಪಂ, ತಾಪಂ ಚುನಾವಣೆ ಜರುಗಲಿವೆ. ತಾಲ್ಲೂಕಿನಲ್ಲಿ ಕಾಂಗ್ರೇಸ್ ಪಕ್ಷದ ಅಭ್ಯರ್ಥಿಗಳಿಗೆ ಮತದಾರರು ಆಶೀರ್ವಾದ ಮಾಡಬೇಕು. ಅಭ್ಯರ್ಥಿಗಳು ಗೆದ್ದರೆ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಮತ್ತಷ್ಟು ಅನುಕೂಲವಾಗಲಿದೆ.
> – ಬಸವರಾಜ ರಾಯರಡ್ಡಿ, ಉನ್ನತ ಶಿಕ್ಷಣ ಸಚಿವರು.


ಉದಯವಾಹಿನಿ ಚಿತ್ರ

ಇದೆ ಸಂದರ್ಭ ಆನಂದ ಈ ವೇಳೆ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಕೆರೆಬಸಪ್ಪ ನಿಡಗುಂದಿ ಮುಖಂಡರುಗಳಾದ ಉಳ್ಳಾಗಡ್ಡಿ, ಡಾ.ಶಿವನಗೌಡ ದಾನರಡ್ಡಿ, ಶರಣಪ್ಪ ಗಾಂಜಿ. ರಾಮಣ್ಣ ಪ್ರಭಣ್ಣನವರ, ಹಂಪಯ್ಯಸ್ವಾಮಿ ಹಿರೇಮಠ, ಶಮಿದಸಾಬ ಮುಲ್ಲಾ. ಮಲ್ಲಿಕಾರ್ಜುನ ಜಕ್ಕಲಿ, ಹೇಮರೆಡ್ಡಿ ರಡೇರ್, ಕಳಕಪ್ಪ ಕುರಿ, ಛತ್ರಪ್ಪ ಛಲವಾದಿ, ಎಂ.ಎಫ್.ನಧಾಪ್, ಶರಣಪ್ಪ ಪುರ್ತಗೇರಿ. ರವಿಚಂದ್ರ ಕೆಂಚರೆಡ್ಡಿ. ನಿಂಗನಗೌಡ ಹೊಸಳ್ಳಿ. ಹುಚ್ಚಿರಪ್ಪ ರಾಂಪುರ. ಬಸನಗೌಡ ಕೆಂಚರೆಡ್ಡಿ. ಇಮಾಮ ಗುಳೇದಗುಡ್ಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಹೆಲ್ಮೆಟ್ ಧರಿಸಿ, ರಸ್ತೆ ನಿಯಮ ಪಾಲಿಸಿ

**ಉದಯವಾಹಿನಿ, ಔರಾದ**

'ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸಿದರೆ ಸರ್ಕಾರಕ್ಕೆ ಯಾವುದೇ ನಷ್ಟವಿಲ್ಲ. ಸಾರ್ವಜನಿಕರ ಜೀವ ಸುರಕ್ಷತೆಗಾಗಿ ಸರ್ಕಾರ ದಂಡ ವಿಧಿಸುತ್ತದೆ. ನಮ್ಮನ್ನು ನಂಬಿ ಬದುಕುತ್ತಿರುವ ಕುಟುಂಬದ ಹಿತದೃಷ್ಟಿಯಿಂದಲಾದರೂ ಪ್ರತಿಯೊಬ್ಬರೂ ರಸ್ತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು' ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ರಾಘವೇಂದ್ರ ಉಪಾಧ್ಯೆ ಸಲಹೆ ನೀಡಿದರು.

ತಾಲ್ಲೂಕಿನ ಗುಡಪಳ್ಳಿ ಗ್ರಾಮದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ 60 ದಿನಗಳ ಬೃಹತ್ ಕಾನೂನು ಜಾಗೃತಿ ಅಭಿಯಾನದ ಅಂಗವಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಬೀದರ್ ಪ್ರಾದೇಶಿಕ ಸಾರಿಗೆ ಕಚೇರಿ ಸಹಯೋಗದಲ್ಲಿ ಆಯೋಜಿಸಿದ್ದ ರಸ್ತೆ ಸುರಕ್ಷತೆ ಮತ್ತು ಸಾರಿಗೆ ಸೇವಾ ಶಿಬಿರವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.


ಉದಯವಾಹಿನಿ ಚಿತ್ರ

'ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ವಿಮೆ ಇಲ್ಲದೆ ವಾಹನ ಚಲಾಯಿಸುವುದು ಅಪಾಯಕಾರಿ. ಅಪಘಾತ ಸಂಭವಿಸಿದರೆ ಮೂರನೇ ವ್ಯಕ್ತಿಗೆ ಪರಿಹಾರ ನೀಡುವ ಹೊಣೆ ವಾಹನ ಮಾಲೀಕರ ಮೇಲೆಯೇ ಬರಬಹುದು. ಪರಿಹಾರದ ಮೊತ್ತ ಲಕ್ಷಾಂತರ ರೂಪಾಯಿಗಳಾಗುವ ಸಾಧ್ಯತೆಯೂ ಇದೆ' ಎಂದು ಎಚ್ಚರಿಸಿದರು. ಔರಾದ ಹಿರಿಯ ಸಿವಿಲ್ ನ್ಯಾಯಾಧೀಶ ಹಾಜಿ ಹುಸೇನಸಾಬ್ ಯಾದವಾಲ ಮಾತನಾಡಿ, 'ಜಿಲ್ಲೆಯಲ್ಲೇ ಗುಡಪಳ್ಳಿ ಗ್ರಾಮವನ್ನು ಇಂತಹ ಕಾರ್ಯಕ್ರಮಕ್ಕೆ ಆಯ್ಕೆ ಮಾಡಲಾಗಿದೆ. ಆಧಾರ್ ಕಾರ್ಡ್, ಜನ್ಮ ದಿನಾಂಕ ದಾಖಲೆ, ಪಹಣಿ ತಿದ್ದುಪಡಿ, ಚಾಲನಾ ಪರವಾನಗಿ ಹಾಗೂ ವಿಮೆ ಸೇರಿದಂತೆ ಹಲವು ಸೇವೆಗಳು ಗ್ರಾಮಸ್ಥರ ಮನೆ ಬಾಗಿಲಿಗೆ ಬಂದಿವೆ. ಇದರ ಸದುಪಯೋಗ ಪಡೆದುಕೊಳ್ಳಬೇಕು' ಎಂದರು.

## ಕಲೆ ಉಳಿಸಿ ಬೆಳೆಸಲು ಪಾಲಕರು ಮಕ್ಕಳಲ್ಲಿ ಆಸಕ್ತಿ ಮೂಡಿಸಬೇಕು

**ಉದಯವಾಹಿನಿ, ಬೀದರ**

ಜಾನಪದ ಕಲೆ ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಪ್ರತೀಕವಾಗಿದೆ. ಇಂತಹ ಅಮೂಲ್ಯ ಕಲೆಯನ್ನು ಉಳಿಸಿ ಬೆಳೆಸಲು ಪಾಲಕರು ತಮ್ಮ ಮಕ್ಕಳಲ್ಲಿ ಬಾಲ್ಯದಿಂದಲೇ ಕಥೆ, ಕವನ ಹಾಗೂ ಜಾನಪದ ಹಾಡುಗಳ ಬಗ್ಗೆ ಅಭಿರುಚಿ ಮೂಡಿಸಬೇಕು ಎಂದು ಭವಾನಿ ಮಂದಿರದ ಅಧ್ಯಕ್ಷ ಜಗದೀಶ ಕಾಳೆಕರ್ ಹೇಳಿದರು.

ನಗರದ ಮಂಗಲಪೇಟೆಯ ಭವಾನಿ ಮಂದಿರದಲ್ಲಿ ಅ. 2ರಂದು ಚಾಮುಂಡೇಶ್ವರಿ ಶಿಕ್ಷಣ ಸಂಸ್ಥೆ, ಚೌಬಾದ, ಬೀದರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೀದರ ಇವರ ಸಂಯುಕ್ತಾಶ್ರಯದಲ್ಲಿ ಪರಿಶಿಷ್ಟ ಜಾತಿ ಯೋಜನೆಯಡಿ ಪ್ರಾಯೋಜಿತ ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪಾಲಕರು ಮನೆಯಲ್ಲಿ ಮಕ್ಕಳಿಗೆ ಜನಪದ ಕಥೆಗಳನ್ನು ಹೇಳುವುದು, ಹಾಡುಗಳನ್ನು ಕಲಿಸುವುದು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದು ಅಗತ್ಯವಾಗಿದೆ. ಇಂತಹ



ಉದಯವಾಹಿನಿ ಚಿತ್ರ

ಕಾರ್ಯಕ್ರಮಗಳನ್ನು ಪ್ರತಿವರ್ಷ ಆಯೋಜಿಸುವ ಮೂಲಕ ಹಿರಿಯ ಕಲಾವಿದರಿಗೆ ವೇದಿಕೆ ಕಲ್ಪಿಸುವುದರ ಜತೆಗೆ ನಮ್ಮ ನೆಲದ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಲು ಸಾಧ್ಯವಾಗುತ್ತದೆ ಎಂದರು.

## ಮಲ್ಪೆ ತೀರದಲ್ಲಿ ಪ್ರವಾಸಿಗರ ದಟ್ಟಣೆ!

**ಉದಯವಾಹಿನಿ, ಉಡುಪಿ**

ವಾರಾಂತ್ಯ ಮತ್ತು ಮುಂಬರುವ ದಸರಾ ರಜಾದಿನಗಳ ಹಿನ್ನೆಲೆಯಲ್ಲಿ, ಕರ್ನಾಟಕದ ವಿವಿಧ ಭಾಗಗಳು ಹಾಗೂ ಇತರ ರಾಜ್ಯಗಳಿಂದ ಪ್ರವಾಸಿಗರು ಉಡುಪಿ ಜಿಲ್ಲೆಯ ಕಡಲತೀರಗಳಿಗೆ ಭೇಟಿ ನೀಡಿದ್ದರಿಂದ ಮಲ್ಪೆ ಕಡಲತೀರದಲ್ಲಿ ಪ್ರವಾಸಿಗರ ದಂಡೇ ಕಂಡುಬಂದಿತು.

ತೀವ್ರ ಬಿಸಿಲಿದ್ದರೂ, ಬೆಂಗಳೂರು, ಮೈಸೂರು, ಧಾರವಾಡ ಮತ್ತು ಬೆಳಗಾವಿಯಿಂದ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದವು. ಮುಖ್ಯ ಕಡಲತೀರದ ಪ್ರದೇಶದಿಂದ 'ಸೀ ವಾಕ್'ವರೆಗೂ ಜನಸಾಗರವೇ ಕಂಡುಬಂದಿತು.

ಬೆಳಿಗ್ಗೆಯಿಂದಲೇ ಮಲ್ಪೆಗೆ ಪ್ರವಾಸಿಗರ ಆಗಮನ ಹೆಚ್ಚಾಗತೊಡಗಿತು. ಮಧ್ಯಾಹ್ನದ ವೇಳೆಗೆ ಜನಸಂದಣಿ ಎಷ್ಟು ಹೆಚ್ಚಾಯಿತೆಂದರೆ, ವಾಹನಗಳನ್ನು ನಿಲ್ಲಿಸಲು (ಪಾರ್ಕಿಂಗ್) ಜಾಗವೇ ಸಿಗದಂತಾಯಿತು. ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳನ್ನು ನಿಲ್ಲಿಸಿದ್ದರಿಂದ ಸಂಚಾರ ದಟ್ಟಣೆ ಉಂಟಾಗಿ ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆಯಾಯಿತು. ಕಡಲತೀರದಲ್ಲಿ ಪ್ರವಾಸಿಗರು 'ಬನಾನಾ


ಉದಯವಾಹಿನಿ ಚಿತ್ರ

ರೈಡ್' ಮತ್ತು 'ಸ್ಪೀಡ್ ಬೋಟ್ ರೈಡ್'ನಂತಹ ಜಲ ಸಾಹಸ ಕ್ರೀಡೆಗಳನ್ನು ಆನಂದಿಸುತ್ತಿರುವುದು ಕಂಡುಬಂದಿತು. ಜನಪ್ರಿಯ 'ಸೇಂಟ್ ಮೇರಿಸ್ ದ್ವೀಪ'ಕ್ಕೆ ದೋಣಿಯ ಮೂಲಕ ತೆರಳುವ ಪ್ರವಾಸಿಗರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಗಿತ್ತು.

ಪ್ರವಾಸಿಗರ ವಾಹನಗಳ ಸಂಖ್ಯೆಯಲ್ಲಿನ ಹಠಾತ್ ಏರಿಕೆಯಿಂದಾಗಿ ರಾಷ್ಟ್ರೀಯ ಹೆದ್ದಾರಿ ಮತ್ತು ಮಲ್ಪೆಗೆ ಸಂಪರ್ಕ ಕಲ್ಪಿಸುವ ಬಹುತೇಕ ರಸ್ತೆಗಳಲ್ಲಿ ಭಾರಿ ಸಂಚಾರ ದಟ್ಟಣೆ ಉಂಟಾಯಿತು, ಇದರಿಂದ ವಾಹನ ಸವಾರರು ಪರದಾಡುವಂತಾಯಿತು. ಅನೇಕ ಶಾಲೆ ಮತ್ತು ಕಾಲೇಜುಗಳಲ್ಲಿ ಪರೀಕ್ಷೆಗಳು ಮುಗಿದಿದ್ದು, ಅಕ್ಟೋಬರ್ 11 ರಿಂದ ದಸರಾ ರಜಾದಿನಗಳು ಪ್ರಾರಂಭವಾಗಲಿವೆ. ರಜಾ ಅವಧಿಯಲ್ಲಿ ಪ್ರವಾಸಿಗರ ಆಗಮನ ಇನ್ನೂ ಹೆಚ್ಚಾಗುವ ನಿರೀಕ್ಷೆಯಿದೆ.

## ದೇಹದ ಆರೋಗ್ಯಕ್ಕೆ ಪೂರಕ ಆಹಾರ ಸೇವಿಸಿ

**ಉದಯವಾಹಿನಿ, ಮಂಗಳೂರು**

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ' ಎಂಬುದನ್ನು ನೆನಪಿನಲ್ಲಿಟ್ಟುಕೊಂಡು, ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅತ್ಯಂತ ಅಗತ್ಯವಾಗಿದೆ. ಆರೋಗ್ಯಕರ ಜೀವನ ನಡೆಸಲು ಈಗಿಂದಲೇ ಆಹಾರ ಪದ್ಧತಿ ಹಾಗೂ ಜೀವನಶೈಲಿಯಲ್ಲಿ ಅಗತ್ಯ ಬದಲಾವಣೆಯನ್ನು ಮಾಡಿಕೊಳ್ಳಬೇಕು. ಆರೋಗ್ಯಕ್ಕೆ ಪೂರಕವಾದ ಹಾಗೂ ಪೌಷ್ಟಿಕಾಂಶಯುತ ಆಹಾರವನ್ನು ಸೇವಿಸುವ ಅಭ್ಯಾಸವನ್ನು ಬೆಳೆಸಿಕೊಂಡರೆ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ ಖಾದರ್ ಹೇಳಿದರು.

ಅವರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಮಂಗಳೂರು ಗ್ರಾಮಾಂತರ, ಆಯುಷ್ ಇಲಾಖೆ ಸಹಯೋಗದೊಂದಿಗೆ ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಪೋಷಣ ಅಭಿಯಾನ


ಉದಯವಾಹಿನಿ ಚಿತ್ರ

ಯೋಜನೆಯಡಿ ಪೋಷಣ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ವಿಶೇಷವಾಗಿ ಮಕ್ಕಳ ಬೆಳವಣಿಗೆಯ ಹಂತದಲ್ಲಿ ಪೌಷ್ಟಿಕ ಆಹಾರಕ್ಕೆ ಹೆಚ್ಚಿನ ಮಹತ್ವವಿದ್ದು, ತಾಯಂದಿರು ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ಆರೋಗ್ಯಕರ ಆಹಾರ ಪದ್ಧತಿಯನ್ನು ರೂಢಿಸಬೇಕು ಎಂದು ಸಚಿವರು ತಿಳಿಸಿದರು.

### ಕೇಂದ್ರ ಬರ ಅಧ್ಯಯನ ತಂಡಗಳು ರಾಜ್ಯಕ್ಕೆ ಆಗಮಿಸಿದ್ದು, ದಾವಣಗೆರೆ ಮತ್ತು ಮೈಸೂರು ಜಿಲ್ಲೆಯಲ್ಲಿ ಆದ ಬೆಳೆ ಹಾನಿ ಸಮೀಕ್ಷೆ ನಡೆಸಿದವು

# ಕೇಂದ್ರ ತಂಡಗಳಿಂದ ಬರದ ವಾಸ್ತವ ಸ್ಥಿತಿ ಪರಿಶೀಲನೆ

**ಉದಯವಾಹಿನಿ, ದಾವಣಗೆರೆ**

ಕೇಂದ್ರ ಸರ್ಕಾರದ ಬರ ಅಧ್ಯಯನ ತಂಡಗಳು ರಾಜ್ಯದಲ್ಲಿ ಬರ ವೀಕ್ಷಣೆ ನಡೆಸಿದವು. ಮೈಸೂರು ಮತ್ತು ದಾವಣಗೆರೆ ಜಿಲ್ಲೆಗೆ ಭೇಟಿ ನೀಡಿದ್ದ ತಂಡಗಳು ಬೆಳೆ ಹಾನಿ ಬಗ್ಗೆ ವೀಕ್ಷಿಸಿದವು.

**1.** ಅಧಿಕಾರಿಗಳ ತಂಡಕ್ಕೆ ಮಾಹಿತಿ ನೀಡಿದರು
**2.** ಗೇರ್ ದಡ ಗ್ರಾಮದಲ್ಲಿ ಹೊಗೆಸೊಪ್ಪು ಬೆಳೆ
**3.** ಕೇವಲ 12 ನಿಮಿಷ ದಲ್ಲೇ ಬರ ಅಧ್ಯಯನ

ಕೇಂದ್ರದ ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆಯ ಉಪ ಆಯುಕ್ತ ಸುಧಾಮ್ ಬೇಗ್, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಉಪ ಸಲಹೆಗಾರ ಆಶಿಶ್ ಪಾಂಡೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧೀನ ಕಾರ್ಯದರ್ಶಿ ಪ್ರದೀಪ್ ಕುಮಾರ್, ಭಾರತ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ಮಹಾಲನೋಬಿಸ್, ರಾಷ್ಟ್ರೀಯ ಬೆಳೆ ಮುನ್ಸೂಚನೆ ಕೇಂದ್ರದ ಉಪನಿರ್ದೇಶಕ ಕರಣ್ ಚೌಧರಿ ಅವರು ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲ್ಲೂಕಿನ ಗೇರ್ ದಡ ಗ್ರಾಮ ಹಾಗೂ ಅರಕೆರೆ ಗ್ರಾಮಕ್ಕೆ ಭೇಟಿ ನೀಡಿ ಬರ ಪರಿಶೀಲನೆ ನಡೆಸಿದರು.

ಈ ವೇಳೆ ಅಪರ ಜಿಲ್ಲಾಧಿಕಾರಿ ಆರ್. ಐಶ್ವರ್ಯ ಹಾಗೂ ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್. ರವಿ ಸೇರಿದಂತೆ ಅಧಿಕಾರಿಗಳ


ಉದಯವಾಹಿನಿ ಚಿತ್ರ

> ಜಿಲ್ಲೆಗೆ ಕೇಂದ್ರ ಬರ ಅಧ್ಯಯನ ತಂಡ ಭೇಟಿ ನೀಡಿತ್ತು. ದಾವಣಗೆರೆ ತಾಲ್ಲೂಕಿನ ನೀರ್ಥಡಿ ಗ್ರಾಮದಲ್ಲಿ ಪ್ರೇಮಲೀಲಾ ಬಿನ್ ವೀರಯ್ಯ ಅವರಿಗೆ ಸೇರಿದ ಮೆಕ್ಕೆಜೋಳದ ಜಮೀನಿಗೆ ತೆರಳಿದ್ದ ಕೇಂದ್ರ ತಂಡದವರು ಬರ ಪರಿಶೀಲನೆ ಮಾಡಿದ್ದಾರೆ.
> – ಸುಧಾಮ್ ಬೇಗ್, ಆಯುಕ್ತ

ತಂಡ ಮಳೆಯ ಕೊರತೆಯಿಂದ ಬೆಳೆಗಳಿಗೆ ಉಂಟಾಗಿರುವ ಹಾನಿ, ಬರಿದಾಗಿರುವ ಕೆರೆಗಳು, ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಅಧಿಕಾರಿಗಳ ತಂಡಕ್ಕೆ ಮಾಹಿತಿ ನೀಡಿದರು. ಕೇಂದ್ರದ ಅಧಿಕಾರಿಗಳ ತಂಡ ಅಧಿಕಾರಿಗಳೊಂದಿಗೆ ಚರ್ಚಿಸಿದ ನಂತರ ಗ್ರಾಮಸ್ಥರೊಂದಿಗೆ ಮಾತನಾಡಿ ಬರ ಪರಿಸ್ಥಿತಿ ಕುರಿತು ಮಾಹಿತಿ ಸಂಗ್ರಹಿಸಿದರು. ಗೇರ್ ದಡ ಗ್ರಾಮದಲ್ಲಿ ಹೊಗೆಸೊಪ್ಪು ಬೆಳೆ ಹಾಗೂ ಅರಕೆರೆ ಗ್ರಾಮದಲ್ಲಿ ರಾಗಿ ಬೆಳೆ ಹಾನಿಯ ಬಗ್ಗೆ ಕೃಷಿ ಇಲಾಖೆ ಅಧಿಕಾರಿಗಳು ವಿವರಿಸಿದ್ದಾರೆ.

ಅಜೀತ್ ಕುಮಾರ ಸಾಹು, ಅಮರೇಂದ್ರ ಸಿಂಗ್ ಹಾಗೂ ಜೆ. ಹರ್ಷಾ ನೇತೃತ್ವದ ತಂಡ ರೈತರೊಂದಿಗೆ ಚರ್ಚೆ ನಡೆಸಿ ಮಾಹಿತಿ ಕಲೆ ಹಾಕಿತು. ಈ ವೇಳೆ ಎರಡು ಲಕ್ಷ ರೂಪಾಯಿ ವೆಚ್ಚ ಮಾಡಿ ಏಳು ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಿದ್ದೇನೆ. ಮಳೆ ಇಲ್ಲದೇ ಬೆಳೆ ಸಂಪೂರ್ಣ ಹಾಳಾಗಿದೆ ಎಂದು ರೈತ ಅಳಲು ತೋಡಿಕೊಂಡರು. ಒಂದು ರೂಪಾಯಿ ಆದಾಯ ಇಲ್ಲಾ, ಇದು ಮಳೆ ಆಶ್ರಿತ ಪ್ರದೇಶ. ಬೇರೆ ನೀರಿನ ಮೂಲ ಇಲ್ಲಾ. ತಮ್ಮ ಸಂಕಷ್ಟಕ್ಕೆ ಸ್ಪಂದಿಸುವಂತೆ ಕೇಂದ್ರ ಬರ ಅಧ್ಯಯನ ತಂಡಕ್ಕೆ ರೈತರು ಮನವಿ ಮಾಡಿದರು.

12 ನಿಮಿಷದಲ್ಲೇ ಬರ ಅಧ್ಯಯನ ನಡೆಸಿ ಹೊರಟ ತಂಡ! ಕೇವಲ 12 ನಿಮಿಷದಲ್ಲೇ ಬರ ಅಧ್ಯಯನ ನಡೆಸಿದ ಕೇಂದ್ರ ತಂಡ ಹಾಗೇ ಹೊರಟಿತು. ನೀರ್ಥಡಿ ಗ್ರಾಮದಲ್ಲಿ ಬೆಳೆ ಪರಿಶೀಲನೆ ನಡೆಸಿ ಮಾಹಿತಿ ಕಲೆ ಹಾಕಿತು. ಜಿಲ್ಲೆಯ ಪ್ರಮುಖ ಬೆಳೆಯಾಗಿರುವ ಮೆಕ್ಕೆಜೋಳ, ರಾಗಿ ಬೆಳೆ ವೀಕ್ಷಣೆ ಮಾಡಿದ್ದು, ರೈತರೊಂದಿಗೆ ಬೆಳೆಯ ಖರ್ಚು ವೆಚ್ಚದ ಮಾಹಿತಿ, ಬೆಳೆ ವಿಮೆ ಯಾಕೆ ಮಾಡಿಸಿಲ್ಲ ಎಂದು ಅಧಿಕಾರಿಗಳು ಚರ್ಚೆ ನಡೆಸಿದರು.

ಉದಯ ವಾಹಿನಿ



## 2026ರ ನೊಬೆಲ್ ಪ್ರಶಸ್ತಿಗಳ ಸರಣಿ ಆರಂಭ, ಅಕ್ಟೋಬರ್ 5 ರಿಂದ 12ರವರೆಗೆ ಪ್ರತಿದಿನ ಈ ಘೋಷಣೆ ನಡೆಯಲಿದೆ

# ಶುಕ್ರವಾರದ ಶಾಂತಿ ಪುರಸ್ಕಾರದ ಮೇಲೆ ಸದ್ಯಕ್ಕೆ ಎಲ್ಲರ ಕಣ್ಣು!

**ಸ್ಟಾಕ್‌ಹೋಮ್:** ಇಂದಿನಿಂದ 2026ರ ನೊಬೆಲ್ ಪ್ರಶಸ್ತಿಗಳ ಸರಣಿ ಆರಂಭವಾಗಲಿದೆ. ವೈದ್ಯಕೀಯ, ಭೌತಶಾ ಸ್ತ್ರ, ರಸಾಯನಶಾಸ್ತ್ರ, ಸಾಹಿತ್ಯ, ಶಾಂತಿ ಮತ್ತು ಅರ್ಥಶಾಸ್ತ್ರ ಕ್ಷೇತ್ರಗಳ ಆರು ನೊಬೆಲ್ ಪ್ರಶಸ್ತಿಗಳ ನೀಡಲಾಗುವುದು, ಅಕ್ಟೋಬರ್ 5 ರಿಂದ 12ರವರೆಗೆ ಪ್ರತಿದಿನ ಈ ಘೋಷಣೆ ನಡೆಯಲಿದೆ. ಈ ರೇಸ್‌ನಲ್ಲಿ ಹಸಿವನ್ನು ನಿಯಂತ್ರಿಸುವ ಹಾರ್ಮೋನುಗಳ ಕುರಿತು ಸಂಶೋಧನೆ ಸಾಕಷ್ಟು ಚರ್ಚೆಯಲ್ಲಿದೆ.

**1. ಶುಕ್ರವಾರ ಘೋಷಣೆಯಾಗಲಿರುವ ಶಾಂತಿ ಪ್ರಶಸ್ತಿ**
**2. ಇದು ಓಸ್ಲೋದಲ್ಲಿ ಪ್ರದಾನ ಮಾಡಲಾಗುವ ಏಕೈಕ ನೊಬೆಲ್ ಪ್ರಶಸ್ತಿಯಾಗಿದೆ.**
**3. ಕಳೆದ ವರ್ಷದ ವಿಜೇತೆ, ವೆನೆಜುವೆಲಾದ ವಿರೋಧ ಪಕ್ಷದ ನಾಯಕಿ ಮಾರಿಯಾ ಕೊರಿನಾ ಮಚಾಡೊ**

ಮೊದಲ ದಿನದಂದು ವೈದ್ಯಕೀಯ ವಿಭಾಗದ ನೊಬೆಲ್ ಪ್ರಶಸ್ತಿ ಘೋಷಣೆಯಾಗಿದೆ. ಇದರಲ್ಲಿ ಓಜೆಂಪಿಕ್ ಮತ್ತು 'ಮೌಂಜಾರೊ' ನಂತಹ ತೂಕ ಇಳಿಸುವ ಔಷಧಗಳ ಅಭಿವೃದ್ಧಿ ಸಂಶೋಧನೆಗೆ ಲಭಿಸುವ ಸಾಧ್ಯತೆಯಿದೆ ಎಂದು ನೊಬೆಲ್ ಪ್ರಶಸ್ತಿಗಳ ಮೇಲೆ ಹೆಚ್ಚಿನ ಗಮನ ಹೊಂದಿರುವವರು ತಿಳಿಸಿದ್ದಾರೆ.

ಇದರಲ್ಲಿ ಮೈಕ್ರೋಬಯೋಮ್ ಕುರಿತ ಸಂಶೋಧನೆ, ಹೊಟ್ಟೆ ತುಂಬಿದ ಭಾವನೆ ಹಾಗೂ ಹಸಿವನ್ನು ನಿಯಂತ್ರಿಸುವ ಲೆಪ್ಟಿನ್ ಮತ್ತು ಗ್ರಿಲಿನ್ ಹಾರ್ಮೋನ್‌ಗಳ ಪತ್ತೆ, ಹಾಗೂ ನಾವು ಆಹಾರ ಸೇವಿಸಿದ ನಂತರ ಕರುಳಿನಿಂದ ಬಿಡುಗಡೆಯಾಗಿ ಹೊಟ್ಟೆ ತುಂಬಿದ ಸಂಕೇತವನ್ನು ನೀಡುವ ಗ್ಲುಕಗಾನ್–ಲೈಕ್ ಪೆಪ್ಟೈಡ್ 1 (GLP-1) ಎಂಬ ಹಾರ್ಮೋನ್ ಕುರಿತ ಸಂಶೋಧನೆಗಳು ಇರಬಹುದು. ಓಜೆಂಪಿಕ್ (Ozempic) ನಂತಹ ಔಷಧಗಳು ಇದೇ



ಹಾರ್ಮೋನ್‌ನ ಕಾರ್ಯವೈಖರಿಯನ್ನು ಅನುಕರಿಸುತ್ತವೆ.

ವೈದ್ಯಕೀಯ ಕ್ಷೇತ್ರದಲ್ಲಿ ಅನೇಕರು ಮುಂದಿದ್ದರೂ, ಕೆನಡಾದ ಅಂತಃಸ್ರಾವಶಾಸ್ತ್ರಜ್ಞ ಡೇನಿಯಲ್ ಡ್ರಕ್ಕರ್, ಡ್ಯಾನಿಶ್ ವೈದ್ಯ ಜೆನ್ಸ್ ಜುಲ್ ಹೋಲ್ಸ್ಟ್ ಮತ್ತು ಯುಗೊಸ್ಲಾವ್ ಮೂಲದ ಅಮೇರಿಕನ್ ರಸಾಯನಶಾಸ್ತ್ರಜ್ಞ ಸ್ವೆಟ್ಲಾನಾ ಈ ಪ್ರಶಸ್ತಿಯಲ್ಲಿ ಕೇಳಿ ಬರುತ್ತಿರುವ ಪ್ರಮುಖ ಹೆಸರಾಗಿದೆ.

ಸ್ವೀಡಿಷ್ ಸಾರ್ವಜನಿಕ ಪ್ರಸಾರ ಸಂಸ್ಥೆ ಎಸ್.ಆರ್ ವಿಜ್ಞಾನ ವರದಿಗಾರ್ತಿ ಅನಿಕಾ ಓಸ್ಟ್ಮನ್ ಅವರ ಪ್ರಕಾರ, ಚರ್ಮವು ಹೇಗೆ ಪುನರುತ್ಪತ್ತಿಯಾಗುತ್ತದೆ ಮತ್ತು ಗಾಯಗಳು ಹೇಗೆ ಗುಣವಾಗುತ್ತವೆ ಎಂಬುದರ ಕುರಿತಾದ ಸ್ಟೆಮ್ ಸೆಲ್ ಸಂಶೋಧನೆಗೆ ಮನ್ನಣೆ ಸಿಗಬಹುದು. ಈ ಕ್ಷೇತ್ರದಲ್ಲಿ ಅಮೆರಿಕದ ಜೀವಕೋಶ ಜೀವಶಾಸ್ತ್ರಜ್ಞೆ ಎಲೈನ್ ಫುಚ್ಸ್ ಮತ್ತು ಅವರ ಬ್ರಿಟಿಷ್ ಸಹೋದ್ಯೋಗಿ ಫಿಯೋನಾ ವಾಟ್ ಅವರು ಪ್ರಮುಖರೆಂದು ಗುರುತಿಸಲ್ಪಟ್ಟಿದ್ದಾರೆ.

ವೈದ್ಯಕೀಯ ವಿಭಾಗದ ಪ್ರಶಸ್ತಿಯ ನಂತರ, ಮಂಗಳವಾರ ಭೌತಶಾಸ್ತ್ರ ಮತ್ತು ಬುಧವಾರ ರಸಾಯನಶಾಸ್ತ್ರ ವಿಭಾಗಗಳ ಪ್ರಶಸ್ತಿಗಳನ್ನು ಘೋಷಿಸಲಾಗುವುದು. ಗುರುವಾರ ಸಾಹಿತ್ಯ ಪ್ರಶಸ್ತಿ ವಿಜೇತರ ಹೆಸರನ್ನು ಪ್ರಕಟಿಸಲಾಗುವುದು. ಕಳೆದ ವರ್ಷ ಹಂಗೇರಿಯ ಲಾಸ್ಲೋ ಕ್ರಾಸ್ನಾಹೋರ್ಕೈ ಅವರಿಗೆ ಪ್ರಶಸ್ತಿ ನೀಡಿದ್ದ ಸ್ವೀಡಿಷ್ ಅಕಾಡೆಮಿಯು, ಈ ಬಾರಿ ಮಹಿಳಾ ಲೇಖಕಿಯೊಬ್ಬರನ್ನು ಆಯ್ಕೆ ಮಾಡುವ ಸಾಧ್ಯತೆಯಿದೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಶಾಂತಿ ಪ್ರಶಸ್ತಿಯನ್ನು ಪಡೆಯಲು ಕಳೆದ ವರ್ಷ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತೀವ್ರವಾಗಿ ಲಾಬಿ ನಡೆಸಿದ್ದರು. ಅವರು ಈ ಬಾರಿಯೂ ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ ಎಂಬುದು ಸಮಿತಿಗೆ ತಿಳಿದು ಬಂದಿದೆ. ಈ ವರ್ಷದ ಸಂಭಾವ್ಯ ಪ್ರಶಸ್ತಿ ವಿಜೇತರ ಪೈಕಿ, 'ಸೇವ್ ದಿ ಚಿಲ್ಡ್ರನ್' ಸಂಸ್ಥೆ ಹಾಗೂ ಉಕ್ರೇನ್‌ನ ಮಕ್ಕಳ ಹಕ್ಕುಗಳ ಕಾರ್ಯಕರ್ತ ಮೈಕೋಲಾ ಕುಲೆಬಾ ಅವರಿಗೆ ಜಂಟಿಯಾಗಿ ಪ್ರಶಸ್ತಿ ನೀಡುವ ಸಾಧ್ಯತೆಯಿದೆ. ರಷ್ಯಾ ಆಕ್ರಮಿತ ಪ್ರದೇಶಗಳಿಂದ ಅಕ್ರಮವಾಗಿ ರಷ್ಯಾಕ್ಕೆ ಕರೆದೊಯ್ಯಲಾದ ಉಕ್ರೇನಿಯನ್ ಮಕ್ಕಳನ್ನು ಮರಳಿ ಕರೆತರುವ ನಿಟ್ಟಿನಲ್ಲಿ ಕುಲೆಬಾ ಅವರು ಅಭಿಯಾನ ನಡೆಸುತ್ತಿದ್ದಾರೆ. ಸುಡಾನ್‌ನ ತುರ್ತು ಸ್ಪಂದನಾ ಕೊಠಡಿಗಳು ಈ ಪಟ್ಟಿಯಲ್ಲಿದೆ. ಯುದ್ಧ ಮತ್ತು ಹಸಿವೆ ಎಂಬ ಬೆದರಿಕೆಗಳನ್ನು ಎದುರಿಸುತ್ತಿರುವ ಜನರಿಗೆ ಸಹಾಯ ಮಾಡಲು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಕಾರ್ಯನಿರ್ವಹಿಸುತ್ತಿರುವ ಸ್ವಯಂಸೇವಕರ ಬೃಹತ್ ಜಾಲವಾಗಿದೆ.

### ನೊಬೆಲ್ ಶಾಂತಿ ಪ್ರಶಸ್ತಿಯತ್ತ ಎಲ್ಲರ ಕಣ್ಣು

**ಕುತೂಹಲದಿಂದ ನಿರೀಕ್ಷಿಸಲಾಗುತ್ತಿರುವ ಪ್ರಶಸ್ತಿಯೆಂದರೆ ಶುಕ್ರವಾರ ಘೋಷಣೆಯಾಗಲಿರುವ ಶಾಂತಿ ಪ್ರಶಸ್ತಿ. ಇದು ಓಸ್ಲೋದಲ್ಲಿ ಪ್ರದಾನ ಮಾಡಲಾಗುವ ಏಕೈಕ ನೊಬೆಲ್ ಪ್ರಶಸ್ತಿಯಾಗಿದೆ. ಕಳೆದ ವರ್ಷದ ವಿಜೇತೆ, ವೆನೆಜುವೆಲಾದ ವಿರೋಧ ಪಕ್ಷದ ನಾಯಕಿ ಮಾರಿಯಾ ಕೊರಿನಾ ಮಚಾಡೊ ಅವರು ವಿವಾದವನ್ನು ಹುಟ್ಟುಹಾಕಿದ್ದ ಹಿನ್ನೆಲೆಯಲ್ಲಿ, ಈ ಬಾರಿ ತೀರ್ಪುಗಾರರ ಮಂಡಳಿಯು ಎಲ್ಲರ ಒಮ್ಮತವನ್ನು ಹೊಂದಿರುವ ವ್ಯಕ್ತಿಯನ್ನು ಆಯ್ಕೆ ಮಾಡಬಹುದು ಎಂದು ಕೆಲವು ತಜ್ಞರು ಅಭಿಪ್ರಾಯಪಟ್ಟಿದ್ದಾರೆ**

---

## ಪಾಕಿಸ್ತಾನಿ ಮಹಿಳಾ ಏಜೆಂಟ್‌ಗೆ ರಕ್ಷಣಾ ಮಾಹಿತಿ ಸೋರಿಕೆ ಆರೋಪ; ಭಾರತೀಯ ನೌಕಾಪಡೆ ನಾವಿಕನ ಬಂಧನ

**ಕೊಯಮತ್ತೂರು:** ಪಾಕಿಸ್ತಾನದ ಮಹಿಳಾ ಏಜೆಂಟ್‌ಗೆ ಕಡಲ ಗುಪ್ತಚರ ಮಾಹಿತಿಯನ್ನು ರವಾನೆ ಮಾಡಿದ ಆರೋಪದ ಮೇಲೆ ಭಾರತೀಯ ನೌಕಾಪಡೆಯ ನಾವಿಕನನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಂಧ್ರಪ್ರದೇಶ ಪೊಲೀಸ್ ಕೌಂಟರ್ ಇಂಟೆಲಿಜೆನ್ಸ್ (ಸಿಐ) ಸೆಲ್ ಅಕ್ಟೋಬರ್ 3ರಂದು ಕೊಯಮತ್ತೂರಿನ ನೌಕಾ ನಾಯಕತ್ವ ತರಬೇತಿ ಕೇಂದ್ರವಾದ ಐಎಸ್‌ಎಸ್ ಅಗ್ರಾನಿಯಲ್ಲಿ 31 ವರ್ಷದ ಪ್ರದೀಪ್ ಮುಖರ್ಜಿ ಎಂಬವರನ್ನು ಬಂಧಿಸಿದೆ.

ಬೇಹುಗಾರಿಕೆ ಕಾರ್ಯಾಚರಣೆಯು ಸಾಮಾಜಿಕ ಮಾಧ್ಯಮದಲ್ಲಿನ ಹನಿಟ್ರ್ಯಾಪ್ ಹಿನ್ನೆಲೆಯಲ್ಲಿ ನಡೆದಿದೆ ಎಂದು ಅಧಿಕೃತ ಮೂಲಗಳನ್ನು ಉಲ್ಲೇಖಿಸಿ ಸುದ್ದಿ ಸಂಸ್ಥೆ ಪಿಟಿಐ ವರದಿ ಮಾಡಿದೆ. 2014ರಲ್ಲಿ ನೌಕಾಪಡೆಗೆ ಸೇರಿದ ಪಶ್ಚಿಮ ಬಂಗಾಳ ಮೂಲದ ಮುಖರ್ಜಿ ವಿಶಾಖಪಟ್ಟಣಂನ ಪೂರ್ವ ನೌಕಾ ಕಮಾಂಡ್‌ನಲ್ಲಿ ಸಕ್ರಿಯವಾಗಿ ನಿಯೋಜನೆಗೊಂಡಿದ್ದರು. ಬಂಧನದ ಸಮಯದಲ್ಲಿ, ಅವರು ನಿರ್ವಹಣಾ ಅಭಿವೃದ್ಧಿ ಕೋರ್ಸ್‌ಗೆ ಹಾಜರಾಗಿದ್ದರು ಮತ್ತು ಸುಮಾರು ಒಂದು ವಾರ ಕೊಯಮತ್ತೂರಿನಲ್ಲಿ ಇದ್ದರು ಎಂದು ವರದಿಯಾಗಿದೆ. ಪಾಕಿಸ್ತಾನದ ಮಹಿಳಾ ಗುಪ್ತಚರ ಏಜೆಂಟ್‌ವೊಬ್ಬರು ಹಲವು ತಿಂಗಳ ಹಿಂದೆ ಮುಖರ್ಜಿಯನ್ನು ಸಂಪರ್ಕಿಸಿದ್ದರು ಎಂದು ವರದಿಯಾಗಿದೆ. ಬಳಿಕ, ಹ್ಯಾಂಡ್ಲರ್ ಕಾರ್ಯತಂತ್ರದ ನೌಕಾ ಸ್ವತ್ತುಗಳು, ಫ್ಲೀಟ್ ಚಲನೆಗಳು ಮತ್ತು ವಿಶಾಖಪಟ್ಟಣಂ ನೆಲೆಯ ಕಾರ್ಯಾಚರಣೆಯ ಬಗ್ಗೆ ಸೂಕ್ಷ್ಮ ಡೇಟಾವನ್ನು ಹೊರತೆಗೆಯಲು ಆನ್‌ಲೈನ್ ಸಂಬಂಧವನ್ನು ಬಳಸಿಕೊಂಡರು ಎಂದು ವರದಿಗಳು ತಿಳಿಸಿವೆ.

ಗಡಿಯಾಚೆಗಿನ ಬೇಹುಗಾರಿಕೆ ಮತ್ತು ಭಯೋತ್ಪಾದಕ ಬೆದರಿಕೆಗಳನ್ನು ಎದುರಿಸುವ ವಿಶೇಷ ಘಟಕವಾದ ಸಿಐ ಸೆಲ್, ನಾವಿಕನಿಗೆ ಸಂಬಂಧಿಸಿದ ಅನುಮಾನಾಸ್ಪದ ಡಿಜಿಟಲ್ ಮಾಹಿತಿಯನ್ನು ಪತ್ತೆಹಚ್ಚಿದ ಬಳಿಕ ತನಿಖೆಯನ್ನು ಪ್ರಾರಂಭಿಸಿತ್ತಲ್ಲದೆ, ನಂತರ ನಾವಿಕನ ಮೇಲೆ ಕಣ್ಗಾವಲು ಇರಿಸಿತ್ತು ಎಂದು ವರದಿಯಾಗಿದೆ.

ಈ ಘಟನೆ ಮುನ್ನೆಲೆಗೆ ಬರುವ ಒಂದು ದಿನ ಮುನ್ನ, ಭಾರತೀಯ ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎಪಿ ಸಿಂಗ್ ಶನಿವಾರ ರಕ್ಷಣಾ ಸಿಬ್ಬಂದಿಗೆ ಸಾಮಾಜಿಕ ಮಾಧ್ಯಮ ಹನಿಟ್ರ್ಯಾಪ್‌ಗಳು ಮತ್ತು ಡಿಜಿಟಲ್ ಬೇಹುಗಾರಿಕೆ ಪ್ರಯತ್ನಗಳ ವಿರುದ್ಧ ಜಾಗರೂಕರಾಗಿರುವಂತೆ ಕಠಿಣ ಎಚ್ಚರಿಕೆ ನೀಡಿದ್ದರು.

## ಗರ್ಭಿಣಿಯರು– ನವಜಾತ ಶಿಶುಗಳ ಜೀವಕ್ಕೆ ಅಪಾಯ ತಾಪಮಾನ ಏರಿಕೆ: ವಿಶ್ವಸಂಸ್ಥೆ

**ನಾಡಿ (ಫಿಜಿ):** ಹೆಚ್ಚುತ್ತಿರುವ ವಿಪರೀತ ಶಾಖವು ಗರ್ಭಿಣಿಯರು ಮತ್ತು ನವಜಾತ ಶಿಶುಗಳ ಜೀವಕ್ಕೆ ಹೆಚ್ಚಿನ ಅಪಾಯವನ್ನು ತಂದೊಡ್ಡುತ್ತಿದೆ ಎಂದು ವಿಶ್ವಸಂಸ್ಥೆಯ ಹವಾಮಾನ ವಿಭಾಗದ ಮುಖ್ಯಸ್ಥ ಸೈಮನ್ ಸ್ಟಿಯಲ್ ಎಚ್ಚರಿಸಿದ್ದಾರೆ.

ಫಿಜಿಯ ನಾಡಿಯಲ್ಲಿ ನಡೆಯುತ್ತಿರುವ ಪ್ರಿ–ಕಾಪ್ ಶೃಂಗಸಭೆಯಲ್ಲಿ ಮಾತನಾಡಿರುವ ಅವರು, ಕಳೆದ 5 ವರ್ಷಗಳಲ್ಲಿ ತೀವ್ರ ಶಾಖದಿಂದಾಗಿ ಗರ್ಭಾವಸ್ಥೆಯಲ್ಲಿ ಉಂಟಾಗುತ್ತಿರುವ ಆರೋಗ್ಯ ಸಮಸ್ಯೆಗಳನ್ನು ಆರೋಗ್ಯ ತಜ್ಞರು ಗಮನಿಸಿದ್ದಾರೆ ಎಂಬ ಹೊಸ ಸಮೀಕ್ಷೆಯ ವರದಿಯನ್ನು ಅವರು ಇಲ್ಲಿ ಉಲ್ಲೇಖಿಸಿದ್ದಾರೆ. ಈ ಸಮೀಕ್ಷೆಯನ್ನು ಐದು ಖಂಡಗಳಲ್ಲಿ ನಡೆಸಲಾಗಿದ್ದು, ಮೂರನೇ ಎರಡಕ್ಕಿಂತ ಹೆಚ್ಚು ಆರೋಗ್ಯ ತಜ್ಞರು ಇದನ್ನು ದೃಢಪಡಿಸಿದ್ದಾರೆ.

**ತಾಯಿ–ಮಗುವಿನ ಜೀವಕ್ಕೆ ಎರವಾಗುತ್ತಿರುವ ಶಾಖ:** ಹೆಚ್ಚುತ್ತಿರುವ ತಾಪಮಾನ ಎಂದರೆ ಗರ್ಭಾವಸ್ಥೆಯಲ್ಲಿ ಹೆಚ್ಚುತ್ತಿರುವ ಅಪಾಯ ಎಂದೇ ಅರ್ಥ ಎಂದು ಸೈಮನ್ ಸ್ಟೀಲ್ ಹೇಳಿದ್ದಾರೆ. ಹವಾಮಾನ ವೈಪರೀತ್ಯದಿಂದಾಗಿ ವಿಪರೀತ ಶಾಖವು ಅವಧಿಪೂರ್ವ ಹೆರಿಗೆ, ಮೃತ ಶಿಶು ಜನನ, ಕಡಿಮೆ ತೂಕ ಮತ್ತು ತಾಯಂದಿರ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳಿಗೆ ಕಾರಣವಾಗುತ್ತಿದೆ. ಹವಾಮಾನ ಬಿಕ್ಕಟ್ಟಿನ ಈ ತೀವ್ರ ಸ್ವರೂಪವು ಜಾಗತಿಕ ಮಟ್ಟದಲ್ಲಿ ತಾಯಿ ಮತ್ತು ಮಗುವಿನ ಜೀವಕ್ಕೆ ಮಾರಕವಾಗಿ ಪರಿಣಮಿಸುತ್ತಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ. ವಿಜ್ಞಾನಿಗಳ ಪ್ರಕಾರ, ಹವಾಮಾನ ಬದಲಾವಣೆಯು ತೀವ್ರ ಹವಾಮಾನ ವೈಪರೀತ್ಯಗಳನ್ನು ಮತ್ತಷ್ಟು ಉಲ್ಬಣಗೊಳಿಸುತ್ತಿದೆ. ಜಾಗತಿಕವಾಗಿ ತಾಪಮಾನದ ದಾಖಲೆಗಳನ್ನು ಮುರಿಯತ್ತಿದೆ. ಯುರೋಪಿಯನ್ ಯೂನಿಯನ್‌ನ ಕೊಪರ್ನಿಕಸ್ ಹವಾಮಾನ ವೀಕ್ಷಣಾಲಯದ ದತ್ತಾಂಶಗಳ ಪ್ರಕಾರ, ಪಶ್ಚಿಮ ಯುರೋಪ್‌ನಿಂದ ಹಿಡಿದು ಸಾಹೇಲ್ ಮತ್ತು



ಮಧ್ಯ ಅಮೆರಿಕದವರೆಗಿನ ಸುಮಾರು 33 ದೇಶಗಳಲ್ಲಿ ಈ ವರ್ಷದ ಜುಲೈ ತಿಂಗಳಲ್ಲಿ ಸಾರ್ವಕಾಲಿಕ ಗರಿಷ್ಠ ತಾಪಮಾನ ದಾಖಲಾಗಿದೆ.

'ಶಾಖ ಕಣ್ಣಿಗೆ ಕಾಣದ ಕೊಲೆಗಾರ': ವೆಲ್‌ಕಮ್ ಚಾರಿಟಬಲ್ ಫೌಂಡೇಶನ್ ಇಂಗ್ಲೆಂಡ್, ಆಸ್ಟ್ರೇಲಿಯಾ, ಭಾರತ, ಬ್ರೆಜಿಲ್ ಮತ್ತು ಜಿಂಬಾಬ್ವೆಯ 1 ಸಾವಿರ ಪ್ರಸೂತಿ ತಜ್ಞರು ಮತ್ತು ವೈದ್ಯರನ್ನು ಒಳಗೊಂಡಂತೆ ಈ ಸಮೀಕ್ಷೆಯನ್ನು ನಡೆಸಿತ್ತು. ಈ ಕುರಿತು ಮಾತನಾಡಿರುವ ಸಂಸ್ಥೆಯ ಅಧ್ಯಕ್ಷೆ ಹಾಗೂ ಆಸ್ಟ್ರೇಲಿಯಾದ ಮಾಜಿ ಪ್ರಧಾನಿ ಜೂಲಿಯಾ ಗಿಲ್ಲಾರ್ಡ್, "ವಿಪರೀತ ಶಾಖವು ಕಣ್ಣಿಗೆ ಕಾಣದ ಕೊಲೆಗಾರನಿದ್ದಂತೆ. ಹವಾಮಾನ ಬದಲಾವಣೆಯಿಂದಾಗಿ ತಾಯಂದಿರು ಮತ್ತು ಶಿಶುಗಳು ನಿರಂತರ ಅಪಾಯಕ್ಕೆ ಸಿಲುಕುತ್ತಿದ್ದಾರೆ. ಜಾಗತಿಕ ನಾಯಕರ ಬಳಿ ಇದಕ್ಕೆ ಅಗತ್ಯವಿರುವ ಪುರಾವೆಗಳು ಮತ್ತು ಪರಿಹಾರಗಳಿವೆ. ಈಗ ಅವರು ಕಾರ್ಯಪ್ರವೃತ್ತರಾಗಬೇಕಿದೆ ಎಂದು ತಿಳಿಸಿದ್ದಾರೆ. ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಬಹುತೇಕ ಎಲ್ಲಾ ವೈದ್ಯರು ತೀವ್ರ ಶಾಖದ ಪರಿಣಾಮದಿಂದ ಬಳಲುತ್ತಿರುವ ತಾಯಂದಿರು ಅಥವಾ ಶಿಶುಗಳಿಗೆ ಚಿಕಿತ್ಸೆ ನೀಡಿರುವುದಾಗಿ ಒಪ್ಪಿಕೊಂಡಿದ್ದಾರೆ. ತೀವ್ರ ಶಾಖದ ಕಾರಣದಿಂದಾಗಿ ಶಿಶುಗಳಲ್ಲಿ ಕಡಿಮೆ ತೂಕ, ಬೆಳವಣಿಗೆ ಕುಂಠಿತ, ಹಾಲುಣಿಸುವಲ್ಲಿ ತೊಂದರೆ ಮತ್ತು ನಿರ್ಜಲೀಕರಣದ ಸಮಸ್ಯೆಗಳು ಕಂಡುಬಂದಿವೆ ಎಂದು ಅವರು ತಿಳಿಸಿದ್ದಾರೆ.

## ಮಹಾತ್ಮ ಗಾಂಧಿಯವರ ಬಗ್ಗೆ ಅಶ್ಲೀಲ ರೀಲ್ ಪೋಸ್ಟ್ ಮಾಡಿದ ಸೂರತ್ ಮಹಿಳೆಯ ಬಂಧನ!

**ಸೂರತ್:** ಗುಜರಾತ್‌ನ ಸೂರತ್‌ನಲ್ಲಿ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಭಾವ ಚಿತ್ರವಿರುವ 500 ರೂಪಾಯಿ ಮುಖಬೆಲೆಯ ನೋಟನ್ನು ಆಕ್ಷೇಪಾರ್ಹ ರೀತಿಯಲ್ಲಿ ಬಳಸುವ 'ರೀಲ್'ಅನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ ಆರೋಪದ ಮೇಲೆ ಕಂಟೆಂಟ್ ಕ್ರಿಯೇಟರ್ ಒಬ್ಬರನ್ನು ಸೋಮವಾರ ಬಂಧಿಸಲಾಗಿದೆ. ಬಂಧಿತ ಮಹಿಳೆಯನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಫಾಲೋರ್ಸ್ ಹೊಂದಿರುವ 47 ವರ್ಷದ ಸಿಮ್ರಾನ್ ಪಟೇಲ್ ಎಂದು ಗುರುತಿಸಲಾಗಿದೆ. ಸೂರತ್‌ನ ಅದಾಜನ್ ಪ್ರದೇಶದಲ್ಲಿ ವಾಸಿಸುತ್ತಿರುವ ಸಿಮ್ರನ್ ಅವರನ್ನು ಸೂರತ್ ಪೊಲೀಸರು ಬಂಧಿಸಿದ್ದು, ಗಾಂಧಿ ಜಯಂತಿಯ ಮುನ್ನಾದಿನವಾದ ಅಕ್ಟೋಬರ್ 1 ರಂದು ಮಧ್ಯಾಹ್ನ 1 ರಿಂದ ಸಂಜೆ 6 ರ ನಡುವೆ ತಮ್ಮ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ಈ ವಿಡಿಯೋ ಪೋಸ್ಟ್ ಮಾಡಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸೂರತ್ ಪೊಲೀಸರು ತಮ್ಮ 'ಎಕ್ಸ್' ಖಾತೆಯ ಮೂಲಕ ಈ ಬಂಧನದ ಕುರಿತು ಮಾಹಿತಿ ನೀಡಿದ್ದು, ಇದರೊಂದಿಗೆ ಆ ಕಂಟೆಂಟ್ ಕ್ರಿಯೇಟರ್‌ಗೆ ಸಂಬಂಧಿಸಿದ 'ಮೊದಲು ಮತ್ತು ನಂತರ'ದ ದೃಶ್ಯಾವಳಿಗಳನ್ನು ಒಳಗೊಂಡ ವಿಡಿಯೋ ತುಣುಕನ್ನು ಸಹ ಹಂಚಿಕೊಂಡಿದ್ದಾರೆ.ಇದರಲ್ಲಿ ಮೊದಲ ದೃಶ್ಯವು ಅವರು ನೋಟನ್ನು ನಿರ್ವಹಿಸುತ್ತಿರುವುದನ್ನು ತೋರಿಸಿದರೆ, ಎರಡನೇ ದೃಶ್ಯವು ಅವರ ಕೈಗೆ ಕೋಳ ತೊಡಿಸಿದನ್ನು ತೋರಿಸಲಾಗಿದೆ. ವಿಡಿಯೋದಲ್ಲಿ ಮಹಿಳೆ, ಮಹಾತ್ಮ ಗಾಂಧಿ ಭಾವಚಿತ್ರವಿರುವ 500 ರೂ. ಮುಖಬೆಲೆಯ ನೋಟನ್ನು ಆಕ್ಷೇಪಾರ್ಹ ರೀತಿಯಲ್ಲಿ ಬಳಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ನೋಟಿನೊಂದಿಗೆ ಸೂಕ್ತವಲ್ಲದ ದೃಶ್ಯ ಇರುವುದರಿಂದ ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪ ವ್ಯಕ್ತವಾಗಿತ್ತು.

### ಮಾಜಿ ಸಿಎಂ ಕಾಲು ಮುರಿತ ವೈದ್ಯಕೀಯ ವರದಿ ಬಹಿರಂಗ

## ಎಸ್‌ಎಸ್‌ಕೆಎಂ ಆಸ್ಪತ್ರೆಗೆ ನೋಟಿಸ್ ಕಳುಹಿಸಿದ ಮಮತಾ ಪರ ವಕೀಲರು

**ಕೋಲ್ಕತ್ತಾ:** 2021ರಲ್ಲಿ ಮಮತಾ ಬ್ಯಾನರ್ಜಿ ಕಾಲು ಮುರಿತ ಸಂಬಂಧ ಅವರ ವೈಯಕ್ತಿಕ ವೈದ್ಯಕೀಯ ವರದಿಯು ರಾಜ್ಯದ ಪ್ರಮುಖ ಸರ್ಕಾರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಿಂದ ಹೇಗೆ ಸೋರಿಕೆಯಾಯಿತು ಎಂದು ಮಮತಾ ಪರ ವಕೀಲರಾದ ಅರ್ಕ ಕುಮಾರ್ ಪ್ರಶ್ನಿಸಿದ್ದು, ಈ ಸಂಬಂಧ ಎಸ್‌ಎಸ್‌ಕೆಎಂ ಆಸ್ಪತ್ರೆಗೆ ನೋಟಿಸ್ ಕಳುಹಿಸಲಾಗಿದೆ.



ಈ ವಿಚಾರ ಕುರಿತು ಆಸ್ಪತ್ರೆ ಆಡಳಿತ ವಿವರಣೆ ನೀಡಬೇಕು ಎಂದು ನೋಟಿಸ್‌ನಲ್ಲಿ ಕೋರಲಾಗಿದೆ. ಈ ಕಾನೂನು ನೋಟಿಸ್ ಅನ್ನು ಎಸ್‌ಎಸ್‌ಕೆಎಂ ಆಸ್ಪತ್ರೆ ನಿರ್ದೇಶಕರು ಸೇರಿದಂತೆ ಮೂವರು ಅಧಿಕಾರಿಗಳಿಗೆ ಕಳುಹಿಸಲಾಗಿದೆ. ಮುಖ್ಯಮಂತ್ರಿ ಸುವೇಂದು ಅಧಿಕಾರಿ ಎಸ್‌ಎಸ್‌ಕೆಎಂ ಆಸ್ಪತ್ರೆಯ ಮುಖ್ಯಸ್ಥರಾಗಿರಬಹುದು. ಆದರೆ, ಆಸ್ಪತ್ರೆಯ ಆಂತರಿಕ ದತ್ತಾಂಶವನ್ನು ಪಡೆಯುವ ಅಥವಾ ಅದನ್ನು ಸಾರ್ವಜನಿಕಗೊಳಿಸುವ ಹಕ್ಕು ಸಂವಿಧಾನದ ಪ್ರಕಾರ ಅವರಿಗಿಲ್ಲ. ನ್ಯಾಯಾಲಯವು ವರದಿಯನ್ನು ಬಹಿರಂಗಪಡಿಸಲು ಆದೇಶಿಸಿದ್ದರೆ ಅಥವಾ ತನಿಖೆ ನಡೆಯುತ್ತಿದ್ದರೆ ಮಾತ್ರ ಇದಕ್ಕೆ ವಿನಾಯಿತಿ ನೀಡಲು ಸಾಧ್ಯ. ಆದರೆ, ಈ ಪ್ರಕರಣದಲ್ಲಿ, ಎಸ್‌ಎಸ್‌ಕೆಎಂ ಆಸ್ಪತ್ರೆ ಮತ್ತು ಮುಖ್ಯಮಂತ್ರಿ ಇಬ್ಬರೂ ಮಾಹಿತಿ ಹಕ್ಕು ಮತ್ತು ದತ್ತಾಂಶ ಗೌಪ್ಯತೆಗೆ ಸಂಬಂಧಿಸಿದ ಕಾನೂನುಗಳನ್ನು ಉಲ್ಲಂಘಿಸಿದ್ದಾರೆ. ಇದು ಸಂಪೂರ್ಣವಾಗಿ ಕಾನೂನುಬಾಹಿರ ಕೃತ್ಯ ಎಂದು ನೋಟಿಸ್‌ನಲ್ಲಿ ತಿಳಿಸಿದೆ. ಆ ವರದಿಯು ಅಸಲಿಯೇ, ನಕಲಿಯೇ ಅಥವಾ ಭಾಗಶಃ ಮಾಹಿತಿಯನ್ನು ಒಳಗೊಂಡಿದೆಯೇ ಎಂಬ ಬಗ್ಗೆ ಚರ್ಚೆಗೆ ಇಳಿಯುತ್ತಿಲ್ಲ. ರೋಗಿಯ ಒಪ್ಪಿಗೆಯಿಲ್ಲದೇ ಅವರ ವೈದ್ಯಕೀಯ ಚಿಕಿತ್ಸೆಯ ವಿವರಗಳನ್ನು ಎಸ್‌ಎಸ್‌ಕೆಎಂ ಆಡಳಿತ ಮಂಡಳಿಯು ಯಾವ ಕಾನೂನಿನ ಅಡಿ ಸಾರ್ವಜನಿಕವಾಗಿ ಬಹಿರಂಗಪಡಿಸಿತು ಎಂಬುದನ್ನು ಅವರು ಉತ್ತರಿಸಲೇಬೇಕು. ವರದಿಯ ಸತ್ಯಾಸತ್ಯತೆಯನ್ನು ನಂತರ ನ್ಯಾಯಾಲಯದಲ್ಲಿ ನಿರ್ಧರಿಸಬಹುದು ಎಂದರು.

ಇದೇ ವೇಳೆ ಮಮತಾ ಪರ ವಕೀಲರು ಮತ್ತೊಂದು ವಿಚಾರದ ಕುರಿತೂ ಪ್ರಶ್ನೆ ಎತ್ತಿದ್ದಾರೆ. ಚಿಕಿತ್ಸೆಗಾಗಿ ಆಸ್ಪತ್ರೆಗೆ ಬರುವ ಅನೇಕ ರೋಗಿಗಳ ಡಿಎನ್‌ಎ ಪರೀಕ್ಷೆಗಳನ್ನೂ ನಡೆಸಲಾಗುತ್ತದೆ. ಹೀಗಿರುವಾಗ, ಎಸ್‌ಎಸ್‌ಕೆಎಂ ಆಸ್ಪತ್ರೆಯಲ್ಲಿ ಇಂತಹ ಅತ್ಯಂತ ಗೌಪ್ಯ ವೈದ್ಯಕೀಯ ವರದಿಗಳಿಗೆ ಭದ್ರತೆ ಎಲ್ಲಿದೆ? ರಾಜ್ಯದ ಮುಖ್ಯಮಂತ್ರಿಯವರ ವೈದ್ಯಕೀಯ ದಾಖಲೆಗಳೇ ಸುರಕ್ಷಿತವಾಗಿಲ್ಲ ಎಂದರೇನು? ಆಸ್ಪತ್ರೆ ಯಾವ ಕಾನೂನು ಅಡಿ ಸುವೇಂದು ಅಧಿಕಾರಿಗೆ ವೈದ್ಯಕೀಯ ವರದಿ ಹಸ್ತಾಂತರಿಸಿದೆ ಎಂದು ತಿಳಿಸಬೇಕು ಎಂದು ಆಗ್ರಹಿಸಿದರು. ಸುವೇಂದು ಆರೋಪ: ಕಳೆದ ಶನಿವಾರ ನಂದಿಗ್ರಾಮ ವಿಧಾನಸಭಾ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯ ಪರ ಚುನಾವಣಾ ಪ್ರಚಾರದಲ್ಲಿ ಮಾತನಾಡಿದ ಸುವೇಂದು ಅಧಿಕಾರಿ, 2021ರಲ್ಲಿ ಮಮತಾ ಬ್ಯಾನರ್ಜಿ ಅವರ ಕಾಲು ಮುರಿದ ಘಟನೆ ನಾಟಕ ಎಂದು ಆರೋಪಿಸಿದ್ದರು. ಇದರ ಮರುದಿನವೇ ಅವರ ಮಮತಾ ವೈದ್ಯಕೀಯ ವರದಿ ಎಂದು ಹೇಳಲಾದ ದಾಖಲೆಯನ್ನು ಪತ್ರಿಕಾಗೋಷ್ಠಿಯಲ್ಲಿ ಪ್ರದರ್ಶಿಸಿದ್ದರು. ಪ್ರಚಾರ ಸಂದರ್ಭದಲ್ಲಿ ಮಮತಾ ಕಾಲು ಮುರಿದಿರಲಿಲ್ಲ ಎಂದು ಆರೋಪಿಸಿದ ಅವರು ಈ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ ಎಂದರು.

---

### ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ವಿಶ್ವ ಹಿಂದೂ ಪರಿಷತ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ನಾಯಕ ದಿಗ್ವಿಜಯ ಸಿಂಗ್

# ಸನಾತನ ಧರ್ಮವನ್ನು ಆರೆಸ್ಸೆಸ್, ವಿಹೆಚ್‌ಪಿ ವಿರೂಪಗೊಳಿಸುತ್ತಿವೆ

**ನವದೆಹಲಿ:** ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ವಿಶ್ವ ಹಿಂದೂ ಪರಿಷತ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ನಾಯಕ ದಿಗ್ವಿಜಯ ಸಿಂಗ್, ಇವು ಸನಾತನ ಧರ್ಮವನ್ನು ವಿರೂಪಗೊ ಳಿಸುತ್ತಿವೆ. ಹಿಂದುತ್ವದ ಮೂಲಕ ದೇಶವನ್ನು ಧರ್ಮದ ಆಧಾರದ ಮೇಲೆ ವಿಭಜಿಸುತ್ತಿವೆ ಎಂದು ಆರೋಪಿಸಿದ್ದಾರೆ.

**1. ಹಿಂದುತ್ವದ ಮೂಲಕ ದೇಶವನ್ನು ಧರ್ಮದ ಆಧಾರದ ಮೇಲೆ ವಿಭಜಿಸುತ್ತಿವೆ**
**2. ವಿಹೆಚ್‌ಪಿ ಮೂಲಕ ಸಂಗ್ರಹವಾಗುವ ದೇಣಿಗೆ ನೇರವಾಗಿ ಭಾಜಪ ಚುನಾವಣಾ ನಿಧಿಗೆ ಸೇರುತ್ತವೆ**
**3. ಈ ಪದ್ಧತಿಯಿಂದ ಹಿಂದೂಗಳು ಮತ್ತು ಇತರೆ ಧರ್ಮಗಳ ನಡುವೆ ಬಿರುಕು ಮೂಡಿಸುತ್ತಿದೆ.**

ವಿಹೆಚ್‌ಪಿ ಮೂಲಕ ಸಂಗ್ರಹವಾಗುವ ದೇಣಿಗೆಯು ನೇರವಾಗಿ ಭಾರತೀಯ ಜನತಾ ಪಕ್ಷದ ಚುನಾವಣಾ ನಿಧಿಗೆ ಸೇರುತ್ತವೆ ಎಂದೂ ಕೂಡ ಆರೋಪಿಸಿದ್ದಾರೆ.

ಈ ಕುರಿತು ಎಕ್ಸ್ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಹಿಂದುತ್ವದ ಕುರಿತಾದ ನಿರಂತರ ಹೇಳಿಕೆಗಳು ರಾಷ್ಟ್ರೀಯ ಚರ್ಚೆಯಾಗಿದ್ದು, ಇದು ಹಿಂದೂಗಳು ಮತ್ತು ಇತರೆ ಧರ್ಮಗಳ ನಡುವೆ ಬಿರುಕು ಮೂಡಿಸುತ್ತಿದೆ. ಸಾವರ್ಕರ್ ಅವರು ರೂಪಿಸಿದ ಹಿಂದುತ್ವ ಪರಿಕಲ್ಪನೆಯನ್ನು ಪ್ರಚಾರ ಮಾಡುವ ಆರ್‌ಎಸ್‌ಎಸ್ ಮತ್ತು ವಿಶ್ವ ಹಿಂದೂ ಪರಿಷತ್‌ನ ಪ್ರಭಾವದಿಂದಾಗಿ ನಿರಂತರವಾಗಿ ಹಿಂದೂ



ಧರ್ಮದ ವಿಷಯವನ್ನೇ ಪ್ರಸ್ತಾಪಿಸುವತ್ತ ತಿರುಗಿದೆ. ಇದರಿಂದಾಗಿ ದೇಶಾದ್ಯಂತ ಹಿಂದೂಗಳು ಮತ್ತು ಮುಸ್ಲಿಮರು, ಹಿಂದೂಗಳು ಮತ್ತು ಸಿಖ್ಖರು ಹಾಗೂ ಹಿಂದೂಗಳು ಮತ್ತು ಕ್ರೈಸ್ತರ ನಡುವೆ ಬಿರುಕುಗಳು ಉಂಟಾಗಿವೆ. ಆದರೆ, ಭಾರತವು ಎಲ್ಲರಿಗೂ ಸೇರಿದ್ದಾಗಿದೆ. ವೈವಿಧ್ಯತೆಯಲ್ಲಿ ಏಕತೆಯೇ ನಮ್ಮ ಶಕ್ತಿ ಎಂದು ಹೇಳಿದ್ದಾರೆ. ಇಂದಿನ ಯಾವುದೇ ಧಾರ್ಮಿಕ ಗ್ರಂಥಗಳಲ್ಲಿ ಹಿಂದೂ ಎಂಬ ಪದ ಕಂಡುಬರುವುದಿಲ್ಲ. ಇಂದು ಯಾರೂ ಹಿಂದೂ ಧರ್ಮದ ಬಗ್ಗೆ ಮಾತನಾಡುವುದಿಲ್ಲ. ಜನರು ಸನಾತನ ಧರ್ಮದ ಬಗ್ಗೆ ಮಾತನಾಡುತ್ತಾರೆ. ವೇದಗಳು, ಉಪನಿಷತ್ತುಗಳು ಅಥವಾ ಪುರಾಣಗಳು ಹೀಗೆ ನಮ್ಮ ಯಾವುದೇ ಧರ್ಮಗ್ರಂಥಗಳಲ್ಲಿ ಹಿಂದೂ ಎಂಬ ಪದ ಎಲ್ಲೂ ಕಂಡುಬರುವುದಿಲ್ಲ.

> **ವಿಶ್ವ ಹಿಂದೂ ಪರಿಷತ್ ಮೂಲಕ ಸ್ವೀಕರಿಸಲಾದ ಕಾಣಿಕೆಗಳನ್ನು ಸಂಪೂರ್ಣವಾಗಿ ಬಿಜೆಪಿ ಚುನಾವಣಾ ನಿಧಿಗೆ ಬಳಕೆ ಮಾಡಿದ್ದು, ಈ ಹಣವು ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗಾಗಿ ಬೃಹತ್ ಕಟ್ಟಡಗಳ ನಿರ್ಮಾಣಕ್ಕೆ ಬಳಕೆಯಾಗುತ್ತಿದೆ.**
> – ದಿಗ್ವಿಜಯ ಸಿಂಗ್, ಕಾಂಗ್ರೆಸ್ ನಾಯಕ

ವಿಹೆಚ್‌ಪಿ ಮತ್ತು ಆರ್‌ಎಸ್‌ಎಸ್ ಇದೇ ಸನಾತನ ಧರ್ಮವನ್ನು ವಿರೂಪಗೊಳಿಸುತ್ತಿವೆ ಎಂದು ಅವರು ದೂರಿದ್ದಾರೆ. ಅಯೋಧ್ಯೆಯ ರಾಮಮಂದಿರಕ್ಕಾಗಿ ಸಂಗ್ರಹಿಸಲಾದ ನಿಧಿಯ ವಿಷಯದಲ್ಲಿ ದೇವಾಲಯದ ಆಡಳಿತ ಮಂಡಳಿ ಮತ್ತು ಬಲಪಂಥೀಯ ಸಂಘಟನೆಗಳ ವಿರುದ್ಧ ಗಂಭೀರ ಆರ್ಥಿಕ ಆರೋಪಗಳನ್ನು ಮಾಡಿದರು. ನಿರ್ಮಾಣದ ಸಂದರ್ಭದಲ್ಲಿಯೂ ವಂಚನೆ ಎಸಗಿದರು. ಚಂಪತ್ ರಾಯ್ ಒಬ್ಬ ಆರ್‌ಎಸ್‌ಎಸ್ ಕಾರ್ಯಕರ್ತರಾಗಿದ್ದು, ಧರ್ಮ ಅಥವಾ ಸನಾತನ ಸಂಪ್ರದಾಯಗಳೊಂದಿಗೆ ಅವರಿಗೆ ಯಾವುದೇ ನೈಜ ಸಂಬಂಧವಿಲ್ಲ. ಅವರು ಸಂಪೂರ್ಣವಾಗಿ ಆರ್‌ಎಸ್‌ಎಸ್ ಏಜೆಂಟ್ ಎಂದು ದಿಗ್ವಿಜಯ್ ಹರಿಹಾಯ್ದರು. ದಿಗ್ವಿಜಯ್ ಸಿಂಗ್ ಅವರ ಆರೋಪಗಳಿಗೆ ಪ್ರತಿಕ್ರಿಯಿಸಿದ ಮಧ್ಯಪ್ರದೇಶದ ಸಚಿವ ವಿಶ್ವಾಸ್ ಸಾರಂಗ್, ಹಿಂದೂಗಳು, ಸಂತರು ಮತ್ತು ಸನಾತನ ಧರ್ಮವನ್ನು ಪದೇ ಪದೇ ಅವಮಾನಿಸುತ್ತಿರುವ ಕಾಂಗ್ರೆಸ್ ನಾಯಕನ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

---

## ಮಿನಿ ನ್ಯೂಸ್

### ಪತ್ನಿಯ ವಾದ ಆಲಿಸದೆ ವಿಚ್ಛೇದನ ನೀಡಿದ ಕೌಟುಂಬಿಕ ನ್ಯಾಯಾಲಯ: ಆದೇಶ ರದ್ದು ಮಾಡಿದ ಹೈಕೋರ್ಟ್

**ಬಿಲಾಸ್‌ಪುರ:** ದಂಪತಿಗೆ ವಿಚ್ಛೇದನ ನೀಡುವ ಮೊದಲು ಇಬ್ಬರ ವಾದ ಆಲಿಸಬೇಕು. ಒಬ್ಬರು ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದಾಗ ಇನ್ನೊಬ್ಬರಿಗೆ ಮಾಹಿತಿ ನೀಡಲು ನೋಟಿಸ್ ರವಾನಿಸಬೇಕು. ಇದ್ಯಾವುದನ್ನೂ ಮಾಡದೆ ಕೌಟುಂಬಿಕ ನ್ಯಾಯಾಲಯ ವಿಚ್ಛೇದನ ಮಂಜೂರು ಮಾಡಿತ್ತು. ಈ ಆದೇಶವನ್ನು ಹೈಕೋರ್ಟ್ ರದ್ದು ಮಾಡಿ, ಮತ್ತೆ ವಿಚಾರಣೆ ನಡೆಸಲು ಸೂಚಿಸಿದೆ. ಕೌಟುಂಬಿಕ ನ್ಯಾಯಾಲಯವು ಪತ್ನಿಗೆ ಸರಿಯಾದ ರೀತಿಯಲ್ಲಿ ನೋಟಿಸ್ ನೀಡದೆ ವಿಚ್ಛೇದನ ಪ್ರಕರಣದಲ್ಲಿ ಏಕಪಕ್ಷೀಯ ತೀರ್ಪು ನೀಡಿದೆ. ಇದು ಕಾನೂನುಬದ್ಧ ಪ್ರಕ್ರಿಯೆಯ ಉಲ್ಲಂಘನೆ ಎಂದು ಹೇಳಿರುವ ನ್ಯಾಯಮೂರ್ತಿಗಳಾದ ಪಾರ್ಥ ಪ್ರತೀಮ್ ಸಾಹು ಮತ್ತು ಸಚಿನ್ ಸಿಂಗ್ ರಜಪೂತ್ ಅವರಿದ್ದ ಪೀಠವು, ಸಂಬಂಧಪಟ್ಟ ಪಕ್ಷಗಾರರಿಗೆ ತಮ್ಮ ವಾದವನ್ನು ಮಂಡಿಸಲು ಅವಕಾಶ ನೀಡದೆ ಅವರ ವಿರುದ್ಧ ಆದೇಶ ಹೊರಡಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ.

**ಏನಿದು ಪ್ರಕರಣ?** ಸುರಜ್‌ಪುರದ ವ್ಯಕ್ತಿಯೊಬ್ಬರು 2024ರಲ್ಲಿ ಕೌಟುಂಬಿಕ ನ್ಯಾಯಾಲಯದಲ್ಲಿ ಹಿಂದೂ ವಿವಾಹ ಕಾಯ್ದೆಯಡಿ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಈ ಕುರಿತು ಪ್ರತಿಕ್ರಿಯಿಸುವಂತೆ ಕೋರ್ಟ್‌ನಿಂದ ಮಹಿಳೆಯ ವಿಳಾಸಕ್ಕೆ ಅಂಚೆ ಮೂಲಕ ನೋಟಿಸ್ ರವಾನಿಸಲಾಗಿತ್ತು. ಆದರೆ, ತಪ್ಪಾದ ವಿಳಾಸದ ಕಾರಣ ಅದು ಹಿಂತಿರುಗಿತ್ತು. ನಂತರ, ಪತಿಯು ಪತ್ರಿಕೆಯಲ್ಲಿ ನೋಟಿಸ್ ಪ್ರಕಟಿಸಲು ಕೋರಿದ ಅನುಮತಿಗೆ ನ್ಯಾಯಾಲಯವು ಒಪ್ಪಿಗೆ ನೀಡಿತ್ತು. ಅದರಂತೆ ಫೆಬ್ರುವರಿ 29, 2024 ರಂದು ಸ್ಥಳೀಯ ಪತ್ರಿಕೆಯೊಂದರಲ್ಲಿ ನೋಟಿಸ್ ಪ್ರಕಟಿಸಲಾಗಿತ್ತು. ಇತ್ತ ಪತ್ನಿ, ತಮಗೆ ಗಂಡನಿಂದ ಜೀವನಾಂಶ ಕೊಡಿಸಬೇಕು ಎಂದು ಕೋರಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆಯಲ್ಲಿ ಈಗಾಗಲೇ ವಿಚ್ಛೇದನ ಮಂಜೂರಾದ ಪ್ರತಿಯನ್ನು ಪತಿ ತೋರಿಸಿದ್ದಾರೆ. ಈ ವಿಚ್ಛೇದನ ಪ್ರಕ್ರಿಯೆಯ ಬಗ್ಗೆ ತಮಗೆ ತಿಳಿದಿಲ್ಲ ಎಂದು ಪತ್ನಿ ತಕರಾರು ಸಲ್ಲಿಸಿದ್ದಾರೆ. ಜೊತೆಗೆ ಕೌಟುಂಬಿಕ ನ್ಯಾಯಾಲಯದ ಏಕಪಕ್ಷೀಯ ವಿಚ್ಛೇದನ ತೀರ್ಪನ್ನು ರದ್ದುಗೊಳಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು. ಈ ಮನವಿಯನ್ನು ಕುಟುಂಬ ನ್ಯಾಯಾಲಯವು ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಮಹಿಳೆ, ಹೈಕೋರ್ಟ್ ಮೊರೆ ಹೋಗಿದ್ದರು.

### ಗುಂಡಿನ ಚಕಮಕಿ: ಇಬ್ಬರು ಶಂಕಿತ ಸುಲಿಗೆಕೋರರ ಬಂಧನ

**ನವದೆಹಲಿ:** ಈಶಾನ್ಯ ದೆಹಲಿಯ ಉಸ್ಮಾನ್‌ಪುರ ಪ್ರದೇಶದಲ್ಲಿ ಇಂದು ಬೆಳಗ್ಗೆಯೇ ಪೊಲೀಸರು ಮತ್ತು ಇಬ್ಬರು ಕ್ರಿಮಿನಲ್‌ಗಳ ನಡುವೆ ಗುಂಡಿನ ಚಕಮಕಿ ನಡೆಯಿತು. ಯಮುನಾ ಖಾದರ್ ಪ್ರದೇಶದ ಸಮೀಪ ನಡೆದ ಈ ಘರ್ಷಣೆಯಲ್ಲಿ ಇಬ್ಬರೂ ಕ್ರಿಮಿನಲ್‌ಗಳ ಕಾಲಿಗೆ ಗುಂಡು ಹಾರಿಸಿ ಬಂಧಿಸಲಾಗಿದೆ. ಅವರ ಬಳಿಯಿದ್ದ ಪಿಸ್ತೂಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಗಾಯಗೊಂಡ ಆರೋಪಿಗಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪೊಲೀಸರು ನೀಡಿದ ಮಾಹಿತಿಯ ಪ್ರಕಾರ, ಭಜನ್‌ಪುರ ಪ್ರದೇಶದಲ್ಲಿ ಸುಲಿಗೆ ಪ್ರಯತ್ನದ ವೇಳೆ ಗುಂಡಿನ ದಾಳಿ ನಡೆಸಿದ್ದ ಮೊಹಮ್ಮದ್ ಕೈಫ್ ಮತ್ತು ಮೊಹಮ್ಮದ್ ಜಾಸಿಮ್ ಬಂಧಿತ ಆರೋಪಿಗಳು. ಇವರು ಉಸ್ಮಾನ್‌ಪುರದ ಮೂಲಕ ತಮ್ಮ ಅಡಗುತಾಣಕ್ಕೆ ತೆರಳುತ್ತಿದ್ದಾರೆ ಎಂಬ ಮಾಹಿತಿ ಲಭಿಸಿತ್ತು. ಇದರ ಆಧಾರದ ಮೇಲೆ, ಪೊಲೀಸರ ತಂಡವು ವಿಶೇಷ ಕಾರ್ಯಾಚರಣೆ ನಡೆಸಿತು. ಈ ಪ್ರದೇಶವು ಮರಗಿಡಗಳಿಂದ ಕೂಡಿದ್ದು, ಕಿರಿದಾದ ದಾರಿಗಳನ್ನು ಹೊಂದಿದೆ. ಕ್ರಿಮಿನಲ್‌ಗಳು ಅಡಗಿದ್ದ ತಾಣದಿಂದ ಹೊರಬರುತ್ತಿದ್ದಂತೆಯೇ, ಪೊಲೀಸರು ಬೆನ್ನತ್ತಿದ್ದಾರೆ. ಆದರೆ, ಇಬ್ಬರೂ ತಮ್ಮಲ್ಲಿದ್ದ ಪಿಸ್ತೂಲ್‌ಗಳನ್ನು ಬಳಸಿ ಪೊಲೀಸರ ತಂಡದ ಮೇಲೆ ಗುಂಡಿನ ದಾಳಿ ನಡೆಸಿದರು. ಈ ವೇಳೆ ಸುಮಾರು 26 ಸುತ್ತು ಗುಂಡಿನ ದಾಳಿ ನಡೆಯಿತು. ಅಪರಾಧಿಗಳ ಗುಂಡಿನ ದಾಳಿಯಲ್ಲಿ ಇಬ್ಬರು ಪೊಲೀಸ್ ಸಿಬ್ಬಂದಿಗೆ ಗುಂಡು ತಗುಲಿತಾದರೂ, ಅವರು ಧರಿಸಿದ್ದ ಬುಲೆಟ್‌ಪ್ರೂಫ್ ಜಾಕೆಟ್‌ಗಳಿಂದಾಗಿ ಪ್ರಾಣಾಪಾಯದಿಂದ ಪಾರಾದರು. ನಂತರ ಪೊಲೀಸರು ಪ್ರತಿದಾಳಿ ನಡೆಸಿ ಕೈಫ್ ಮತ್ತು ಜಾಸಿಮ್ ಅವರ ಕಾಲುಗಳಿಗೆ ಗುಂಡು ಹಾರಿಸಿದರು. ಇಬ್ಬರೂ ನೆಲಕ್ಕೆ ಬಿದ್ದಾಗ ಅವರನ್ನು ಬಂಧಿಸಿದ್ದಾರೆ.

### ಕಾರಿನ ಬಾನೆಟ್ ಮೇಲೆ ಬಿದ್ದ ಪತ್ನಿ: 100 ಮೀಟರ್ ದೂರ ಎಳೆದೊಯ್ದ ಪತಿ!

**ಮೀರತ್:** ಗೆಳತಿ ಜೊತೆ ಸಿಕ್ಕಿಬಿದ್ದ ಪತಿಯೊಬ್ಬ ಕಾರಿನ ಬಾನೆಟ್ ಮೇಲೆ ಜೋತು ಬಿದ್ದ ತನ್ನ ಪತ್ನಿಯನ್ನು ನೂರು ಮೀಟರ್ ದೂರದಷ್ಟು ಚಲಾಯಿಸಿಕೊಂಡು ಹೋದ ಆಘಾತಕಾರಿ ಘಟನೆ ಉತ್ತರ ಪ್ರದೇಶದ ಮೀರತ್ ಜಿಲ್ಲೆಯಲ್ಲಿ ನಡೆದಿದೆ. ಇತರ ವಾಹನ ಸವಾರರು ಈ ಘಟನೆಯನ್ನು ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾರೆ. ಅಲ್ಲದೆ, ಕಾರನ್ನು ಅಡ್ಡಗಟ್ಟಿ ನಿಲ್ಲಿಸಿ ಮಹಿಳೆಯ ಪ್ರಾಣ ಕಾಪಾಡಿದ್ದಾರೆ. ಬಳಿಕ ಪತಿ ಮತ್ತು ಆತನ ಗೆಳತಿ ಎಂದು ಹೇಳಲಾದ ಮಹಿಳೆಯನ್ನು ಪೊಲೀಸರ ವಶಕ್ಕೆ ನೀಡಿದ್ದಾರೆ. ಪತ್ನಿಯು ಇಬ್ಬರ ಮೇಲೆ ಹತ್ಯೆ ಯತ್ನ ದೂರು ನೀಡಿದ್ದಾರೆ. **ಘಟನೆಯ ವಿವರ:** ಸ್ಥಳೀಯ ಮೂಲಗಳ ಪ್ರಕಾರ, ತನ್ನ ಪತಿ ಇನ್ನೊಬ್ಬ ಮಹಿಳೆಯೊಂದಿಗೆ ಕಾರಿನಲ್ಲಿ ಓಡಾಡುತ್ತಿರುವುದನ್ನು ಪತ್ನಿ ಕಂಡಿದ್ದಾಳೆ. ಆಕೆ ಕಾರನ್ನು ನಿಲ್ಲಿಸಲು ಗಂಡನಿಗೆ ಸೂಚಿಸಿದ್ದಾಳೆ. ಆದರೆ, ಪತಿರಾಯ ಕೋಪದಲ್ಲಿ ಕಾರನ್ನು ಹಾಗೆಯೇ ಚಲಾಯಿಸಿಕೊಂಡು ಹೋಗಿದ್ದಾನೆ. ಈ ವೇಳೆ ಮಹಿಳೆ ಬಾನೆಟ್ ಮೇಲೆ ಜೋತುಬಿದ್ದಿದ್ದಾಳೆ. ಆದಾಗ್ಯೂ ಪತಿ ಮಾತ್ರ ಕಾರನ್ನು ನೂರು ಮೀಟರ್‌ಗೂ ಹೆಚ್ಚು ದೂರದವರೆಗೆ ಚಲಾಯಿಸಿಕೊಂಡು ಹೋಗಿದ್ದಾನೆ. ಇದನ್ನು ಗಮನಿಸಿದ ಪಕ್ಕದಲ್ಲಿದ್ದ ಮತ್ತೊಂದು ಕಾರು ಚಾಲಕ ನಿಲ್ಲಿಸಲು ಪ್ರಯತ್ನಿಸಿದ್ದಾನೆ. ಮುಂದೆ ಟ್ರಾಫಿಕ್ ಜಾಮ್ ಆಗಿದ್ದರಿಂದ ಪತಿ ಕಾರಿನ ವೇಗವನ್ನು ಕಡಿಮೆ ಮಾಡಿದಾಗ, ಅಲ್ಲಿದ್ದವರು ಕಾರನ್ನು ನಿಲ್ಲಿಸಿ ಮಹಿಳೆಯನ್ನು ಕಾಪಾಡಿದ್ದಾರೆ. ಕಾರಿನ ಬಾನೆಟ್ ಮೇಲೆ ಜೋತು ಬಿದ್ದರೂ ಕಾರು ಚಲಾಯಿಸಿಕೊಂಡು ಹೋದರು. ಪತಿ ಮತ್ತು ಆತನ ಗೆಳತಿ ನನ್ನನ್ನು ಹತ್ಯೆ ಮಾಡಲು ಉದ್ದೇಶಿಸಿದ್ದರು ಎಂದು ಆರೋಪಿಸಿ ಪತ್ನಿ ಲೋಹಿಯಾ ನಗರ ಠಾಣೆಯಲ್ಲಿ ಲಿಖಿತ ದೂರು ದಾಖಲಿಸಿದ್ದಾರೆ.

### ಅ.10ರವರೆಗೆ 20 ರಾಜ್ಯಗಳಲ್ಲಿ ಗುಡುಗು ಸಹಿತ ಮಳೆ ಸಾಧ್ಯತೆ

**ನವದೆಹಲಿ:** ಭಾರತದಲ್ಲಿ ಮುಂಗಾರು ಅಂತ್ಯಗೊಂಡಿದೆ. ಈ ಮಧ್ಯೆ ಇಂದಿನಿಂದ ಅಕ್ಟೋಬರ್ 10 ರ ನಡುವೆ ಮಳೆ, ಗುಡುಗು, ಸಿಡಿಲು ಮತ್ತು ಬಲವಾದ ಗಾಳಿ ಬೀಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಕನಿಷ್ಠ 20 ರಾಜ್ಯಗಳಿಗೆ ಮುನ್ನೆಚ್ಚರಿಕೆ ನೀಡಿದೆ. ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ, ದೆಹಲಿ–ಎನ್‌ಸಿಆರ್ ಮತ್ತು ಉತ್ತರ ಭಾರತದ ಬಹುಭಾಗದಲ್ಲಿ ಹವಾಮಾನದಲ್ಲಿ ಬದಲಾವಣೆ ಆಗಲಿದೆ ಎಂದು ತಿಳಿಸಿದೆ. ಸಿಕ್ಕಿಂ ಮತ್ತು ಅದರ ಪಕ್ಕದ



ಪ್ರದೇಶಗಳಲ್ಲಿ ಚಂಡಮಾರುತದ ಪರಿಚಲನೆ ಉಂಟಾಗಿದೆ. ಈಶಾನ್ಯ ಬಿಹಾರದಿಂದ ವಾಯುವ್ಯ ಬಂಗಾಳ ಕೊಲ್ಲಿಯವರೆಗೆ 'ಟ್ರಫ್' (ಕಡಿಮೆ ಒತ್ತಡದ ವಲಯದ ಪಟ್ಟಿ) ವ್ಯಾಪಿಸಿದೆ. ಮತ್ತೊಂದು ಚಂಡಮಾರುತದ ಪರಿಚಲನೆಯು ಮನ್ನಾರ್ ಕೊಲ್ಲಿ ಮತ್ತು ದಕ್ಷಿಣ ತಮಿಳುನಾಡು ಕರಾವಳಿಯ ಸಮೀಪದಲ್ಲಿದ್ದು, ಅಲ್ಲಿಂದ ಪೂರ್ವ–ಮಧ್ಯ ಅರೇಬಿಯನ್ ಸಮುದ್ರದವರೆಗೆ ಮತ್ತೊಂದು ಟ್ರಫ್ ವಿಸ್ತರಿಸಿದೆ. ಈ ವ್ಯವಸ್ಥೆಗಳು ಒಟ್ಟಾಗಿ ಕೆಲವು ಪ್ರದೇಶಗಳಲ್ಲಿ ಗಂಟೆಗೆ 60 ಕಿಲೋಮೀಟರ್ ವೇಗದ ಗಾಳಿಯನ್ನು ಉಂಟುಮಾಡಬಹುದು. ಬಂಗಾಳ ಕೊಲ್ಲಿಯಲ್ಲಿ ಉಂಟಾದ ಚಂಡಮಾರುತವು ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ, ಒಡಿಶಾ, ಆಂಧ್ರಪ್ರದೇಶ ಮತ್ತು ಉತ್ತರ ಪ್ರದೇಶಗಳಲ್ಲಿ ಪ್ರವಾಹದಂತಹ ಪರಿಸ್ಥಿತಿಯನ್ನು ಸೃಷ್ಟಿಸಿದ ಕೆಲವೇ ವಾರಗಳ ನಂತರ ಈ ಎಚ್ಚರಿಕೆ ನೀಡಲಾಗಿದೆ.

# ಹೃದಯಕ್ಕೆ ಹೇಳಲು ಒಂದು ಕಥೆಯಿದೆ

## ಟಾಲಿವುಡ್ ಪ್ರೊಡಕ್ಷನ್ ಹೌಸ್‌ನ ಸಿನಿಮಾದಲ್ಲಿ ಧ್ರುವ ಸರ್ಜಾ: ಈ ದಿನಾಂಕಕ್ಕೆ ಘೋಷಣೆ

"ಹೃದಯವೊಂದು ಕಥೆಯನ್ನು ಹೇಳಲು ಬಯಸಿದೆ, ಅದು ಹೆಚ್ಚು ಕಾಲ ಮೌನವಾಗಿರುವುದಿಲ್ಲ... ಎರಡು ಹೆಸರುಗಳು, ಭಾವಪೂರ್ಣವಾದ ಒಂದು ಒಗ್ಗೂಡುವಿಕೆ; ಆ ಕಥೆಗೆ ಜೀವ ತುಂಬಲು ಒಂದಾಗುತ್ತಿದ್ದಾರೆ!" ಎಂದು ಬರೆಯುವ ಮೂಲಕ ಚಿತ್ರತಂಡ ಸಿನಿಪ್ರಿಯರ ನಿರೀಕ್ಷೆಗಳನ್ನು ದುಪ್ಪಟ್ಟು ಮಾಡಿದೆ. ಈ ಬೆನ್ನಲ್ಲೇ ಇದುವರೆಗೂ ಮಾಸ್ ಮತ್ತು ಹೈ-ವೋಲ್ಟೇಜ್ ಆಕ್ಷನ್ ಪಾತ್ರಗಳಲ್ಲೇ ಅಬ್ಬರಿಸುತ್ತಿದ್ದ ಧ್ರುವಸರ್ಜಾ, ಈ ಬಾರಿ ಸಂಪೂರ್ಣ ಭಿನ್ನವಾದ ಎಮೋಷನಲ್ ಅಥವಾ ಫೀಲ್‌ಗುಡ್ ಕಥಾಹಂದರದ ಚಿತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆಯೇ ಎಂಬ ಚರ್ಚೆ ಶುರುವಾಗಿದೆ.

ಸ್ಯಾಂಡಲ್‌ವುಡ್‌ನ ಆಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಅವರ ಜನ್ಮದಿನದ ನಿಮಿತ್ತ ಅಭಿಮಾನಿಗಳಿಗೆ ಭರ್ಜರಿ ಉಡುಗೊರೆ ಸಿಗುವುದು ಪಕ್ಕಾ ಆಗಿದೆ. ಅಕ್ಟೋಬರ್ 6 ಅಂದರೆ ಇಂದು ಖ್ಯಾತ ನಟನ ಹುಟ್ಟುಹಬ್ಬವಿದ್ದು, ಇದೇ ವಿಶೇಷ ದಿನದಂದು ಅವರ ನೂತನ ಪ್ಯಾನ್ – ಇಂಡಿಯಾ ಪ್ರಾಜೆಕ್ಟ್ ಅಧಿಕೃತವಾಗಿ ಘೋಷಣೆಯಾಗಲಿದೆ.

ಭಾರತೀಯ ಚಿತ್ರರಂಗದ ಮುಂಚೂಣಿ ನಿರ್ಮಾಣ ಸಂಸ್ಥೆಗಳಲ್ಲಿ ಒಂದಾದ 'ಪೀಪಲ್ ಮೀಡಿಯಾ ಫ್ಯಾಕ್ಟರಿ' ಈ ಹೊಸ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದು, ಸೋಷಿಯಲ್ ಮೀಡಿಯಾದಲ್ಲಿ ಕುತೂಹಲ ಮೂಡಿಸುವಂತಹ ವಿಶೇಷ ಪೋಸ್ಟರ್ ಹಾಗೂ ಸಾಲುಗಳನ್ನು ಹಂಚಿಕೊಂಡಿದೆ.

ಖ್ಯಾತ ನಿರ್ಮಾಪಕ ಟಿ.ಜಿ.ವಿಶ್ವಪ್ರಸಾದ್ ಅವರ ನೇತೃತ್ವದ ಪೀಪಲ್ ಮೀಡಿಯಾ ಫ್ಯಾಕ್ಟರಿಯು ದಕ್ಷಿಣ ಭಾರತ ಚಿತ್ರರಂಗದಲ್ಲಿ ಅತ್ಯಂತ ವೇಗವಾಗಿ ಬೆಳೆದ ಪ್ರಮುಖ ಬ್ಯಾನರ್‌ಗಳಲ್ಲಿ ಒಂದಾಗಿದೆ. ಪ್ಯಾನ್ – ಇಂಡಿಯಾ ಮಟ್ಟದಲ್ಲಿ ಸದ್ದು ಮಾಡಿದ್ದ ಕಾರ್ತಿಕೇಯ 2, ಧಮಾಕಾ, ಬ್ರೋ ಸೇರಿದಂತೆ ಹಲವು ಬ್ಲಾಕ್‌ಬಸ್ಟರ್ ಚಿತ್ರಗಳನ್ನು ನೀಡಿರುವ ಈ ಸಂಸ್ಥೆ, ಈಗಾಗಲೇ ಕನ್ನಡದಲ್ಲೂ ಬಿಗ್ ಬಜೆಟ್ ಸಿನಿಮಾಗಳನ್ನು ನಿರ್ಮಿಸುತ್ತಾ ಸೈ ಎನಿಸಿಕೊಂಡಿದೆ. ಗುಣಮಟ್ಟದ ಮೇಕಿಂಗ್ ಹಾಗೂ ಭರ್ಜರಿ ತಾಂತ್ರಿಕ ಮೌಲ್ಯಗಳಿಗೆ ಹೆಸರಾಗಿರುವ ಈ ಸಂಸ್ಥೆಯು, ಧ್ರುವ ಸರ್ಜಾ ಅವರ ಜೊತೆ ಕೈಜೋಡಿಸಿರುವುದು ಸಿನಿಪ್ರಿಯರ ನಿರೀಕ್ಷೆ, ಕುತೂಹಲವನ್ನು ಹೆಚ್ಚಿಸಿದೆ.

ಈ ಚಿತ್ರದ ನಿರ್ದೇಶಕರು ಯಾರು, ತಾರಾಗಣದಲ್ಲಿ ಯಾರೆಲ್ಲಾ ಇರಲಿದ್ದಾರೆ ಎಂಬ ಸಂಪೂರ್ಣ ವಿವರಗಳನ್ನು ಅಕ್ಟೋಬರ್ 6ರಂದು ಧ್ರುವ ಸರ್ಜಾ ಅವರ ಹುಟ್ಟುಹಬ್ಬದ ಸಂಭ್ರಮದಲ್ಲೇ ಅಧಿಕೃತವಾಗಿ ಚಿತ್ರತಂಡ ಬಿಡುಗಡೆ ಮಾಡಲಿದೆ.



ಧ್ರುವ ಸರ್ಜಾ ಕೊನೆಯದಾಗಿ ಜೋಗಿ ಪ್ರೇಮ್ ನಿರ್ದೇಶನದ ಬಹುತಾರಾಗಣದ ಸಿನಿಮಾ 'ಕೆಡಿ: ದಿ ಡೆವಿಲ್'ನಲ್ಲಿ ಕಾಣಿಸಿಕೊಂಡರು. ಏಪ್ರಿಲ್ 30ರಂದು ಅದ್ಧೂರಿಯಾಗಿ ಚಿತ್ರಮಂದಿರ ಪ್ರವೇಶಿಸಿದ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ನಿರೀಕ್ಷೆಗಳನ್ನು ತಲುಪಲಿಲ್ಲ. 70ರ ದಶಕದ ಕಾಲಘಟ್ಟದ ಕಥೆಯಲ್ಲಿ ಬಹುಭಾಷಾ ಸೂಪರ್ ಸ್ಟಾರ್‌ಗಳಾದ ಸಂಜಯ್ ದತ್, ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್, ರೀಷ್ಮಾ ನಾಣಯ್ಯ, ಜಿಶು ಸೇನ್‌ಗುಪ್ತಾ, ನೋರಾ ಫತೇಹಿ ಕಾಣಿಸಿಕೊಂಡಿದ್ದರು. ಅಭಿನಯ ಚಕ್ರವರ್ತಿ ಕಿಚ್ಚ ಸುದೀಪ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡರು. ದಕ್ಷಿಣ ಚಿತ್ರರಂಗದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಕೆವಿಎನ್ ನಿರ್ಮಾಣದ ಈ ಸಿನಿಮಾಗೆ ಅರ್ಜುನ್ ಜನ್ಯ ಸಂಗೀತ, ವಿಲಿಯಂ ಡೇವಿಡ್ ಕ್ಯಾಮರಾ ವರ್ಕ್ ಇತ್ತು. ನಟನ ಮುಂದಿನ ಸಿನಿಮಾ ಬಗ್ಗೆ ತಿಳಿಯಲು ಫ್ಯಾನ್ಸ್ ತುದಿಗಾಲಲ್ಲಿದ್ದು, ನಾಳೆ ಉತ್ತರ ಸಿಗಲಿದೆ.

# ಅಮರಾವತಿ

## ಮಳೆಯಲ್ಲಿ ಸತತ 40 ದಿನಗಳ ಚಿತ್ರೀಕರಣ

ಕೆಮಿಸ್ಟ್ರಿ ಆಫ್ ಕರಿಯಪ್ಪ, ಕ್ರಿಟಿಕಲ್ ಕೀರ್ತನೆಗಳು ಹಾಗೂ ಲವ್ ಯು ಮುದ್ದು ಸಿನಿಮಾಗಳ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ನಿರ್ದೇಶಕ ಕುಮಾರ್ ಅವರೀಗ ಮತ್ತೊಂದು ವಿಭಿನ್ನ ಕಥೆಯೊಂದಿಗೆ ಬೆಳ್ಳಿತೆರೆಗೆ ಬರಲು ಸಜ್ಜಾಗಿದ್ದಾರೆ.

ಸದಾ ಕೌಟುಂಬಿಕ ಪ್ರೇಕ್ಷಕರನ್ನು ಸೆಳೆಯುವಂತಹ ಕಾಮಿಡಿ, ಕಂಟೆಂಟ್ ಹಾಗೂ ಪ್ರೇಮಕಥೆಗಳನ್ನು ಹಿರಿತೆರೆ ಮೇಲೆ ಕಟ್ಟಿಕೊಡುತ್ತಿದ್ದ ಕುಮಾರ್, ಈ ಬಾರಿ ಪರಿಸರ ಕಾಳಜಿಯ ಕಥಾವಸ್ತುವನ್ನು ಮನರಂಜನಾತ್ಮಕ ಚೌಕಟ್ಟಿನಲ್ಲಿ ತರುತ್ತಿದ್ದು, ಚಿತ್ರಕ್ಕೆ 'ಅಮರಾವತಿ' ಎಂಬ ಶೀರ್ಷಿಕೆ ಇಡಲಾಗಿದೆ. 'ಲೋ ನವೀನ' ಯಶಸ್ಸಿನ ಬಳಿಕ ಗಾಯಕ, ನಟ ನವೀನ್ ಸಜ್ಜು ಈ ಚಿತ್ರದಲ್ಲಿ ನಾಯಕನಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಇದೊಂದು ವಿಶಿಷ್ಟ ಕಾಮಿಡಿ ಥ್ರಿಲ್ಲರ್ ಶೈಲಿಯ ಸಿನಿಮಾವಾಗಿದ್ದು, ಮಡಿಕೇರಿಯಲ್ಲಿ ಸಂಭವಿಸಿದ ಭೂಕುಸಿತದ ಹಿನ್ನೆಲೆಯಲ್ಲಿ ಸಾಗುತ್ತದೆ. ಕೇವಲ ಒಂದೇ ದಿನದಲ್ಲಿ ನಡೆಯುವ ಕಾಲ್ಪನಿಕ ಘಟನೆಗಳನ್ನು ಆಧರಿಸಿದೆ. ಚಿತ್ರತಂಡವು ಮಡಿಕೇರಿ ಮತ್ತು ಸುತ್ತಮುತ್ತಲ ಸುಂದರ ಪ್ರಕೃತಿಯ ನಡುವೆ, ನೈಜ ಮಳೆಯಲ್ಲಿ ಸತತ 40 ದಿನಗಳ ಕಾಲ ಚಿತ್ರೀಕರಣ ನಡೆಸಿದೆ. ಮಲಯಾಳಂ ಸಿನಿಮಾಗಳ ಮಾದರಿಯಲ್ಲಿ ನೈಜ ಹಾಗೂ ಆಪ್ತವಾದ ದೃಶ್ಯಾನುಭವವನ್ನು ಈ ಚಿತ್ರ ಪ್ರೇಕ್ಷಕರಿಗೆ ನೀಡಲಿದೆ ಎಂಬುದು ಚಿತ್ರತಂಡದ ವಿಶ್ವಾಸ.

ಅನಧಿಕೃತವಾಗಿ ನಡೆಯುವ ಮರಗಳ ಮಾರಣಹೋಮ ಹಾಗೂ ಅದರಿಂದ ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮಗಳ ಸುತ್ತ ಚಿತ್ರದ ಕಥೆ ಸಾಗಲಿದೆ. ಚಿತ್ರದಲ್ಲಿ ನವೀನ್ ಸಜ್ಜು ಮುತ್ತು ಎಂಬ ಪರಿಸರಪ್ರೇಮಿ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಪರಿಸರ ನಾಶದಂತಹ ಸೂಕ್ಷ್ಮ ಹಾಗೂ ಗಂಭೀರ ವಿಷಯವನ್ನು ಪ್ರೇಕ್ಷಕರಿಗೆ ಬೋಧನೆ ಮಾಡದೇ, ಹಾಸ್ಯದ ಲೇಪನದೊಂದಿಗೆ ರಂಜನೀಯವಾಗಿ ಪ್ರಸ್ತುತಪಡಿಸುತ್ತಿರುವುದೇ ಈ ಚಿತ್ರದ ಹೈಲೈಟ್.

ನಿರ್ದೇಶನದ ಜೊತೆಗೆ ಕುಮಾರ್ ಈ ಚಿತ್ರದ ಮೂಲಕ ನಿರ್ಮಾಪಕರಾಗಿಯೂ ಹೊಸ ಹೆಜ್ಜೆ ಇಟ್ಟಿದ್ದಾರೆ. ಚಿತ್ರದ ಚಿತ್ರೀಕರಣ, ಪೋಸ್ಟ್-ಪ್ರೊಡಕ್ಷನ್ ಮತ್ತು ಸೆನ್ಸಾರ್ ಪ್ರಕ್ರಿಯೆಗಳು ಈಗಾಗಲೇ ಮುಕ್ತಾಯಗೊಂಡಿದ್ದು, ಮುಂದಿನ ತಿಂಗಳು ನವೆಂಬರ್‌ನಲ್ಲಿ ಚಿತ್ರವನ್ನು ತೆರೆಗೆ ತರಲು ಸಿದ್ಧತೆಗಳು ನಡೆದಿವೆ. ಇತ್ತೀಚೆಗಷ್ಟೇ ಚಿತ್ರದ ಆಕರ್ಷಕ ಫಸ್ಟ್ ಲುಕ್ ಬಿಡುಗಡೆ ಮಾಡುವ ಮೂಲಕ ಅಧಿಕೃತ ಪ್ರಚಾರ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಚಿತ್ರದಲ್ಲಿ ನವೀನ್ ಸಜ್ಜು ಅವರೊಂದಿಗೆ ಗಿರೀಶ್ ಶಿವಣ್ಣ, ಯಶ್ ಶೆಟ್ಟಿ, ಸಮೀಕ್ಷಾ ರಾಮ್, ಗೌರಿ ಶೇವಾ, ಸುಮಂತ್ ಹಾಗೂ ವಿಜೇತ್ ಪ್ರಮುಖ ತಾರಾಗಣದಲ್ಲಿದ್ದಾರೆ. ನವೀನ್ ಚಲ್ಲ ಅವರ ಛಾಯಾಗ್ರಹಣವಿದ್ದು, ನವೀನ್ ಸಜ್ಜು ಮತ್ತು ಆಕಾಶ್ ಪರ್ವ ಜೋಡಿ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿದೆ. ಕಳೆದೆರಡು ವಾರಗಳಲ್ಲಿ ಕನ್ನಡ ಚಿತ್ರರಂಗದಲ್ಲಿ ಕಂಟೆಂಟ್ ಸಿನಿಮಾಗಳು ಸಾಕಷ್ಟು ಸದ್ದು ಮಾಡುತ್ತಿವೆ. ಸ್ಮಾಲ್ ಬಜೆಟ್ ಚಿತ್ರಗಲೂ ತನ್ನ ಉತ್ತಮ ಕಥೆಯೊಂದಿಗೆ ಪ್ರೇಕ್ಷಕರನ್ನು ಚಿತ್ರಮಂದಿರಗಳಿಗೆ ಸೆಳೆಯುತ್ತಿದೆ. ಅದರಂತೆ ಈ ಸಿನಿಮಾ ಎಷ್ಟರ ಮಟ್ಟಿಗೆ ಸದ್ದು ಮಾಡುತ್ತದೆ ಅನ್ನೋದನ್ನು ಕಾದು ನೋಡಬೇಕಿದೆ.




**ಮಡಿಕೇರಿಯಲ್ಲಿ ಸಂಭವಿಸಿದ ಭೂಕುಸಿತದ ಹಿನ್ನೆಲೆಯಲ್ಲಿ ಸಾಗುವ ಸಿನಿಮಾ**

# ಬಿಡುಗಡೆ ಹೊತ್ತಲ್ಲಿ ಟೈಟಲ್ ಬದಲಿಸಿಕೊಂಡ ಕೋಮಲ್ ಅಭಿನಯದ ರೋಲೆಕ್ಸ್

ರೋಲೆಕ್ಸ್ ಟೈಟಲ್ ಕೇಳುತ್ತಿದ್ದಂತೆ ಸೌತ್ ಸೂಪರ್ ಸ್ಟಾರ್ ಕಮಲ್ ಹಾಸನ್ ಅವರ 'ವಿಕ್ರಮ್' ಸಿನಿಮಾ ನೆನಪಾಗೋದು ಸಹಜ. ದಕ್ಷಿಣ ಚಿತ್ರರಂಗದ ಖ್ಯಾತ ನಟ ಸೂರ್ಯ 'ರೋಲೆಕ್ಸ್' ಎಂಬ ಪವರ್ ಫುಲ್ ರೋಲ್‌ನಲ್ಲಿ ಕಾಣಿಸಿಕೊಂಡಿದ್ದರು. ಈ ಪಾತ್ರ ಸಿಕ್ಕಾಪಟ್ಟೆ ಫೇಮಸ್ ಕೂಡಾ ಹೌದು. ಇದೇ ಹೆಸರಿನಲ್ಲಿ, ಚಂದನವನದ ಜನಪ್ರಿಯ ತಾರೆ ಕೋಮಲ್ ಕುಮಾರ್ ಸಿನಿಮಾ ಮಾಡಿದ್ದು, ನಿಮಗೆ ತಿಳಿದೇ ಇದೆ. ಇದೀಗ ಈ ಚಿತ್ರದ ಶೀರ್ಷಿಕೆ ಬದಲಾಗಿದೆ.

ರೋಲೆಕ್ಸ್ ಅಂದಾಕ್ಷಣ ಪ್ರತಿಷ್ಠಿತ ಗಡಿಯಾರ/ವಾಚ್ ಕಂಪನಿಯ ಹೆಸರೂ ನೆನಪಾಗುತ್ತದೆ. ಈ ಹೆಸರಿನ ಮೇಲೆ ನಟ ಕೋಮಲ್ ಕುಮಾರ್ ನಾಯಕರಾಗಿ, ನಟಿ ಸೋನಾಲ್ ಮೊಂತೆರೊ ನಾಯಕಿಯಾಗಿ ಹಾಗೂ ಜನಪ್ರಿಯ ನಟ ವಿನೋದ್ ಪ್ರಭಾಕರ್ ವಿಶೇಷ ಪಾತ್ರದಲ್ಲಿ ಅಭಿನಯಿಸಿರುವ ಸಿನಿಮಾ ಈಗಾಗಲೇ ತನ್ನ ಶೂಟಿಂಗ್ ಪೂರ್ಣಗೊಳಿಸಿಕೊಂಡಿತ್ತು. ಚಿತ್ರೀಕರಣ ಮುಗಿಸಿ ಬಿಡುಗಡೆಗೆ ಎದುರು ನೋಡುತ್ತಿರುವಾಗ ರೋಲೆಕ್ಸ್ ಚಿತ್ರದಲ್ಲಿ ಮಹತ್ವದ ಬದಲಾವಣೆ ಆಗಿದೆ.

**ಹೊಸ ಶೀರ್ಷಿಕೆಯೇನು?** ರೋಲೆಕ್ಸ್ ಅಂತಾ ದೊಡ್ಡ ಮಟ್ಟದಲ್ಲಿ ಪ್ರಚಾರ ಮಾಡಿದ ಈ ಚಿತ್ರದ ಶೀರ್ಷಿಕೆಯಲ್ಲೀಗ ಬದಲಾವಣೆ ಮಾಡಲಾಗಿದೆ. ಅಂತಿಮವಾಗಿ 'ರಿಲಾಕ್ಸ್' ಎಂದು ಹೆಸರಿಡಲಾಗಿದೆ.



**ಬದಲಾವಣೆಗೆ ಕಾರಣವೇನು?** ನಿರ್ದೇಶಕ ಶ್ರೀನಿವಾಸ ಮಂಡ್ಯ ಹೇಳುವಂತೆ ಹೆಸರಾಂತ ಸಂಸ್ಥೆಯೊಂದು 'ರೋಲೆಕ್ಸ್' ಶೀರ್ಷಿಕೆಯನ್ನಾಗಲಿ ಅಥವಾ ಅದಕ್ಕೆ ಸಂಬಂಧಿಸಿದ ಸೌಂಡ್ ಆಗಲಿ ಬಳಸಿಕೊಳ್ಳಬಾರದೆಂದು ನೋಟಿಸ್ ನೀಡಿದೆ. ಆದರೆ ನೋಟಿಸ್ ನೀಡಿರುವ ಸಂಸ್ಥೆಗೆ ಸಂಬಂಧಿಸಿದ ಹಾಗೆ ನಮ್ಮ ಚಿತ್ರದಲ್ಲಿ ಯಾವುದನ್ನೂ ಬಳಸಿಕೊಂಡಿಲ್ಲ. ಈಗ ಚಿತ್ರ ಬಿಡುಗಡೆಯ ಹಂತದಲ್ಲಿದ್ದು, ಈ ಸಮಯದಲ್ಲಿ ಶೀರ್ಷಿಕೆಗಾಗಿ ಹೋರಾಡಲು ಸಮಯವಿಲ್ಲ. ಚಿತ್ರದ ಕಂಟೆಂಟ್ ಬಹಳ ಚೆನ್ನಾಗಿದೆ. ಕಂಟೆಂಟ್ ಎಲ್ಲರಿಗೂ ಮೆಚ್ಚುಗೆಯಾಗುವ ಭರವಸೆ ಇದೆ. ಹಾಗಾಗಿ, ಚಿತ್ರದ ಶೀರ್ಷಿಕೆಗಿಂತ ಕಂಟೆಂಟ್ ಮುಖ್ಯ ಎಂಬುದು ಚಿತ್ರತಂಡದ ತೀರ್ಮಾನವಾಗಿದ್ದು, 'ರೋಲೆಕ್ಸ್' ಬದಲಿಗೆ 'ರಿಲಾಕ್ಸ್' ಎಂದು ಬದಲಾವಣೆ ಮಾಡಲಾಗಿದೆ. ನಮ್ಮ ಚಿತ್ರ 'ರಿಲಾಕ್ಸ್' ಎಂಬ ಹೆಸರಿನಿಂದಲೇ ಬಿಡುಗಡೆಯಾಗಲಿದೆ ಎಂದು ತಿಳಿಸಿದರು. ನಿರ್ಮಾಪಕ ಅಂಬಟಿ ಮಧು ಮೋಹನ್ ಮಾತನಾಡಿ, ಆರಂಭದಿಂದಲೂ ಸಾಕಷ್ಟು ಪ್ರಚಾರ ಪಡೆದಿದ್ದ ಚಿತ್ರದ ಟೀಸರ್‌ಗೆ ನಿರೀಕ್ಷೆಗೂ ಮೀರಿ ಪ್ರಶಂಸೆ ವ್ಯಕ್ತವಾಗಿತ್ತು. ಈಗ ಟೈಟಲ್ ಬದಲಾವಣೆ ಮಾಡುತ್ತಿರುವುದು ಬೇಸರ ಮೂಡಿಸಿದೆ ಎಂದಿದ್ದಾರೆ.

ಕೋಮಲ್ ಕುಮಾರ್ ಈ ಹಿಂದಿನ ಚಿತ್ರಗಳಿಗಿಂತ ವಿಭಿನ್ನ ಗೆಟಪ್‌ನಲ್ಲಿ ಪ್ರೇಕ್ಷಕರಿಗೆ ದರ್ಶನ ಕೊಡಲು ಸಜ್ಜಾಗಿದ್ದು, ಅಭಿಮಾನಿ ಬಳಗದಲ್ಲಿ ಸಾಕಷ್ಟು ಕುತೂಹಲವಿದೆ. ಅಚ್ಯುತ್ ಕುಮಾರ್, ನವೀನ್ ಪಡೀಲ್, ಅರುಣ ಬಾಲರಾಜ್ ಪ್ರಮುಖ ಪಾತ್ರಗಳಲ್ಲಿದ್ದಾರೆ.

ಈ ಹಿಂದೆ ಬಿಲ್ ಗೇಟ್ಸ್ ಚಿತ್ರವನ್ನು ನಿರ್ದೇಶಿಸಿದ್ದ ಶ್ರೀನಿವಾಸ್ ಮಂಡ್ಯ ಆಕ್ಷನ್ ಕಟ್ ಹೇಳಿರುವ 'ರಿಲಾಕ್ಸ್' ಕಾಮಿಡಿಯೊಂದಿಗೆ ಕೌಟುಂಬಿಕ ಕಥಾಹಂದರವನ್ನು ಒಳಗೊಂಡಿದೆ. ಮಧು ಫಿಲಂ ಸರ್ಕ್ಯೂಟ್ಸ್ ಸಂಸ್ಥೆ ಲಾಂಛನದಡಿಯಲ್ಲಿ ಅಂಬಟಿ ಮಧು ಮೋಹನ್ ನಿರ್ಮಾಣ ಮಾಡಿದ್ದಾರೆ. ನಾಲ್ಕು ಹಾಡುಗಳಿರುವ ಈ ಚಿತ್ರಕ್ಕೆ ಜೆಸ್ಸಿ ಗಿಫ್ಟ್ ಸಂಗೀತ ಸಂಯೋಜಿಸಿದ್ದಾರೆ. ನಂದು (ಕೆ.ಜಿ.ಎಫ್) ಹಿನ್ನೆಲೆ ಸಂಗೀತ ನೀಡಿದ್ದಾರೆ. ರಾಕೇಶ್ ಸಿ ತಿಲಕ್ ಕ್ಯಾಮರಾ ವರ್ಕ್, ಅರವಿಂದ್ ರಾಜ್ ಅವರ ಸಂಕಲನವಿರುವ ಈ ಚಿತ್ರಕ್ಕೆ ರಾಜೇಶ್ ವರ್ಮಾ ಕ್ರಿಯೇಟಿವ್ ಹೆಡ್ ಆಗಿ ಹಾಗೂ ಮುರಳಿಕೃಷ್ಣ ಅವರು ಕಾರ್ಯಕಾರಿ ನಿರ್ಮಾಪಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಸದ್ಯದಲ್ಲೇ ರಿಲೀಸ್ ಡೇಟ್ ಅನೌನ್ಸ್ ಮಾಡಲಿದೆ ಚಿತ್ರತಂಡ.

## ಮಾಜಿ ಕ್ರಿಕೆಟರ್ ವೀರೇಂದ್ರ ಸೆಹ್ವಾಗ್ ಪುತ್ರನಿಗೆ ಬಿಗ್ ಜಾಕ್‌ಪಾಟ್

# ದೆಹಲಿ ತಂಡದ ನಾಯಕನಾಗಿ ನೇಮಕ!

ವೀರೇಂದ್ರ ಸೆಹ್ವಾಗ್ ಅವರ 18 ವರ್ಷದ ಪುತ್ರ ಆರ್ಯವೀರ್ ಸೆಹ್ವಾಗ್ ಅವರಿಗೆ ಮೊದಲ ಬಾರಿಗೆ ದೊಡ್ಡ ಜವಾಬ್ದಾರಿ ನೀಡಲಾಗಿದ್ದು ಅವರನ್ನು ನಾಯಕರನ್ನಾಗಿ ನೇಮಿಸಲಾಗಿದೆ. ಹೌದು, ಅಕ್ಟೋಬರ್ 8 ರಿಂದ ವಿಶಾಖಪಟ್ಟಣದಲ್ಲಿ ಪ್ರಾರಂಭವಾಗಲಿರುವ 19 ವರ್ಷದೊಳಗಿನವರ "ವಿನೂ ಮಂಕಡ್ ಟ್ರೋಫಿ"ಗಾಗಿ ದೆಹಲಿ ಕ್ರಿಕೆಟ್ ಮಂಡಳಿ 16 ಸದಸ್ಯರ ತಂಡವನ್ನು ಪ್ರಕಟಿಸಿದ್ದು ಇದಕ್ಕೆ ಆರ್ಯವೀರ್ ಅವರನ್ನು ನಾಯಕನಾಗಿ ನೇಮಕ ಮಾಡಲಾಗಿದೆ.

ಆರ್ಯವೀರ್ ಇತ್ತೀಚೆಗೆ ಭಾರತದ 19 ವರ್ಷದೊಳಗಿನವರ ತಂಡಕ್ಕಾಗಿ ತಮ್ಮ ಮೊದಲ ಪಂದ್ಯವನ್ನು ಆಡಿದ್ದರು. ಸೆಪ್ಟೆಂಬರ್‌ನಲ್ಲಿ ರಾಜ್‌ಕೋಟ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿಯಲ್ಲಿ ಕಣಕ್ಕಿಳಿದಿದ್ದ ಅವರು ಮೊದಲ ಪಂದ್ಯದಲ್ಲಿ 26 ಎಸೆತಗಳಲ್ಲಿ 28 ರನ್ ಗಳಿಸಿದ್ದರು ಮತ್ತು ಈ ಮಳೆ ಪೀಡಿತ ಪಂದ್ಯದಲ್ಲಿ ಭಾರತ ಆಸ್ಟ್ರೇಲಿಯಾವನ್ನು 7 ರನ್‌ಗಳಿಂದ ಮಣಿಸಿತ್ತು.



ಎರಡನೇ ಏಕದಿನ ಪಂದ್ಯದಲ್ಲಿ ಸರಣಿಯ ಅತ್ಯುತ್ತಮ ಪ್ರದರ್ಶನ ನೀಡಿದರು. ಆರ್ಯವೀರ್ ಈ ಪಂದ್ಯದಲ್ಲಿ 47 ರನ್ ಗಳಿಸಿದರು ಆದರೆ ದುರದೃಷ್ಟವಶಾತ್ ಅವರು ರನೌಟ್ ಆಗುವ ಮೂಲಕ ಕೇವಲ ಮೂರು ರನ್‌ಗಳಿಂದ ಅರ್ಧಶತಕವನ್ನು ತಪ್ಪಿಸಿಕೊಂಡರು. ಮೂರನೇ ಪಂದ್ಯದಲ್ಲೂ ಅವರು 34 ರನ್‌ಗಳಿಸಿ ಔಟಾದರು. ಹೀಗಾಗಿ, ಅವರು ಮೂರು ಪಂದ್ಯಗಳ ಸರಣಿಯಲ್ಲಿ ಒಟ್ಟು 109 ರನ್ ಗಳಿಸಿದರು.

ಆದಾಗ್ಯೂ ಆರ್ಯವೀರ್ ಅವರಿಗೆ ಭಾರತ U-19 ತಂಡಕ್ಕೆ ಆಯ್ಕೆಯಾಗುವುದು ದೊಡ್ಡ ವಿಷಯವಾಗಿತ್ತು, ಏಕೆಂದರೆ ಅವರಿಗೆ ಸೀನಿಯರ್ ಮಟ್ಟದಲ್ಲಿ ಆಡಿದ ಅನುಭವ ಇದಕ್ಕೂ ಮೊದಲು ಇರಲಿಲ್ಲ. ಅವರು 2026ರ ದೆಹಲಿ ಪ್ರೀಮಿಯರ್ ಲೀಗ್‌ನಲ್ಲಿ ವೆಸ್ಟ್ ಡೆಲ್ಲಿ ಲಯನ್ಸ್ ಪರ ಕೇವಲ ಎರಡು ಪಂದ್ಯಗಳನ್ನು ಆಡಿ, 24 ರನ್ ಗಳಿಸಿದರು. ಆದಾಗ್ಯೂ, ಅವರು ಮೊದಲು ಜೂನಿಯರ್ ಮಟ್ಟದಲ್ಲಿ 2024ರಲ್ಲಿ ಮೇಘಾಲಯ ವಿರುದ್ಧ ದೆಹಲಿ ಪರ 297 ರನ್‌ಗಳ ಅದ್ಭುತ ಇನ್ನಿಂಗ್ಸ್ ಆಡಿ ಗಮನ ಸೆಳೆದಿದ್ದರು. ಆದಾಗ್ಯೂ, ಆಸೀಸ್ ವಿರುದ್ಧದ ಪಂದ್ಯದ ಬಳಿಕ ದೊಡ್ಡ ಇನ್ನಿಂಗ್ಸ್‌ಗಳಾಗಿ ಪರಿವರ್ತಿಸುವುದು ಹೇಗೆ ಎಂಬುದನ್ನು ತಾವು ಕಲಿಯಬೇಕಾಗಿದೆ ಎಂದು ತಿಳಿಸಿದ್ದರು. ಈ ಸರಣಿಯ ಮೂಲಕ ಕ್ರೀಸ್‌ನಲ್ಲಿ ನಿಂತು ದೀರ್ಘಾವಧಿಯವರೆಗೆ ಆಡುವ ತಂತ್ರವನ್ನು ಕಲಿತಿದ್ದೇನೆ ಎಂದು ಹೇಳಿದರು.

ಇದೀಗ ಅವರಿಗೆ ದೆಹಲಿ ತಂಡದ ನಾಯಕತ್ವ ನೀಡಲಾಗಿರುವುದರಿಂದ, ತಮ್ಮ ಆಟವನ್ನು ಸುಧಾರಿಸಿಕೊಳ್ಳಲು ಉತ್ತಮ ಅವಕಾಶ ಸಿಕ್ಕಿದೆ. ಉಳಿದಂತೆ ಅರ್ನಬ್ ಬುಗ್ಗಾ ಅವರನ್ನು 16 ಸದಸ್ಯರ ದೆಹಲಿ ತಂಡದ ಉಪನಾಯಕರನ್ನಾಗಿ ಮಾಡಲಾಗಿದೆ. ತಂಡವು ಅಕ್ಟೋಬರ್ 8 ರಿಂದ ವಿಶಾಖಪಟ್ಟಣದಲ್ಲಿ ಅಭಿಯಾನವನ್ನು ಪ್ರಾರಂಭಿಸಲಿದೆ. ನಾಯಕ ಪಾತ್ರದಲ್ಲಿ ಆರ್ಯವೀರ್ ಹೇಗೆ ಪ್ರದರ್ಶನ ನೀಡಲಿದ್ದಾರೆ ಎಂದು ನೋಡಲು ಫ್ಯಾನ್ಸ್ ಕಾತುರರಾಗಿದ್ದಾರೆ.

**ವಿನೂ ಮಂಕಡ್ ಟ್ರೋಫಿಗೆ ದೆಹಲಿ ತಂಡ:** ಆರ್ಯವೀರ್ ಸೆಹ್ವಾಗ್ (ನಾಯಕ), ತನ್ಮಯ್ ಚೌಧರಿ, ಅರ್ನಾಬ್ ಬುಗ್ಗಾ (ಉಪನಾಯಕ), ಧನ್ಯಾ ನಕ್ರಾ, ಉದಯ್ ಚಾವ್ಲಾ, ಗರ್ವ್ ಕುಮಾರ್, ಅಭಿರಾಜ್ ಗಗನ್ ಸಿಂಗ್ (ವಿಕೆಟ್-ಕೀಪರ್), ತರುಣ್ ಸಿಂಗ್ (ವಿಕೆಟ್-ಕೀಪರ್), ಆರ್ಯನ್ ಶರ್ಮಾ, ಓಜಸ್ದೀಪ್ ಸಿಂಗ್, ಕಿರಿತ್ ಕೌಶಿಕ್, ವರುಣ್ ಬಂಜಾನಿ, ರುದ್ರ ದೇವ್ ಯಾದವ್, ಪ್ರದ್ಯುಮ್ನ ಸನನ್, ಪಾರ್ಥ್ ರಾಜ್, ಶಾಂತನು ಯಾದವ್.

# ಟೀಮ್ ಇಂಡಿಯಾ ಕ್ಯಾಪ್ಟನ್ ಆಗಿ ಭುವನೇಶ್ವರ್ ಕುಮಾರ್!

ಕಳೆದ ಕೆಲ ಸಮಯದಿಂದ ಭಾರತ ತಂಡಕ್ಕೆ ಕಮ್‌ಬ್ಯಾಕ್ ಮಾಡಲು ಪ್ರಯತ್ನಿಸು ತ್ತಿರುವ ಸ್ಟಾರ್ ವೇಗಿ ಭುವನೇಶ್ವರ್ ಕುಮಾರ್ ಅವರ ಫ್ಯಾನ್ಸ್‌ಗಳಿಗೆ ಒಳ್ಳೆಯ ಸುದ್ದಿ ಸಿಕ್ಕಿದೆ. ಅವರನ್ನು ತಂಡದ ನಾಯಕರನ್ನಾಗಿ ನೇಮಿಸಲಾಗಿದೆ. ಇದರೊಂದಿಗೆ ಭುವನೇಶ್ವರ್ ಟೀಮ್ ಇಂಡಿಯಾ ಜೆರ್ಸಿ ಧರಿಸಿ ಭಾರತ ತಂಡವನ್ನು ಮುನ್ನಡೆಸಲಿ ದ್ದಾರೆ. ಭುವನೇಶ್ವರ್ ನೇತೃತ್ವದ ಟೀಮ್ ಇಂಡಿಯಾ ಅಕ್ಟೋಬರ್ 30 ರಂದು ಕಣಕ್ಕೆ ಇಳಿಯಲು ಸಜ್ಜಾಗಿದೆ. ಹಾಗಾದರೆ ಈ ಪಂದ್ಯ ಯಾವುದು? ಟೀಮ್ ಇಂಡಿಯಾ ಎಲ್ಲಿ ಯಾರ ವಿರುದ್ಧ ಆಡುತ್ತದೆ ಎಂದು ಇದೀಗ ತಿಳಿಯೋಣ.



ವಾಸ್ತವಾಗಿ, 2026ರ ಋತುವಿನ ಹಾಂಗ್ ಕಾಂಗ್ ಸಿಕ್ಸಸ್ ಪಂದ್ಯಾವಳಿ ಈ ತಿಂಗಳ 30 ರಂದು ಪ್ರಾರಂಭವಾಗಲಿದೆ. ಪಂದ್ಯಾವಳಿ ನವೆಂಬರ್ 02 ರವರೆಗೆ ನಡೆಯಲಿದೆ. ಈ ಬಾರಿ ಈ ಪಂದ್ಯಾವಳಿಯಲ್ಲಿ 12 ದೇಶಗಳು ಸ್ಪರ್ಧಿಸುತ್ತಿವೆ. ಹಾಂಗ್ ಕಾಂಗ್ ಮಂಡಳಿಯು ಸೋಮವಾರ ಭಾರತೀಯ ತಂಡವನ್ನು ಪ್ರಕಟಿಸಿತು. ಹಾಂಗ್ ಕಾಂಗ್ ಸಿಕ್ಸಸ್ ಪಂದ್ಯಾವಳಿಯಲ್ಲಿ ಪ್ರತಿ ತಂಡವು ಕೇವಲ 6 ಆಟಗಾರರನ್ನು ಮಾತ್ರ ಹೊಂದಿರಲಿವೆ.

ಇದರೊಂದಿಗೆ, ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಏಳು ಆಟಗಾರರೊಂದಿಗೆ ಟೀಮ್ ಇಂಡಿಯಾ ತಂಡವನ್ನು ಆಯ್ಕೆ ಮಾಡಲಾಗಿದೆ. ಭುವನೇಶ್ವರ್ ಕುಮಾರ್ ಈ ತಂಡದ ನಾಯಕರಾಗಿದ್ದಾರೆ ಅವರೊಂದಿಗೆ, ಕೃನಾಲ್ ಪಾಂಡ್ಯ, ಶಶಾಂಕ್ ಸಿಂಗ್, ರಾಹುಲ್ ತೆವಾಟಿಯಾ, ನಿತೀಶ್ ರಾಣಾ, ರಾಹುಲ್ ತ್ರಿಪಾಠಿ ಮತ್ತು ಟಿ ನಟರಾಜನ್ ಸಹ ಸ್ಥಾನ ಪಡೆದಿದ್ದಾರೆ. ಶಶಾಂಕ್ ಹೊರತುಪಡಿಸಿ, ಈ ತಂಡದಲ್ಲಿರುವ ಉಳಿದವರೆಲ್ಲರೂ ಟೀಮ್ ಇಂಡಿಯಾವನ್ನು ಪ್ರತಿನಿಧಿಸಿದ್ದಾರೆ ಎಂಬುದು ಗಮನಾರ್ಹ.

ಈ ಸಂದರ್ಭದಲ್ಲಿ ಮಾತನಾಡಿದ ಚೀನಾದ ಹಾಂಗ್ ಕಾಂಗ್ ಕ್ರಿಕೆಟ್‌ನ ಮಾರ್ಕೆಟಿಂಗ್ ಮತ್ತು ವಾಣಿಜ್ಯ ನಿರ್ದೇಶಕ ಅನುರಾಗ್ ಭಟ್ನಾಗರ್, "ಹಾಂಗ್ ಕಾಂಗ್ ಸಿಕ್ಸಸ್ ಟೂರ್ನಿಗಾಗಿ ಬಲಿಷ್ಠ ಭಾರತ ತಂಡವನ್ನು ಆಯ್ಕೆ ಮಾಡುವಲ್ಲಿ ನಮಗೆ ಬೆಂಬಲ ನೀಡಿದ ಭಾರತೀಯ ಕ್ರಿಕೆಟ್ ಅಧಿಕಾರಿಗಳಿಗೆ ತುಂಬಾ ಕೃತಜ್ಞರಾಗಿರುತ್ತೇವೆ. ಈ ತಂಡಕ್ಕೆ ಪ್ರೇಕ್ಷಕರಿಂದ ಹೆಚ್ಚಿನ ಬೆಂಬಲ ಸಿಗಲಿದೆ ಎಂದು ನಂಬಿದ್ದೇವೆ. ಇದು ಖಂಡಿತವಾಗಿಯೂ ಒಂದು ಉತ್ತಮ ನಡೆಯಾಗಲಿದೆ. ಈ ಪ್ರತಿಷ್ಠಿತ ತಂಡವು ಪಂದ್ಯಾವಳಿಗೆ ಹೆಚ್ಚಿನ ಮನ್ನಣೆಯನ್ನು ನೀಡುತ್ತದೆ" ಎಂದು ಹೇಳಿದರು.

ಕಳೆದ ವರ್ಷ, ಟೀಮ್ ಇಂಡಿಯಾ ಮಾಜಿ ಕ್ರಿಕೆಟಿಗ ದಿನೇಶ್ ಕಾರ್ತಿಕ್ ನಾಯಕತ್ವದಲ್ಲಿ ಟೂರ್ನಿಗೆ ಪ್ರವೇಶಿಸಿತು. ಆ ಋತುವಿನಲ್ಲಿ ಟೀಮ್ ಇಂಡಿಯಾ ಪಾಕಿಸ್ತಾನ ವಿರುದ್ಧ ತನ್ನ ಮೊದಲ ಪಂದ್ಯವನ್ನು ಆಡಿತು. ಡಕ್ವರ್ತ್-ಲೂಯಿಸ್ ವಿಧಾನದ ಮೂಲಕ ಎರಡು ರನ್‌ಗಳಿಂದ ಗೆದ್ದಿತು. ಆದಾಗ್ಯೂ, ನಂತರ ಕುವೈತ್ ಮತ್ತು ಯುಎಇ ವಿರುದ್ಧದ ಪಂದ್ಯಗಳನ್ನು ಸೋತು ಟೂರ್ನಿಯಿಂದ ನಿರ್ಗಮಿಸಿತು. ಆ ಋತುವಿನಲ್ಲಿ ಪಾಕಿಸ್ತಾನ ಚಾಂಪಿಯನ್ ಆಗಿ ಹೊರಹೊಮ್ಮಿತು.

**ಪಂದ್ಯಾವಳಿಯ ಸ್ವರೂಪ ಹೇಗಿರಲಿದೆ?** ಹಾಂಗ್ ಕಾಂಗ್ ಸಿಕ್ಸಸ್ ಪಂದ್ಯಾವಳಿಯು ಸಾಮಾನ್ಯ ಕ್ರಿಕೆಟ್ ಪಂದ್ಯಕ್ಕಿಂತ ಭಿನ್ನವಾಗಿದೆ. ಇದರಲ್ಲಿ, ಪ್ರತಿ ತಂಡದಲ್ಲಿ ಕೇವಲ ಆರು ಆಟಗಾರರು ಮಾತ್ರ ಇರುತ್ತಾರೆ. ಪ್ರತಿ ತಂಡ 6 ಓವರ್‌ಗಳ ಪಂದ್ಯ ಮಾತ್ರ ಆಡಲಿದೆ. ಕೀಪರ್ ಹೊರತುಪಡಿಸಿ, ಫೀಲ್ಡಿಂಗ್ ತಂಡದ ಎಲ್ಲಾ ಆಟಗಾರರು ಒಂದು ಓವರ್ ಬೌಲ್ ಮಾಡಬೇಕು. ಒಬ್ಬ ಬೌಲರ್ ಮಾತ್ರ 2 ಓವರ್ ಬೌಲ್ ಮಾಡುವ ಅವಕಾಶವನ್ನು ಹೊಂದಿರುತ್ತಾರೆ.

ಬ್ಯಾಟಿಂಗ್ ವಿಷಯದಲ್ಲಿ ನೋಡುವುದಾದರೆ, ಯಾವುದೇ ಬ್ಯಾಟರ್ 31 ರನ್ ಗಳಿಸಿದರೆ, ಅವರು ನಿವೃತ್ತರಾಗಬೇಕು. ನಂತರ, ತಂಡದ ಉಳಿದವರು ಬ್ಯಾಟಿಂಗ್ ಮಾಡುತ್ತಾರೆ. ಇನ್ನಿಂಗ್ಸ್ ಮುಗಿಯುವ ಮೊದಲು 5 ವಿಕೆಟ್‌ಗಳು ಬಿದ್ದರೆ, ನಿವೃತ್ತ ಬ್ಯಾಟರ್ ಮತ್ತೆ ಬ್ಯಾಟಿಂಗ್‌ಗೆ ಬರುತ್ತಾನೆ. ನಂತರ, ಇನ್ನೊಂದು ತುದಿಯಲ್ಲಿ ಬೈ ರನ್ನರ್ ಅನ್ನು ಸಹ ಹೊಂದಬಹುರು ಮತ್ತು ಬ್ಯಾಟರ್ ಒಬ್ಬಂಟಿಯಾಗಿ ಬ್ಯಾಟಿಂಗ್ ಸಹ ಮಾಡಬಹುದು. ಇದರಲ್ಲಿ, ವೈಡ್ ಮತ್ತು ನೋ ಬಾಲ್‌ಗೆ ಪೆನಾಲ್ಟಿಯಾಗಿ 2 ರನ್‌ಗಳನ್ನು ನೀಡಲಾಗುತ್ತದೆ.

ಆದಾಗ್ಯೂ, ನೋ ಬಾಲ್‌ಗೆ ಫ್ರೀ ಹಿಟ್ ಇರಲ್ಲ. ಈ ಪಂದ್ಯಾವಳಿ ಕೇವಲ ಮೂರು ದಿನಗಳವರೆಗೆ ಇರುತ್ತದೆ. ವೇಗದ ಕ್ರಿಕೆಟ್ ಆಡುವುದು ಇದರ ಗುರಿಯಾಗಿದೆ. ಹಾಂಗ್ ಕಾಂಗ್‌ನ ಟಿನ್ ಕ್ವಾಂಗ್ ರಸ್ತೆ ಮನರಂಜನಾ ಮೈದಾನವು ಈ ಪಂದ್ಯಗಳನ್ನು ಆಯೋಜಿಸುತ್ತದೆ.

## ಬೆಂಗಳೂರಿನಲ್ಲಿ ಏಷ್ಯನ್ ಮಾಸ್ಟರ್ಸ್ ಈಜು ಚಾಂಪಿಯನ್‌ಶಿಪ್‌ಗೆ ವೈಭವದ ಚಾಲನೆ

ಬೆಂಗಳೂರಿನಲ್ಲಿ 2ನೇ ಆವೃತ್ತಿಯ ಏಷ್ಯನ್ ಮಾಸ್ಟರ್ಸ್ ಸ್ವಿಮ್ಮಿಂಗ್ ಚಾಂಪಿಯನ್‌ಶಿಪ್-2026 ಸಂಭ್ರಮದಿಂದ ಆರಂಭಗೊಂಡಿದೆ. ನಗರದ ಪಡುಕೋಣೆ-ದ್ರಾವಿಡ್ ಸೆಂಟರ್ ಫಾರ್ ಎಕ್ಸಲೆನ್ಸ್‌ನಲ್ಲಿ ಆಯೋಜಿಸಲಾಗಿರುವ ಈ ಪ್ರತಿಷ್ಠಿತ ಅಂತಾರಾಷ್ಟ್ರೀಯ ಕ್ರೀಡಾಕೂಟಕ್ಕೆ ಉಪಮುಖ್ಯಮಂತ್ರಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಡಾ.ಜಿ.ಪರಮೇಶ್ವರ್ ಅಧಿಕೃತವಾಗಿ ಚಾಲನೆ ನೀಡಿದರು.




ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಜಿ.ಪರಮೇಶ್ವರ್, ಕ್ರೀಡೆಯು ಜೀವನದಲ್ಲಿ ಗೆಲುವು ಮತ್ತು ಸೋಲನ್ನು ಸಮಾನ ಮನೋಭಾವದಿಂದ ಸ್ವೀಕರಿಸುವ ಮಹತ್ವದ ಪಾಠವನ್ನು ಕಲಿಸುತ್ತದೆ. ಕ್ರೀಡೆಯಲ್ಲಿ ಭಾಗವಹಿಸುವುದು ಕೇವಲ ಪದಕ ಗೆಲ್ಲುವುದಕ್ಕೆ ಸೀಮಿತವಾಗಿರದೆ ಶಿಸ್ತು, ಮಾನಸಿಕ ದೃಢತೆ ಹಾಗೂ ಹಿನ್ನಡೆಗಳನ್ನು ಸ್ವೀಕರಿಸಿ ಮುಂದುವರೆಯುವ ಮನೋಭಾವವನ್ನು ಬೆಳೆಸುತ್ತದೆ. ಗೆಲುವು ಮತ್ತು ಸೋಲು ಎರಡೂ ಜೀವನದ ಭಾಗವಾಗಿದ್ದು, ಸೋತಾಗಲೂ ಅದರಿಂದ ಕಲಿಯಬೇಕಾದ ಪಾಠವಿರುತ್ತದೆ. ಸೋಲನ್ನು ಸ್ವೀಕರಿಸಿ ಅದರಿಂದ ಪಾಠ ಕಲಿತು ಮುಂದುವರೆಯುವುದನ್ನು ಕ್ರೀಡೆ ಕಲಿಸುತ್ತದೆ. ಹೀಗಾಗಿ ಪ್ರತಿಯೊಬ್ಬ ಕ್ರೀಡಾಪಟುವೂ ಸಮಾನ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಇತ್ತೀಚೆಗೆ ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆದ್ದ ಭಾರತೀಯ ಕ್ರೀಡಾಪಟುಗಳನ್ನು ಅಭಿನಂದಿಸಿದ ಉಪಮುಖ್ಯಮಂತ್ರಿಗಳು, ಅವರ ಸಾಧನೆಯ ಹಿಂದೆ ತರಬೇತುದಾರರು, ಕೋಚ್‌ಗಳು ಮತ್ತು ವ್ಯವಸ್ಥಾಪಕರ ದೊಡ್ಡ ಪರಿಶ್ರಮವಿದೆ. ಭಾರತೀಯ ಕ್ರೀಡಾಪಟುಗಳು ಒಟ್ಟು 85 ಪದಕಗಳನ್ನು ಗೆದ್ದಿದ್ದು, ಅದರಲ್ಲಿ 21 ಚಿನ್ನದ ಪದಕಗಳಿವೆ. ಈ ಸಾಧನೆಯಲ್ಲಿ ಕರ್ನಾಟಕದ ಕ್ರೀಡಾಪಟುಗಳ ಕೊಡುಗೆಯೂ ಮಹತ್ವದ್ದಾಗಿದೆ. ರಾಜ್ಯ ಸರ್ಕಾರವು ಕ್ರೀಡಾ ಸಾಧನೆಯನ್ನು ಉತ್ತೇಜಿಸಲು ಬದ್ಧವಾಗಿದ್ದು, ಪದಕ ವಿಜೇತ ಕ್ರೀಡಾಪಟುಗಳಿಗೆ ನೀಡಲಾಗುವ ಬಹುಮಾನದ ಮೊತ್ತವನ್ನು ಹೆಚ್ಚಿಸಲಾಗಿದೆ ಎಂದು ತಿಳಿಸಿದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news